ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 9 ಭಾನುವಾರ 2023

ಸಂಪುಟ: 43 | ಸಂಚಿಕೆ: 349 | ಪುಟಗಳು: 12

₹ 4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಶುರುವಾಯ್ತಾ 'ಮೈತ್ರಿ' ಮಾತುಕತೆ!?

■ ರಾಹುಲ್‌ಗಾಂಧಿ ರಾಯಭಾರಿಯಾಗಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯೊಂದಿಗೆ ಚುನಾವಣಾ ಮಾಂತ್ರಿಕ ಸುನೀಲ್ ಕನ್ನೋಳ್ ಸುದೀರ್ಘ ಮಾತುಕತೆ ■ ರಾಜ್ಯ ರಾಜಕೀಯದಲ್ಲಿ ಅಚ್ಚರಿಯ ಬೆಳವಣಿಗೆ

ಬೆಂಗಳೂರು, ಏ.8(ಕೆಎಂಶಿ)–ವಿಧಾನ ಸಭಾ ಚುನಾವಣೆಗೆ ಮುನ್ನವೇ 'ಮೈತ್ರಿ' ಸರ್ಕಾರ ರಚನೆ ಮಾತುಕತೆ ನಡೆಯುತ್ತಿದೆಯೇ...! ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆಪ್ತ ಹಾಗೂ ಚುನಾವಣಾ ಮಾಂತ್ರಿಕನೆಂದೇ ಕರೆಯುವ ಸುನೀಲ್ ಕನ್ನೋಳ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಸುದೀರ್ಘ ಮಾತುಕತೆ ನಡೆಸಿರುವುದು ಹಲವು ಊಹಾಪೋಹಗಳಿಗೆ ಎಡೆಮಾಡಿಕೊಟ್ಟಿದೆ.

ಕಳೆದ ಸೋಮವಾರ ಜೆಪಿ ನಗರದ ನಿವಾಸದಲ್ಲಿ ಕನ್ನೋಳ್, ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಎರಡು ಗಂಟೆಗೂ ಹೆಚ್ಚು ಕಾಲ ಭವಿಷ್ಯದ ಸರ್ಕಾರ ರಚನೆ ಬಗ್ಗೆ ಮಾತನಾಡಿದ್ದಾರೆ. ರಾಹುಲ್ ಅವರ ಸಲಹೆ ಮೇರೆಗೆ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ ಕನ್ನೋಳ್, ಪ್ರಸಕ್ತ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಬರುವುದು ಕಷ್ಟ, ನಾನು ಸೇರಿದಂತೆ ವಿವಿಧ ಚುನಾವಣಾ ಪೂರ್ವ ಸಮೀಕ್ಷೆಯ ವರದಿಗಳು ಇದನ್ನು ಸ್ಪಷ್ಟಪಡಿಸಿವೆ.



ಸುನೀಲ್ ಕನ್ನೋಳ್



ಕುಮಾರಸ್ವಾಮಿ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್, ಸರ್ಕಾರ ರಚನೆಯಲ್ಲಿ ಹೇಗೆ ಪ್ರಮುಖ ಪಾತ್ರ ವಹಿಸಿತ್ತೋ ಅದೇ ಪರಿಸ್ಥಿತಿ ಮರುಕಳಿಸುತ್ತಿದೆ. ನೀವು ಯಾವುದೇ ಕಾರಣಕ್ಕೂ ಬಿಜೆಪಿ ಜತೆ ಸಖ್ಯ ಬೆಳೆಸಬೇಡಿ.

ರಾಷ್ಟ್ರಮಟ್ಟದಲ್ಲಿ ರಾಹುಲ್ ಗಾಂಧಿಯವರು ಆ ಪಕ್ಷದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಅದಕ್ಕೆ ನಿಮ್ಮ ಬೆಂಬಲದ ನಿರೀಕ್ಷೆಯಲ್ಲಿದ್ದಾರೆ. ರಾಜ್ಯದ 224 ಕ್ಷೇತ್ರಗಳ ಪಕ್ಷಗಳ ಬಲಾಬಲಗಳ ಬಗ್ಗೆಯೂ ಕುಮಾರಸ್ವಾಮಿ ಮುಂದೆ ಎಳೆ ಎಳೆಯಾಗಿ ಬಿಡಿಸಿಟ್ಟ ಕನ್ನೋಳ್, ಸದ್ಯದ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿದ್ದಾರೆ.

ಚುನಾವಣೆಯಲ್ಲಿ ನಿಮಗೆ ಪರೋಕ್ಷವಾಗಿ ಕೆಲವೆಡೆ ಪಕ್ಷ ಬೆಂಬಲ ನೀಡಲಿದೆ. ಈ ಮಾಹಿತಿ ರಾಜ್ಯದ ನಾಯಕರಿಗೆ ತಲುಪಿರಬಹುದೆಂಬ ಅನಿಸಿಕೆ ನನ್ನದು. ಕಳೆದ ಬಾರಿ ಸರ್ಕಾರ ರಚನೆಯ ಸಂದರ್ಭದಲ್ಲಿ ಕೆಲ ಲೋಪಗಳಾಗಿವೆ. ಅದು ಮತ್ತೆ ಮರುಕಳಿಸುವುದಿಲ್ಲ ರಾಹುಲ್ ನನಗೆ ಈಗಿನ ಚುನಾವಣಾ ತಂತ್ರಗಾರಿಕೆ ● 9ನೇ ಪುಟಕ್ಕೆ

ಜೆಡಿಎಸ್ ಅಧಿಕಾರಕ್ಕೆ ಬಂದರೆ ವಿದ್ಯಾರ್ಥಿನಿಯರಿಗೆ ಎಲೆಕ್ಟ್ರಿಕ್ ಸ್ಕೂಟರ್, 5 ಸಿಲಿಂಡರ್ ಉಚಿತ ವಿತರಣೆ

ಹಾಸನದ ಟಿಕೆಟ್ ಸ್ವರೂಪ್‌ಗೆ: ಕುಮಾರಸ್ವಾಮಿ

ಬೆಂಗಳೂರು, ಏ. 8 (ಕೆಎಂಶಿ)–ಜೆಡಿಎಸ್ ಅಧಿಕಾರಕ್ಕೆ ಬಂದರೆ ವಿದ್ಯಾರ್ಥಿನಿಯರಿಗೆ ಉಚಿತ ಎಲೆಕ್ಟ್ರಿಕ್ ದ್ವಿಚಕ್ರ ವಾಹನ ನೀಡುವುದಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ಘೋಷಣೆ ಮಾಡಿದ್ದಾರೆ. ಯಶವಂತಪುರ ವಿಧಾನ ಸಭಾ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರದ ವೇಳೆ ಈ ಘೋಷಣೆ ಮಾಡಿರುವ ಕುಮಾರಸ್ವಾಮಿ ಅವರು, ಈಗಾಗಲೇ ಪ್ರಕಟಿಸಿರುವ ಪಂಚ ಯೋಜನೆಗಳ ಜೊತೆಗೆ ಹೊಸ ಭರವಸೆ ಘೋಷಣೆ ಮಾಡಿದರು. ಅಷ್ಟೇ ಅಲ್ಲ, ನಾವು ಅಧಿಕಾರಕ್ಕೆ ಬಂದರೆ ವರ್ಷಕ್ಕೆ ಐದು ಅಡುಗೆ ಅನಿಲ ಸಿಲಿಂಡರ್ ಉಚಿತವಾಗಿ ನೀಡುತ್ತೇವೆ ಎಂದರು. ಬಡ ಹೆಣ್ಣು ಮಕ್ಕಳ ಕಣ್ಣೀರಿಗೆ ಶಾಶ್ವತ ಪರಿಹಾರ ನೀಡಲು ಹತ್ತು ಹಲವಾರು ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ತಿಳಿಸಿದರು. ಹಾಸನ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಾರ್ಯಕರ್ತರು ಮಾಡಿದ ಮನವಿಗೆ ತಕ್ಷಣವೇ ಸ್ಪಂದಿಸಿದ ಕುಮಾರಸ್ವಾಮಿ, ಸ್ವರೂಪ್ ಅವರಿಗೆ ಆ ಕ್ಷೇತ್ರದಲ್ಲಿ ಟಿಕೆಟ್ ನೀಡುವುದಾಗಿ ಘೋಷಣೆ ಮಾಡಿದರು.

ಬೊಮ್ಮಾಯಿ ಸಂಪುಟದ ಕೆಲ ಸಚಿವರು, ಹಾಲಿ ಶಾಸಕರಿಗೆ ಟಿಕೆಟ್ ಕೈತಪ್ಪುವ ಸಾಧ್ಯತೆ

ಬಿಜೆಪಿ ವರಿಷ್ಠರ ನಿರ್ಧಾರದಿಂದ ಆಕಾಂಕ್ಷಿಗಳಲ್ಲಿ ಆತಂಕ

ಬೆಂಗಳೂರು, ಏ. 8(ಕೆಎಂಶಿ)–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದ ಕೆಲ ಸಚಿವರು, ಹಾಲಿ ಶಾಸಕರಿಗೆ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನೀಡದಿರಲು ಬಿಜೆಪಿ ವರಿಷ್ಠರು ನಿರ್ಧರಿಸಿದ್ದಾರೆ. ಸಮೀಕ್ಷಾ ವರದಿ ಹಾಗೂ ವಿವಿಧ ಕಾರಣಗಳನ್ನು ಮುಂದೊಡ್ಡಿ ಹಾಲಿ ಕೆಲವು ಶಾಸಕರಿಗೆ ಕೊಕ್ ನೀಡಿ, ಹೊಸ ಮುಖಗಳಿಗೆ ಅವಕಾಶ ಕಲ್ಪಿಸಲು ಪಕ್ಷ ತೀರ್ಮಾನಿಸಿದೆ. ದೆಹಲಿಯಲ್ಲಿ ನಾಳೆ ಸಂಜೆ ಪಕ್ಷದ ಸಂಸದೀಯ ಮಂಡಳಿ ಸಭೆ ಸೇರಿ ಶೇ.50ರಿಂದ 60ರಷ್ಟು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ನಾಳೆ ಸಂಜೆ ಇಲ್ಲವೇ ಸೋಮವಾರ ಬೆಳಿಗ್ಗೆ ಪಟ್ಟಿ ಬಿಡುಗಡೆ ಗೊಳ್ಳಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರು ಜಿಲ್ಲಾ ಪ್ರವಾಸದಿಂದ ಹಿಂತಿರುಗಿದ ನಂತರ ಈ ಉನ್ನತ ಮಟ್ಟದ ● 9ನೇ ಪುಟಕ್ಕೆ

ಮೈಸೂರಲ್ಲಿ ಪ್ರಧಾನಿ ಮೋದಿ

ಬೆಳ್ಳಂಬೆಳಗ್ಗೆ ಬಂಡೀಪುರಕ್ಕೆ ಪ್ರಯಾಣ

ಮೈಸೂರು, ಏ.8(ಆರ್‌ಕೆ)–ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ರಾತ್ರಿ 9 ಗಂಟೆಗೆ ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸಿದರು.

ಭಾರತೀಯ ವಾಯುಸೇನಾ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಮಂತ್ರಿಗಳನ್ನು ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್, ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಖಾತೆ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ಹೂಗುಚ್ಛ ನೀಡಿ ಸ್ವಾಗತಿಸಿದರು. ನಂತರ ಕಾರಿನಲ್ಲಿ ರಸ್ತೆ ಮೂಲಕ ಭಾರೀ ಭದ್ರತೆಯ ಬೆಂಗಾವಲಲ್ಲಿ ರಾತ್ರಿ 9.15 ಗಂಟೆಗೆ ಮೈಸೂರಿನ ಎಂ.ಜಿ. ರಸ್ತೆಯ ಹೋಟೆಲ್ ರ್‍ಯಾಡಿಸನ್ ಬ್ಲೂ ಪ್ಲಾಜಾಗೆ ಆಗಮಿಸಿದ ಪ್ರಧಾನಿಗಳು, ಇಲ್ಲಿಯೇ ವಾಸ್ತವ್ಯ ಹೂಡಿದ್ದಾರೆ. ಪ್ರಧಾನಮಂತ್ರಿಗಳು ವಾಸ್ತವ್ಯ ಹೂಡಿರುವ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಎಸ್‌ಪಿಜಿ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಭಾರೀ ಬಿಗಿ ಪೊಲೀಸ್ ಭದ್ರತೆ ಮಾಡಲಾಗಿದೆ.

ಪ್ರಧಾನಿಗಳ ಆಗಮನದ ಹಿನ್ನೆಲೆಯಲ್ಲಿ ಇಂದು ಮಧ್ಯಾಹ್ನ 3ರಿಂದ ರಾತ್ರಿ 10 ಗಂಟೆವರೆಗೆ ಕಡಕೊಳದಿಂದ ಮೈಸೂರು ನಗರದವರೆಗೆ ಸಾರ್ವಜನಿಕರ ವಾಹನ ಸಂಚಾರ ನಿರ್ಬಂಧಿಸಿ ಕಟ್ಟೆಚ್ಚರ ವಹಿಸಲಾಗಿತ್ತು. ನಾಳೆ (ಏ. 9) ಬೆಳಗ್ಗೆ 6.20ಕ್ಕೆ ರ್‍ಯಾಡಿಸನ್ ಬ್ಲೂ ಹೋಟೆಲ್‌ನಿಂದ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಕಾರಿನಲ್ಲಿ ತೆರಳುವ ನರೇಂದ್ರ ಮೋದಿ, ಬೆಳಗ್ಗೆ 6.30 ಗಂಟೆಗೆ ವಿಶೇಷ ಹೆಲಿಕಾಪ್ಟರ್‌ನಲ್ಲಿ ಹೊರಟು ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕಿನ ಮೇಲುಕಾಮನಹಳ್ಳಿ ತಾತ್ಕಾಲಿಕ ಹೆಲಿಪ್ಯಾಡ್‌ಗೆ ಬೆಳಗ್ಗೆ 7 ಗಂಟೆಗೆ ತಲುಪುವರು. ಅಲ್ಲಿಂದ ಕಾರಿನಲ್ಲಿ ಬೆಳಗ್ಗೆ 7.15 ಗಂಟೆಗೆ ಬಂಡೀಪುರ ಹುಲಿ ಮೀಸಲು ಅರಣ್ಯ ಸ್ವಾಗತ ಕೇಂದ್ರ ತಲುಪಿ, ಬೆಳಗ್ಗೆ 9.30 ಗಂಟೆವರೆಗೆ ಸಫಾರಿ ಹೋಗಲಿರುವ ಪ್ರಧಾನಿಗಳು, ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ತಮಿಳುನಾಡಿನ ತೆಪ್ಪಕಾಡು ತಾತ್ಕಾಲಿಕ ಹೆಲಿಪ್ಯಾಡ್‌ಗೆ ತಲುಪಿ ಮದುಮಲೈ ಹುಲಿ ಮೀಸಲು ಅರಣ್ಯದಲ್ಲಿ ಆಸ್ಕರ್ ಪ್ರಶಸ್ತಿ ವಿಜೇತ 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರದಲ್ಲಿ ಬಳಸಿಕೊಳ್ಳಲಾಗಿರುವ ಆನೆಗಳನ್ನು ಸಲಹಿದ ಬೊಮ್ಮ ಮತ್ತು ಬೆಳ್ಳಿ ದಂಪತಿಯನ್ನು ನರೇಂದ್ರ ಮೋದಿ ಅಭಿನಂದಿಸುವರು. ನಂತರ ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಬೆಳಗ್ಗೆ 10.30 ಗಂಟೆಗೆ ● 9ನೇ ಪುಟಕ್ಕೆ



ಮೈಸೂರಿಗೆ ಶನಿವಾರ ರಾತ್ರಿ ವಾಯುಸೇನಾ ವಿಶೇಷ ವಿಮಾನದಲ್ಲಿ ಆಗಮಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್, ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಖಾತೆ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ಹೂಗುಚ್ಛ ನೀಡಿ, ಸ್ವಾಗತಿಸಿದರು.

ಇಂದು ಹಲವೆಡೆ ವಾಹನ ಸಂಚಾರಕ್ಕೆ ನಿರ್ಬಂಧ; ಬದಲಿ ಮಾರ್ಗ

ಮೈಸೂರು, ಏ.8(ಆರ್‌ಕೆ)–ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸಿರುವ ಹಿನ್ನೆಲೆಯಲ್ಲಿ ಅವರು ಸಾಗುವ ರಸ್ತೆಗಳಲ್ಲಿ ಸಾರ್ವಜನಿಕರ ವಾಹನ ಸಂಚಾರ ನಿರ್ಬಂಧಿಸಲಾಗಿದ್ದು, ಇಂತಹ ಕಡೆ ಬದಲಿ ಮಾರ್ಗ ಕಲ್ಪಿಸಲಾಗಿದೆ. ಏಪ್ರಿಲ್ 9ರಂದು ಮುಂಜಾನೆ 3ರಿಂದ ಬೆಳಗ್ಗೆ 7 ಗಂಟೆವರೆಗೆ ನಂಜನಗೂಡು ರಿಂಗ್ ರಸ್ತೆ ಜಂಕ್ಷನ್‌ನಿಂದ ಎಲೆತೋಟ ಜಂಕ್ಷನ್, ರಾಜಹಂಸ ಜಂಕ್ಷನ್, ಗನ್‌ಹೌಸ್ ಜಂಕ್ಷನ್‌ವರೆಗೆ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಹಾಗೆಯೇ ನಂಜನಗೂಡು ರಸ್ತೆಯ ರಾಜಹಂಸ ಜಂಕ್ಷನ್‌ನಿಂದ ಮಹಾರಾಣಾ ಪ್ರತಾಪ್ ಸಿಂಹ ವೃತ್ತದವರೆಗೆ ಸಾರ್ವಜನಿಕ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ. ನಂಜನಗೂಡಿನಿಂದ ಮೈಸೂರಿಗೆ ಬರುವ ವಾಹನಗಳು ಕಡಕೊಳ, ದಡದಹಳ್ಳಿ, ರಮಾಬಾಯಿನಗರ, ಶ್ರೀರಾಂಪುರ ಬಳಿ ರಿಂಗ್ ರಸ್ತೆ ಮೂಲಕ ಮುಂದೆ ಸಾಗಬೇಕು. ● 9ನೇ ಪುಟಕ್ಕೆ

ಬಂಡೀಪುರದಲ್ಲಿ ಇಂದು ಪ್ರಧಾನಿ ಮೋದಿ ಸಫಾರಿ

ಅರಣ್ಯ ರಮ್ಯ ದೃಶ್ಯ, ವನ್ಯಜೀವಿಗಳ ವೀಕ್ಷಣೆ





ಚಾಮರಾಜನಗರ, ಏ.8(ಎಸ್‌ಎಸ್)–ಹುಲಿ ಯೋಜನೆ ಘೋಷಣೆಯಾಗಿ 50 ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಅರಣ್ಯ ಪ್ರದೇಶಕ್ಕೆ ಭಾನುವಾರ ಬೆಳಗ್ಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಲಿದ್ದಾರೆ. ಸುಮಾರು ಎರಡು ಗಂಟೆಗಳ ಕಾಲ ಸಫಾರಿ ನಡೆಸಿ, ಅರಣ್ಯವನ್ನು ವೀಕ್ಷಣೆ ಮಾಡಲಿದ್ದಾರೆ.

ಮೈಸೂರಿನ ಹೆಲಿಪ್ಯಾಡ್‌ನಿಂದ ಬೆಳಗ್ಗೆ 7 ಗಂಟೆ ಸುಮಾರಿಗೆ ಗುಂಡ್ಲುಪೇಟೆಯ ಮೇಲುಕಾಮನಹಳ್ಳಿಯ ಸಫಾರಿ ಕೇಂದ್ರದ ಬಳಿ ನಿರ್ಮಿಸಿರುವ ಹೆಲಿಪ್ಯಾಡ್‌ಗೆ ಆಗಮಿಸಲಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಅಲ್ಲಿಂದ ಸುಮಾರು ಐದರಿಂದ ಆರು ಕಿ.ಮೀ. ದೂರ ರಸ್ತೆ ಮಾರ್ಗದಲ್ಲಿ ಕಾರಿನಲ್ಲಿ ಸಂಚರಿಸಿ 7.15ಕ್ಕೆ ಬಂಡೀಪುರ ಕ್ಯಾಂಪ್‌ಗೆ ಭೇಟಿ ನೀಡುವರು. ನಂತರ ಬಂಡೀಪುರ ಅರಣ್ಯದಲ್ಲಿ ಸಫಾರಿ ತೆರಳುವರು.

ಸುಮಾರು ಎರಡು ಗಂಟೆಗಳ ಕಾಲ ಅಂದರೆ ಬೆಳಗ್ಗೆ 9.15ರವರೆಗೆ ಸಫಾರಿ ನಡೆಸಿ ಅರಣ್ಯದ ಸೊಬಗು ಹಾಗೂ ವನ್ಯಜೀವಿಗಳ ವೀಕ್ಷಿಸಲಿದ್ದಾರೆ. ತದನಂತರ 9.35ಕ್ಕೆ ರಸ್ತೆ ಮಾರ್ಗದ ಮೂಲಕ ನೆರೆಯ ತಮಿಳುನಾಡಿನ ಮದುಮಲೆ ಹುಲಿ ಸಂರಕ್ಷಿತ ಪ್ರದೇಶದ ತೆಪ್ಪಕಾಡು ಆನೆ ಶಿಬಿರಕ್ಕೆ ಮೋದಿ ಭೇಟಿ ನೀಡುವರು. ಈ ವೇಳೆ ಆಸ್ಕರ್ ಪ್ರಶಸ್ತಿ ವಿಜೇತ ಸಾಕ್ಷ್ಯಚಿತ್ರ 'ದಿ ಎಲಿಫೆಂಟ್ ವಿಸ್ಪರರ್ಸ್'ನ ಪ್ರಮುಖ ಪಾತ್ರಧಾರಿಗಳಾದ ಕಾವಾಡಿ ದಂಪತಿ ಬೊಮ್ಮ ಮತ್ತು ಬೆಳ್ಳಿ ಅವರನ್ನು ಭೇಟಿ ಮಾಡಿ ಅಭಿನಂದಿಸಲಿದ್ದಾರೆ. ● 9ನೇ ಪುಟಕ್ಕೆ

ನಿಮ್ಮ ನಿಮ್ಮ ತೆವಲು ತೀರಿಸಿಕೊಳ್ಳಲು ನಮ್ಮನ್ನು ಬಲಿ ಕೊಡಬೇಡಿ...!

ಅಮೂಲ್ ಆಹ್ವಾನಿಸಿ 'ನಂದಿನಿ'ಗೆ ದ್ರೋಹವೆಸಗುವವರ ವಿರುದ್ಧ ಹಾಲು ಉತ್ಪಾದಕರು, ಬಳಕೆದಾರರ ಆಕ್ರೋಶ



ಮೈಸೂರು, ಏ.8(ಎಸ್‌ಬಿಡಿ)–ರಾಜ್ಯ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ ಹೊಸ್ತಿಲಲ್ಲಿ ಅಮೂಲ್–ನಂದಿನಿ ವಿವಾದ ಮತ್ತಷ್ಟು ಜೋರಾಗಿದ್ದು, ಇದು ಜನಾಕ್ರೋಶಕ್ಕೂ ಕಾರಣವಾಗಿದೆ.

ಗುಜರಾತ್‌ನ 'ಅಮೂಲ್' ಒಕ್ಕೂಟದ ಹಾಲು ಹಾಗೂ ಅದರ ಉತ್ಪನ್ನಗಳ ಮಾರಾಟವನ್ನು ರಾಜ್ಯದಲ್ಲಿ ವಿಸ್ತರಿಸುವ ಕಾರ್ಯ ಬಿರುಸಾಗಿದ್ದು, ಇದನ್ನು ಖಂಡಿಸಿ ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷದವರು ಆಡಳಿತಾರೂಢ ಬಿಜೆಪಿ ವಿರುದ್ಧ ಮುಗಿಬಿದ್ದಿದ್ದಾರೆ. ಮೊಸರು ಪ್ಯಾಕೆಟ್‌ನಲ್ಲಿ ಹಿಂದಿಯ ದಹಿ(ಇಂಗ್ಲಿಷ್‌ನಲ್ಲಿ) ಪದ ಬಳಸಿ, ಆಕ್ಷೇಪ ವ್ಯಕ್ತವಾದ ಬಳಿಕ ತೆರವು ಮಾಡಿದ್ದು, ಆನ್‌ಲೈನ್ ಆರ್ಡರ್ ಮೂಲಕ ಅಮೂಲ್ ಹಾಲು, ಮೊಸರು ಮಾರಾಟಕ್ಕೆ ಮುಂದಾಗಿರುವುದು, 'ಅಮೂಲ್' ಒಕ್ಕೂಟಕ್ಕೆ ಕೆಂಪುಹಾಸು ಹಾಕಿದ್ದಾರೆಂಬ ಆರೋಪವನ್ನು ಪುಷ್ಟೀಕರಿಸಿದೆ. ಆದರೆ ಬಿಜೆಪಿ ನಾಯಕರು ಆರೋಪವನ್ನು ಅಲ್ಲಗಳೆದು, ನಂದಿನಿ ಬ್ರ್ಯಾಂಡ್ ಅನ್ನು ಕೊಂಡಾಡಿದ್ದಾರೆ. ಈ ಬೆಳವಣಿಗೆ ಬಗ್ಗೆ ಸ್ಥಳೀಯ ಹಾಲು ಉತ್ಪಾದಕರು ಹಾಗೂ ಬಳಕೆದಾರರೂ ಕಂಗಾಲಾಗಿದ್ದು, ನಿಮ್ಮ ತೆವಲಿಗೆ ನಮ್ಮನ್ನು ಬಲಿ ಕೊಡಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಂಗಳೂರು ಮಹಾನಗರದಲ್ಲಿ ಮಾರಾಟ ವಿಸ್ತರಿಸುತ್ತಿರುವ ಅಮೂಲ್, ಆನ್‌ಲೈನ್ ಆರ್ಡರ್ ಮೂಲಕ ಹಾಲು ಮತ್ತು ಮೊಸರನ್ನು ಮನೆ ಬಾಗಿಲಿಗೆ ತಲುಪಿಸಲು ಮುಂದಾಗಿದೆ. ಸದ್ಯ ಮೈಸೂರಿನಂತಹ ನಗರಗಳತ್ತ ಗಮನಹರಿಸಿಲ್ಲ. ಆದರೂ ವಿವಾದದ ಬಿಸಿ ಹೈನುಗಾರಿಕೆ ನಂಬಿರುವ ಜಿಲ್ಲೆಯ ರೈತರಲ್ಲೂ ಆತಂಕ ಸೃಷ್ಟಿಸಿದೆ. ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ(ಮೈಮುಲ್), ಜಿಲ್ಲೆಯ ಲಕ್ಷಾಂತರ ರೈತರ ಹೈನುಗಾರಿಕೆಗೆ ಬೆನ್ನೆಲುಬಾಗಿ ನಿಂತಿದೆ. ● 6ನೇ ಪುಟಕ್ಕೆ

ಕೆಎಂಎಫ್ ನಿರ್ಧಾರಕ್ಕೆ ಬದ್ಧ

"ಮೈಸೂರು ಭಾಗದಲ್ಲಿ ಅಮೂಲ್ ಹಾಲು–ಮೊಸರು ಮಾರಾಟವಾಗುತ್ತಿಲ್ಲ. ಬೆಂಗಳೂರಿನಲ್ಲಿ ಮಾರಾಟ ಆರಂಭಿಸುತ್ತಿದ್ದಾರೆ. ಆದರೆ ಆಳವಾಗಿ ಬೇರೂರಿರುವ ನಂದಿನಿ ಬ್ರ್ಯಾಂಡ್ ಅನ್ನು ಯಾರೂ ಅಲ್ಲಾಡಿಸಲು ಸಾಧ್ಯವಿಲ್ಲ. ನಂದಿನಿ ಬ್ರ್ಯಾಂಡ್ ಜೊತೆಗೆ ನಾಡಿನ ರೈತರ ಹಿತದೃಷ್ಟಿಯಿಂದ ಅಮೂಲ್ ಮಾರಾಟ ನಿಯಂತ್ರಣ ಸಂಬಂಧ ಕೆಎಂಎಫ್ ಅಧ್ಯಕ್ಷರು ಕೈಗೊಳ್ಳುವ ನಿರ್ಧಾರವನ್ನು ಎಲ್ಲಾ ಜಿಲ್ಲಾ ಒಕ್ಕೂಟಗಳ ಅಧ್ಯಕ್ಷರು ಹಾಗೂ ನಿರ್ದೇಶಕರು ಬೆಂಬಲಿಸಲು ಸಿದ್ಧರಿದ್ದೇವೆ.

–ಪಿ.ಎಂ.ಪ್ರಸನ್ನ, ಮೈಮುಲ್ ಅಧ್ಯಕ್ಷರು

ಉತ್ಪಾದನೆ, ಜೊತೆಗೆ ಬೇಡಿಕೆ ಹೆಚ್ಚಾಗಿದೆ

"ಕಳೆದ 15 ದಿನಗಳಲ್ಲಿ 30–35 ಸಾವಿರ ಲೀಟರ್ ಹಾಲು ಉತ್ಪಾದನೆ ಜಾಸ್ತಿಯಾಗಿದೆ. ಸದ್ಯ 1184 ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ದಿನವಹಿ 6.85 ಲಕ್ಷ ಲೀಟರ್ ಹಾಲು ಖರೀದಿಸಲಾಗುತ್ತಿದೆ. ಹಾಗೆಯೇ ಮೈಮುಲ್‌ನಿಂದ 2.80 ಲಕ್ಷ ಲೀಟರ್ ಹಾಲು ಹಾಗೂ 75–80 ಸಾವಿರ ಲೀಟರ್ ಮೊಸರು ಮಾರಾಟ ಮಾಡಲಾಗುತ್ತಿದೆ. 35–40 ಸಾವಿರ ಪ್ಯಾಕೆಟ್ ಮಜ್ಜಿಗೆ, 20–25 ಸಾವಿರ ಪ್ಯಾಕೆಟ್ ಲಸ್ಸಿ ಮಾರಾಟವಾಗುತ್ತಿವೆ. ಹಾಲು ಉತ್ಪಾದಕರಿಂದ ಲೀಟರ್‌ಗೆ 33 ರೂ. ನೀಡಿ ಖರೀದಿಸಲಾಗುತ್ತಿತ್ತು. ಸರ್ಕಾರದಿಂದಲೂ ಅವರಿಗೆ 5 ರೂ. ಪ್ರೋತ್ಸಾಹ ಧನ ಸಿಗುತ್ತಿದೆ. ಕಳೆದ ವರ್ಷಕ್ಕಿಂತ ಉತ್ಪಾದನೆಯಲ್ಲಿ ಶೇ.10–17 ಹಾಗೂ ಮಾರಾಟದಲ್ಲಿ ಶೇ.7–8ರಷ್ಟು ಹೆಚ್ಚಾಗಿದೆ.

–ಬಿ.ಎನ್.ವಿಜಯ್‌ಕುಮಾರ್, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ

ನಾಳೆಯಿಂದ 'ಬೆಳ್ಳಿ ಬೆರಗು ಮೈಸೂರಿನ ಕೊಡುಗೆ'

ಮೈಸೂರು,ಏ.8–ಮೈಸೂರು ಆಕಾಶವಾಣಿಯಿಂದ 3 ವರ್ಷಗಳ ಹಿಂದೆ ಪ್ರಸಾರವಾಗಿದ್ದ 'ಬೆಳ್ಳಿ ಬೆರಗು ಮೈಸೂರಿನ ಕೊಡುಗೆ' ಮತ್ತೆ ಏ.10ರಿಂದ ಮೇ 15ರವರೆಗೆ ಪ್ರಸಾರವಾಗಲಿದೆ. ಏಪ್ರಿಲ್ 10ರಿಂದ ಮೇ 15ರವರೆಗೆ ಪ್ರತಿ ಸೋಮವಾರ ಬೆಳಗ್ಗೆ 9.30ಕ್ಕೆ ಪ್ರಸಾರವಾಗಲಿದೆ. ಕನ್ನಡ ಸಿನಿಮಾ ರಂಗಕ್ಕೆ ಮೈಸೂರಿನ ಕೊಡುಗೆ ಕುರಿತು 20 ಕಂತುಗಳಲ್ಲಿ ಈ ಕಾರ್ಯಕ್ರಮ 2020ರಲ್ಲಿ ಪ್ರಸಾರವಾಗಿತ್ತು. ಏ.10ರಂದು ಬೆಳಗ್ಗೆ 9.30ಕ್ಕೆ ನಟ, ನಿರ್ಮಾಪಕ ದ್ವಾರಕೀಶ್ ಕುರಿತು ಪ್ರಸಾರವಾಗಲಿದೆ. ಲೇಖಕ ಗಣೇಶ ಅಮೀನಗಡ ಅವರ ಲೇಖನವನ್ನು ತಮ್ಮ ವಿಶಿಷ್ಟವಾದ ಧ್ವನಿಯ ಮೂಲಕ ನಿರೂಪಿಸಿ, ಈ ಕಾರ್ಯಕ್ರಮ ಜನಪ್ರಿಯಗೊಳಿಸಿದವರು ಮೈಸೂರು ಆಕಾಶವಾಣಿಯ ಜಿ.ಎನ್.ಮಂಜುನಾಥ. ಈ ಕಾರ್ಯಕ್ರಮವನ್ನು airmysorelive ಮೂಲಕ ನಿಮ್ಮ ಮೊಬೈಲ್ ಫೋನಿನಲ್ಲೂ ಕೇಳಬಹುದು.

ತಾಳ್ಮೆ, ಪರಿಶ್ರಮದಿಂದ ವಕೀಲರು ಯಶಸ್ಸು ಗಳಿಸಬಹುದು

●ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಕಿವಿಮಾತು ●ಜೆಎಸ್ಎಸ್ ಕಾನೂನು ಕಾಲೇಜಲ್ಲಿ ರಾಷ್ಟ್ರೀಯ ಅಣಕು ನ್ಯಾಯಾಲಯ ಸಮಾರಂಭದಲ್ಲಿ ಭಾಗಿ





ಮೈಸೂರಿನ ಜೆಎಸ್ಎಸ್ ಕಾನೂನು ಕಾಲೇಜಿನಲ್ಲಿ ಚೆನ್ನೈನ ಸುರಾನ ಮತ್ತು ಸುರಾನ ಅಂತಾರಾಷ್ಟ್ರೀಯ ಕಾನೂನು ಸಂಸ್ಥೆಯ(ಎಸ್ಎಸ್ಐಎ) ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 20ನೇ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧಾ ಕಾರ್ಯಕ್ರಮವನ್ನು ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಉದ್ಘಾಟಿಸಿದರು.

ಮೈಸೂರು,ಏ.8(ಎಂಟಿವೈ)– ವಕೀಲ ವೃತ್ತಿ ಹೂವಿನ ಹಾಸಿಗೆಯಾಗಿರದೆ ಮುಳ್ಳಿನ ದಾರಿಯಾಗಿದ್ದು, ತಾಳ್ಮೆ ಮತ್ತು ಪರಿಶ್ರಮದಿಂದ ಏಳ್ಗೆ ಸಾಧಿಸಬಹುದು ಎಂದು ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಅಭಿಪ್ರಾಯಪಟ್ಟರು.

ಮೈಸೂರಿನ ಕುವೆಂಪುನಗರದ ಜೆಎಸ್ಎಸ್ ಕಾನೂನು ಕಾಲೇಜಿನಲ್ಲಿ ಚೆನ್ನೈನ ಸುರಾನ ಮತ್ತು ಸುರಾನ ಅಂತಾರಾಷ್ಟ್ರೀಯ ಕಾನೂನು ಸಂಸ್ಥೆಯ (ಎಸ್ಎಸ್ಐಎ) ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 20ನೇ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಕೀಲರಾಗಲು ಬಯಸುವವರಿಗೆ ಬಹುಮುಖ್ಯವಾಗಿ ತಾಳ್ಮೆಬೇಕಿದ್ದು, ವಕೀಲ ವೃತ್ತಿ ಸುಲಭವಾಗಿರುತ್ತದೆ ಎಂದು ಭಾವಿಸಬಾರದು. ಅದು ಸವಾಲಿನ ಮುಳ್ಳಿನ ಹಾದಿಯಾಗಿರುತ್ತದೆ. ಅದರೂ ಪರಿಶ್ರಮದಿಂದ ಏಳ್ಗೆ ಹೊಂದಬಹುದು ಎಂದರು.

ವಕೀಲರು ಪ್ರಾಮಾಣಿಕತೆ, ಧೈರ್ಯ, ಶ್ರಮಶೀಲರಾಗಿರಬೇಕು. ಅಲ್ಲದೆ, ವೃತ್ತಿಗೆ ಬೇಕಾದ ಬುದ್ಧಿವಂತಿಕೆ, ವಾಕ್ಚಾತುರ್ಯ, ತೀರ್ಪುಗಳ ಅಧ್ಯಯನ ಮತ್ತು ಸಹಭಾಗಿತ್ವವನ್ನು ಹೊಂದಿರಬೇಕು. ಸನ್ಯಾಸಿಯಂತೆಯೂ ಬದುಕಬೇಕು. ಕುದುರೆಯಂತೆ ಚಾಣಾಕ್ಷತೆ ಇರಬೇಕು. ಆದರೆ, ಪ್ರಸ್ತುತ ಸಂದರ್ಭದಲ್ಲಿ ಸನ್ಯಾಸಿಯಂತೆ ಬದುಕುವುದನ್ನು ಮರೆತು ಹಣದ ಹಿಂದೆ ಬಿದ್ದಿದ್ದು, ಜನರಿಗೆ ಸೇವೆ ನೀಡುವಲ್ಲಿ ವಿಫಲರಾಗಿದ್ದೇವೆ ಎಂದು ವಿಷಾದಿಸಿದರು.

ವಕೀಲರು ಬಡವರಿಗೆ ಕಡಿಮೆ ವೆಚ್ಚದಲ್ಲಿ ನ್ಯಾಯದಾನ ಮಾಡಬೇಕೆಂಬುದು ಮಹಾತ್ಮಗಾಂಧೀಜಿಯವರು ಆಶಯವಾಗಿತ್ತು. ಈ ರೀತಿ ಸೇವೆಯನ್ನು ಬಡವರಿಗೆ ನೀಡಲಾಗುತ್ತಿದೆಯೇ ಎಂದು ವಕೀಲರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಯುವ ವಕೀಲರು ದೇಶದ ಚರಿತ್ರೆಯನ್ನು ಅರಿತುಕೊಳ್ಳಬೇಕು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಸಾಕಷ್ಟು ವಕೀಲರು ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ್ದಾರೆ. ಸ್ವಾತಂತ್ರ್ಯದ ನಂತರ ವಕೀಲರು ತಮ್ಮ ವೃತ್ತಿಯನ್ನು ತೊರೆದು ಸಂವಿಧಾನ ರಚನೆಯಲ್ಲಿ ತಮ್ಮ ಸಮಯ ಮತ್ತು ಜೀವನವನ್ನೇ ಕಳೆದರು. ಡಾ.ರಾಜೇಂದ್ರ ಪ್ರಸಾದ್, ಡಾ.ಬಿ.ಆರ್.ಅಂಬೇಡ್ಕರ್ ನೇತೃತ್ವದಲ್ಲಿ ಸಂವಿಧಾನ ರಚನೆಗೆ ರಚನಾ ಸಮಿತಿಯಲ್ಲಿ 398 ಮಂದಿ ಶ್ರಮಿಸಿದ್ದಾರೆ ಎಂದು ಸ್ಮರಿಸಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದವರು ಬಹುಪಾಲು ವಕೀಲರು. ಮಹಾತ್ಮ ಗಾಂಧಿ, ನೆಹರು, ಬಾಲಗಂಗಾಧರ ತಿಲಕ್, ಪಂಡಿತ್ ಮದನ್ ಮೋಹನ್ ಮಾಳವೀಯ, ಸಿ.ರಾಜಗೋಪಾಲಾಚಾರಿ ಮುಂತಾದವರು ದೇಶಕ್ಕಾಗಿ ಅವಿರತ ಸೇವೆ ಸಲ್ಲಿಸಿದ ನ್ಯಾಯವಾದಿಗಳು, ಇವರ ಸೇವೆಯ ಕಾರಣದಿಂದಾಗಿ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಮತ್ತು ಅತ್ಯುತ್ತಮ ಸಂವಿಧಾನ ಹೊಂದಲು ಸಾಧ್ಯವಾಗಿದೆ ಎಂದು ಹೇಳಿದರು.

30 ಕಾಲೇಜು ಭಾಗಿ: ಸ್ಪರ್ಧೆಯಲ್ಲಿ ಸುಮಾರು 30 ಪ್ರತಿಷ್ಠಿತ ಕಾನೂನು ಕಾಲೇಜುಗಳು ಭಾಗವಹಿಸಿವೆ. ಕಂಪನಿ ವ್ಯವಹಾರ, ಅಂತಾರಾಷ್ಟ್ರೀಯ ತೆರಿಗೆ ವಿಷಯದಲ್ಲಿ ಸ್ಪರ್ಧಿಗಳು ತಮ್ಮ ಪ್ರತಿಭೆ ಪ್ರದರ್ಶಿಸಲಿದ್ದಾರೆ. ರಾಜ್ಯದ ಪರಿಣಿತ ಲೆಕ್ಕಪರಿಶೋಧಕರು, ನ್ಯಾಯಾಧೀಶರು, ಕಂಪನಿ ಸೆಕ್ರೆಟರಿಗಳು, ವಕೀಲರು ಸ್ಪರ್ಧೆಯಲ್ಲಿ ನ್ಯಾಯಾಧೀಶರಾಗಿ ಭಾಗವಹಿಸಲಿದ್ದಾರೆ ಏ.9ರಂದು ಅಂತಿಮ ಸ್ಪರ್ಧೆ ನಡೆಯಲಿದೆ.

ಕಾರ್ಯಕ್ರಮದಲ್ಲಿ ಎಸ್ಎಸ್ಐಎನ ಮುಖ್ಯ ಆಡಳಿತಾಧಿಕಾರಿ ಪ್ರೀತಮ್ ಸುರಾನ, ಕಾಲೇಜಿನ ಮುಖ್ಯಕಾರ್ಯ ನಿರ್ವಾಹಕ ಕೆ.ಎಸ್.ಸುರೇಶ್, ಪ್ರಾಂಶುಪಾಲ ಡಾ.ಎಸ್.ನಟರಾಜು ಪಾಲ್ಗೊಂಡಿದ್ದರು.

ಚಾಮುಂಡೇಶ್ವರಿಯಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾದ ಮುಖಂಡರು



ಮೈಸೂರು, ಏ.8– ಚಾಮುಂಡೇಶ್ವರಿ ಕ್ಷೇತ್ರದ ಶ್ರೀರಾಂಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರಮೇಶ್, ಟ್ಯೂಬ್ ಮಹದೇವ್, ಗ್ರಾ.ಪಂ. ಮಾಜಿ ಸದಸ್ಯರಾದ ಪ್ರಕಾಶ್, ಶಿವು, ಸೋಮಣ್ಣ, ಮುಖಂಡರಾದ ಜೇಸುದಾಸ್, ಮರಿಸ್ವಾಮಿ, ನಯಾಜ್, ಸಿದ್ದಪ್ಪಾಜಿ ಇನ್ನಿತರರು ಜೆಡಿಎಸ್ ತೊರೆದು ಕಾಂಗ್ರೆಸ್ ಅಭ್ಯರ್ಥಿ ಎಸ್.ಸಿದ್ದೇಗೌಡರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡ ಮಾತನಾಡಿ, ಜೆಡಿಎಸ್ ಪಕ್ಷದವರ ಸ್ವಾರ್ಥ ರಾಜಕಾರಣದಿಂದ ಬೇಸತ್ತು ನೂರಾರು ಜನರು ಕಾಂಗ್ರೆಸ್ ಪಕ್ಷವನ್ನು ಸೇರುತ್ತಿರುವುದನ್ನು ನೋಡಿದರೆ ಈ ಬಾರಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಖಚಿತ ಎಂದರು. ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಮುಖಂಡರಾದ ಕೃಷ್ಣಕುಮಾರ್ ಸಾಗರ್, ಗಡ್ಡಬಸಪ್ಪ ಇನ್ನಿತರರು ಹಾಜರಿದ್ದರು.



ಶಿವಾಜಿ ಮಹಾರಾಜರ ಜಯಂತಿ ಪ್ರಯುಕ್ತ ಮೈಸೂರಿನ ಛತ್ರಪತಿ ಕೋ–ಆಪರೇಟಿವ್ ಸೊಸೈಟಿಯಲ್ಲಿ ಛತ್ರಪತಿ ಶಿವಾಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಆಚರಿಸಲಾಯಿತು. ಈ ವೇಳೆ ಸೊಸೈಟಿ ಅಧ್ಯಕ್ಷ ಗೋಪಾಲ, ಸಂಘದ ನಿರ್ದೇಶಕರು ಇದ್ದರು.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಕೆ.ಉಮಾಶಂಕರ್ ಹುಟ್ಟುಹಬ್ಬವನ್ನು ಪಡುವಾರಹಳ್ಳಿಯಲ್ಲಿ ಆಚರಿಸಲಾಯಿತು. ಈ ವೇಳೆ ಎಲ್.ಚೌಡಪ್ಪ, ಪಡುವಾರಹಳ್ಳಿಯ ಗ್ರಾಮಾಭ್ಯುದಯ ಟ್ರಸ್ಟ್ ಕಾರ್ಯದರ್ಶಿ ಭೈರಪ್ಪ, ರಾಮಣ್ಣ, ಸ್ವಾಮಣ್ಣ, ಬೋರೇಗೌಡ, ಚೆಲುವರಾಜು, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕರಾದ ಸಿ.ಡಿ.ಕುಮಾರ್, ರಾಘವ್ ಗೌಡ, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಬಿ.ಶಿವು, ಮಂಚೇಗೌಡನಕೊಪ್ಪಲು ಪುನಿತ್, ಚಿರು, ಯತಿ, ಕಾಂತಾ, ಪ್ರಕಾಶ್ ಇತರರಿದ್ದರು.

ಬಸವ ಜಯಂತಿ; ಇಂದು ಪೂರ್ವಭಾವಿ ಸಭೆ



ಮೈಸೂರು, ಏ.8–'ಬಸವ ಜಯಂತಿ–2023'ರ ಕಾರ್ಯಕ್ರಮದ ದಿನಾಂಕ ನಿಗದಿ, ಅರ್ಥಪೂರ್ಣವಾಗಿ ಆಚರಿಸಲು ಏ.9ರಂದು ಮಧ್ಯಾಹ್ನ 3ಕ್ಕೆ ಪೂರ್ವಭಾವಿ ಸಭೆ ಕರೆಯಲಾಗಿದ್ದು, ಎಲ್ಲಾ ಲಿಂಗಾಯತ ಮತ್ತು ಬಸವಪರ ಸಂಘಟನೆಗಳು ಅಭಿಮಾನಿಗಳು ಭಾಗವಹಿಸಿ ಸೂಕ್ತ ಸಲಹೆ–ಸೂಚನೆಗಳನ್ನು ನೀಡುವಂತೆ ಬಸವ ಜಯಂತ್ಯುತ್ಸವ ಆಚರಣಾ ಸಮಿತಿ ಸಂಚಾಲಕ ಶರಣ ಮಹದೇವಪ್ಪ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ವಿಶ್ವ ಆರೋಗ್ಯ ದಿನಾಚರಣೆ



ಮೈಸೂರು,ಏ.8(ಎಸ್‌ಪಿಎನ್)– ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆ ಆವರಣದಲ್ಲಿ ಸುಯೋಗ್ ಆಸ್ಪತ್ರೆ ಮತ್ತು ಸುಯೋಗ್ ಕಾಲೇಜ್ ಆಫ್ ನರ್ಸಿಂಗ್ ಸಹಯೋಗದೊಂದಿಗೆ 'ವಿಶ್ವ ಆರೋಗ್ಯ ದಿನಾಚರಣೆ'ಯನ್ನು ಹಿರಿಯ ಕವಯತ್ರಿ ಡಾ.ಲತಾ ರಾಜಶೇಖರ್ ನೇತೃತ್ವದಲ್ಲಿ ಆಚರಿಸಲಾಯಿತು.

ನಂತರ ಮಾತನಾಡಿದ ಹಿರಿಯ ಕವಯತ್ರಿ ಡಾ.ಲತಾ ರಾಜಶೇಖರ್, ತಮ್ಮ ತಮ್ಮ ಆರೋಗ್ಯ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ವೈದ್ಯರ ಸಲಹೆಯಂತೆ ಆಹಾರ, ದೈಹಿಕ ವ್ಯಾಯಾಮ, ಮಾನಸಿಕ ನೆಮ್ಮದಿ ಕಾಪಾಡಿಕೊಳ್ಳುವುದರಿಂದ ಆರೋಗ್ಯವನ್ನು ವೃದ್ಧಿಸಿಕೊಳ್ಳಬಹುದು ಎಂದು ಹೇಳಿದರು.

ಮೈಸೂರು ವೈದ್ಯಕೀಯ ಸಂಘದ ಅಧ್ಯಕ್ಷರೂ ಆದ ಚರ್ಮರೋಗ ತಜ್ಞರಾದ ಡಾ.ವೈ.ಎಂ.ಶಿವಕುಮಾರ್ ಅವರು, 'ವಿಶ್ವ ಆರೋಗ್ಯ ದಿನ'ದ ಕುರಿತು ಮಾತನಾಡಿದರು. ಈ ವೇಳೆ ಸುಯೋಗ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ವೈದ್ಯಕೀಯ ನಿರ್ದೇಶಕ ಡಾ.ಆರ್. ರಾಜೇಂದ್ರ ಪ್ರಸಾದ್, ಡಾ.ರಾಜಶೇಖರ್, ಮುಡಾ ಮಾಜಿ ಆಯುಕ್ತ ಸಿ.ಜಯಣ್ಣ ಉಪಸ್ಥಿತರಿದ್ದರು.

ಇಂದಿನಿಂದ ನಮ್ಮೀ ತಾಯ್ನೆಲ ಚಿಣ್ಣರ ಮೇಳ

ಮೈಸೂರು,ಏ.8–ರಂಗಾಯಣದ ವತಿಯಿಂದ 'ನಮ್ಮೀ ತಾಯ್ನೆಲ' ಚಿಣ್ಣರ ಮೇಳ ಮಕ್ಕಳ ಬೇಸಿಗೆ ಶಿಬಿರವನ್ನು ಏ.9ರಿಂದ ಮೇ 5ರವರೆಗೆ ರಂಗಾಯಣದ ಆವರಣದಲ್ಲಿ ಆಯೋಜಿಸಲಾಗಿದೆ. ನಾಳೆ ಸಂಜೆ 4.30ಕ್ಕೆ ವನರಂಗದ ಬಯಲು ರಂಗಮಂದಿರದಲ್ಲಿ ಏರ್ಪಡಿಸಿರುವ ಶಿಬಿರವನ್ನು ಕಲಾವಿದ ವಾಸುಕಿ ವೈಭವ್ ಉದ್ಘಾಟಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎನ್.ಮಂಜುಳ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಭಾರತೀಯ ಅತೀ ಕಿರಿಯ ವುಶು (ಸಮರಕಲೆ) ಚಾಂಪಿಯನ್ ಕು.ಜಿ. ಪ್ರಣತಿ, ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಭಾಗವಹಿಸುವರು.

ನಿಧನ



ಅನುಸೂಯಮ್ಮ

ಮೈಸೂರು, ಏ.8– ಮೈಸೂರಿನ ಸರಸ್ವತಿಪುರಂ ನಿವಾಸಿ, ಶ್ರೀ ಯೋಗಿ ನಾರೇಯಣ ಬಣಜಿಗ /ಬಲಿಜ ಸಂಘದ ನಿಲಯ ಪಾಲಕರಾಗಿದ್ದ ಲೇಟ್ ಸಂಜೀವ ಶೆಟ್ಟಿ ಅವರ ಪತ್ನಿ ಶ್ರೀಮತಿ ಅನುಸೂಯಮ್ಮ ಅವರು ಶನಿವಾರ ಮಧ್ಯಾಹ್ನ ನಿಧನರಾದರು. ಮೃತರ ಅಂತ್ಯಕ್ರಿಯೆಯನ್ನು ನಾಳೆ (ಭಾನುವಾರ) ಬೆಳಗ್ಗೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್ಚಾಗುತ್ತಿರುವ ರಾಜಕಾರಣಿಗಳ ದ್ವೇಷ ಭಾಷಣ

'ಯುಗಾದಿ ಕಾವ್ಯ ಮೇಳ'ದಲ್ಲಿ ಹಿರಿಯ ಸಾಹಿತಿ ಡಾ.ಸಿಪಿಕೆ ಆತಂಕ



ಮೈಸೂರು, ಏ.8–ನಮ್ಮ ಕನ್ನಡ ನಾಡು ಸರ್ವಜನಾಂಗದ ಶಾಂತಿಯ ತೋಟ. ಇದನ್ನು ಕುವೆಂಪು ತಮ್ಮ ಕಾವ್ಯದಲ್ಲಿ ಪ್ರತಿಪಾದಿಸಿದ್ದಾರೆ. ಪ್ರಸ್ತುತ ರಾಜಕಾರಣಿಗಳು ದ್ವೇಷ ಭಾಷಣಗಳಿಂದ ಶಾಂತಿ, ಸಾಮರಸ್ಯ, ಸೌಹಾರ್ದತೆಗೆ ಧಕ್ಕೆಯಾಗುತ್ತಿದೆ ಎಂದು ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಆತಂಕ ವ್ಯಕ್ತಪಡಿಸಿದರು.

ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಸ್ಮಯ ಪ್ರಕಾಶನದ ಸಂಯುಕ್ತ ಆಶ್ರಯದಲ್ಲಿ ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ನಡೆದ ರಾಜ್ಯ ಮಟ್ಟದ 'ಯುಗಾದಿ ಕಾವ್ಯ ಮೇಳ' ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜಮುಖಿ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಬದುಕಿನಲ್ಲಿ ರಾಗದ್ವೇಷಗಳು ಹಾಸುಹೊಕ್ಕಾಗಿವೆ. ಇದರಲ್ಲಿ ರಾಗವಿರಬೇಕೇ ಹೊರತು, ದ್ವೇಷವಲ್ಲ. ಹಾಗೆಯೇ ಸಮಾಜದಲ್ಲಿ ಭಾಷಣ ಸರಿ, ಆದರೆ ದ್ವೇಷ ಏಕೆ ಎಂದು ಪ್ರಶ್ನಿಸಿದ ಸಿಪಿಕೆ, ನಾವು ಬೆಳೆಯಬೇಕಿರುವುದು ವಿಷೋದ್ಯಾನವನ್ನಲ್ಲ; ಅಮೃತೋದ್ಯಾನವನ್ನು. ಆದ್ದರಿಂದ ಕಾವ್ಯ ಶಾಂತಿ ಮತ್ತು ಸಾಮರಸ್ಯ ಮೂಡಿಸುವ ಕೆಲಸ ಮಾಡಬೇಕು. ಅಮೃತತ್ವದೆಡೆಗೆ ಕರೆದೊಯ್ಯಬೇಕು ಎಂದು ಆಶಿಸಿದರು.

ರಾಜಕೀಯದಲ್ಲಿ ಬೇಕಾದಷ್ಟು ವ್ಯಾಜ್ಯಗಳಿವೆ. ಆದರೆ ಕಾವ್ಯಕ್ಕೆ ಇದ್ಯಾವುದೂ ಇಲ್ಲ. ಇಂತಹ ಕಾವ್ಯಕ್ಕೆ ಮುಪ್ಪಿಲ್ಲ, ಸಾವಿಲ್ಲ. ಇದು ಅನಂತವಾದದ್ದು. ದಶದಿಕ್ಕಿಗೂ ಹರಡಿದೆ. ದುರ್ಗುಣಗಳನ್ನು ನಾಶ ಮಾಡುವ ಶಕ್ತಿ ಹೊಂದಿರುವ ಕಾವ್ಯ ದ್ವೇಷವನ್ನು ಕೆರಳಿಸದೆ, ಮಾನಸಿಕ ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನು ತಂದುಕೊಡಬೇಕು. ಜನರಲ್ಲಿ ಸಾಂಸ್ಕೃತಿಕ ಹಸಿವನ್ನು ಸಾಹಿತ್ಯ ಬೆಳೆಸಬೇಕು. ಇದು ಕವಿಕಾವ್ಯದ ಜವಾಬ್ದಾರಿ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ವಿಸ್ಮಯ ಪ್ರಕಾಶನದ ಹಾಲತಿ ಲೋಕೇಶ್, ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಉಪಾಧ್ಯಕ್ಷ ಕೆ.ಎಸ್.ಸತೀಶ್‌ಕುಮಾರ್, ಹುಣಸೂರು ತಾಲೂಕು ಘಟಕದ ಅಧ್ಯಕ್ಷ ಟಿ.ಲೋಕೇಶ್, ಪತ್ರಿಕಾ ಕಾರ್ಯದರ್ಶಿ ಚಂದ್ರು ಮಂಡ್ಯ, ಕನ್ನಡ ಸಹಾಯಕ ಪ್ರಾಧ್ಯಾಪಕಿ ಡಾ.ಡಿ.ಕೆ.ಉಷಾ ಇನ್ನಿತರರು ಉಪಸ್ಥಿತರಿದ್ದರು.

ಹಿರಿಯ ಕವಯಿತ್ರಿ ಡಾ. ಲತಾ ರಾಜಶೇಖರ್ ಅವರು ವಿವಿಧ ಕ್ಷೇತ್ರದ ಹಿರಿಯ ಸಾಧಕರಾದ ಮಂಡ್ಯದ ಲೇಖಕಿ ಎಸ್. ಗುಣಸಾಗರಿ ನಾಗರಾಜು, ತುಮಕೂರಿನ ಪ್ರಾಧ್ಯಾಪಕ ಪ್ರೊ. ಬಿ.ಆರ್.ರಾಮಚಂದ್ರಯ್ಯ, ವಿಸ್ಮಯ ವಿಜೇತ ಮಾಸ ಪತ್ರಿಕೆ ಸಂಪಾದಕ ಹಾಸನದ ಎಸ್.ಕೆ.ಶಿವಕುಮಾರ್, ಬೆಂಗಳೂರಿನ ಸಮಾಜ ಸೇವಕಿ ಕೆ.ಆರ್.ಪ್ರಭಾವತಿ ಮತ್ತು ಸಾಂಸ್ಕೃತಿಕ ಸಂಘಟಕ ಕುವರ ಯಲ್ಲಪ್ಪ, ಶಿವಾಜಿನಗರ ಪೊಲೀಸ್ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಎಸ್.ಡಿ. ಲಕ್ಷ್ಮೀನರಸಿಂಹ ಅವರಿಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜಮುಖಿ ಪ್ರಶಸ್ತಿ' ಪ್ರದಾನ ಮಾಡಿದರು.

ಗ್ರಾಹಕರಿಗೆ ಶುದ್ಧ ಚಿನ್ನದ ಖಾತರಿ

MALABAR
GOLD & DIAMONDS

ಮೈಸೂರು,ಏ.8–ಮದುವೆ ಅಥವಾ ಇತರ ವಿಶೇಷ ಸಮಾರಂಭಗಳಲ್ಲಿ ಉಡುಗೊರೆ ನೀಡುವುದು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಉಡುಗೊರೆ ನೀಡುವವರೂ, ಅದನ್ನು ಸ್ವೀಕರಿಸುವವರೂ ಈ ಪ್ರಕ್ರಿಯೆಗೆ ಹೆಚ್ಚಿನ ಮೌಲ್ಯ ಮತ್ತು ಪಾವಿತ್ರ್ಯತೆಯನ್ನು ನೀಡುತ್ತಾರೆ. ಮತ್ತು ಇಂದಿನ ಪೀಳಿಗೆಯ ಶುಭ ಸಮಾರಂಭಗಳಲ್ಲಿ ಚಿನ್ನವನ್ನು ಅಮೂಲ್ಯ ಉಡುಗೊರೆಯಾಗಿ ನೀಡಲು ಹೆಚ್ಚು ಇಷ್ಟಪಡುತ್ತಾರೆ.

ಇದೇ ಏಪ್ರಿಲ್ 1ರಿಂದ HUID (ಹಾಲ್ ಮಾರ್ಕ್ ಅನನ್ಯ ಗುರುತು) ಸಂಖ್ಯೆ ಇಲ್ಲದ ಚಿನ್ನದ ಆಭರಣಗಳ ಮಾರಾಟವನ್ನು ಅನುಮತಿಸದಿರುವ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ನಿರ್ಧಾರದ ಬದಲಾವಣೆಯ ಕ್ಷಣವಾಗಿದೆ. ಇಲ್ಲಿ ಚಿನ್ನವನ್ನು ಮಾರಾಟ ಮಾಡುವ ವಿಧಾನವನ್ನು ಇದು ಸುಧಾರಿಸುತ್ತದೆ. ಈ ಸುಧಾರಣೆಯ ದೊಡ್ಡ ಪ್ರಯೋಜನವೆಂದರೆ ಗ್ರಾಹಕರು ಶುದ್ಧ ಚಿನ್ನವನ್ನು ಪಡೆಯುತ್ತಾರೆ ಎಂದು ಖಚಿತಪಡಿಸುತ್ತದೆ. ಗ್ರಾಹಕರ ಹಿತಾಸಕ್ತಿಯ HUID ಮೂಲಕ ಸಂಪೂರ್ಣವಾಗಿ ಸಂರಕ್ಷಿಸಲ್ಪಟ್ಟಿದೆ. ಪರಿಶುದ್ಧತೆಗೆ ಸಾಕ್ಷಿಯಾಗಲು ಅಸ್ಸೇಯಿಂಗ್ ಮತ್ತು ಹಾಲ್ ಮಾರ್ಕಿಂಗ್ ಕೇಂದ್ರಗಳಲ್ಲಿ ಪ್ರತಿ ಆಭರಣದ ಮೇಲೆ ಮುದ್ರೆ ಹಾಕಲಾಗುತ್ತದೆ.

ಈ ಸುಧಾರಣೆಯ ಭಾಗವಾಗಿ ಪ್ರತಿ ಆಭರಣದ ಮೇಲೆ BIS ಲೋಗೋ, ಶುದ್ಧತೆಯನ್ನು ಸೂಚಿಸುವ ಚಿನ್ನದ ಕ್ಯಾರೆಟ್ ಮಟ್ಟ ಮತ್ತು ಆರು ಅಂಕೆಗಳ ಕೋಡ್ ಇರುತ್ತದೆ. ಗ್ರಾಹಕರು BIS ಕೇರ್ ಎಂಬ ಅಧಿಕೃತ ಮೊಬೈಲ್ ಅಪ್ಲಿಕೇಶನ್‌ನ ಸಹಾಯದಿಂದ ಗ್ರಾಹಕರು ಹಾಲ್ ಮಾರ್ಕಿಂಗ್ ದಿನಾಂಕ, ಹಾಲ್ ಮಾರ್ಕಿಂಗ್ ಕೇಂದ್ರದ ಹೆಸರು ಮತ್ತು ಆಭರಣದ ಹಿನ್ನೆಲೆ ಸೇರಿದಂತೆ ಇನ್ನಿತರ ವಿವರಗಳನ್ನು ಪಡೆಯಲಿದ್ದಾರೆ. ಈ ಎಲ್ಲಾ ಮಾಹಿತಿಗಳು ಗ್ರಾಹಕರನ್ನು ಯಾವುದೇ ವಂಚನೆಗೆ ಒಳಗಾಗುವುದಿಲ್ಲ ಎಂಬುದನ್ನು ಖಚಿತಪಡಿಸುತ್ತದೆ. BIS ಹಾಲ್ ಮಾರ್ಕಿಂಗ್ ಕಳೆದ 23 ವರ್ಷಗಳಿಂದ ಜಾರಿಯಲ್ಲಿದೆ ಮತ್ತು ಜೂನ್ 2021 ರಲ್ಲಿ ಕೇಂದ್ರವು ಪ್ರಸ್ತುತ HUID ವ್ಯವಸ್ಥೆಯನ್ನು ಆರಂಭಿಸಿದೆ. ಅಂದರೆ, ಈ ಹೊಸ ಸುಧಾರಣೆಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಮತ್ತು ಅದನ್ನು ಜಾರಿಗೆ ತರಲು ಆಭರಣ ವ್ಯಾಪಾರಿಗಳಿಗೆ 21 ತಿಂಗಳ ಕಾಲಾವಕಾಶ ನೀಡಿದೆ. ಮಲಬಾರ್ ಗೋಲ್ಡ್ & ಡೈಮಂಡ್ಸ್ 2000ರಲ್ಲಿ ವ್ಯವಸ್ಥೆಯನ್ನು ಆರಂಭಿಸಿದಾಗಿನಿಂದ BIS ಹಾಲ್‌ಮಾರ್ಕ್ ಹೊಂದಿರುವ ಆಭರಣಗಳನ್ನು ಮಾತ್ರ ಮಾರಾಟ ಮಾಡುತ್ತಿದೆ. ಈಗ ಹೊಸ ಸುಧಾರಣೆಯೊಂದಿಗೆ ಮಲಬಾರ್ ಗ್ರೂಪ್ HUID ಕೋಡ್ ಅನ್ನು ಹೊಂದಿರುವ ಆಭರಣಗಳನ್ನು ಮಾತ್ರ ತನ್ನೆಲ್ಲಾ ಶೋರೂಂಗಳಲ್ಲಿ ಮಾರಾಟ ಮಾಡುವುದನ್ನು ಏಪ್ರಿಲ್ 1, 2023 ರಿಂದ ಜಾರಿಗೊಳಿಸಿದೆ ಎಂದು ಮಲಬಾರ್ ರುಬಿ ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.4.2023 ಭಾನುವಾರ, ಮಳೆ ನಕ್ಷತ್ರ: ರೇವತಿ, 31.03.2023 ರಿಂದ 13.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ವಿಶಾಖ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ವ್ಯವಸ್ಥಾಪಕರು:** ಪವಿತ್ರ ತಿಪಿಟಕ ಗ್ರಂಥಾಲಯ–ಕ್ವಾಂಟಮ್ ಪಬ್ಲಿಕೇಷನ್ಸ್ ಉದ್ಘಾಟನಾ ಸಮಾರಂಭ, ಸ್ಥಳ: 76, ಶ್ರೀರಂಗ ಎನ್‌ಕ್ಲೇವ್, ಜಲಮಹಲ್ ರೆಸಾರ್ಟ್ ಹತ್ತಿರ, ವಾಜಮಂಗಲ, ಬೆಳಗ್ಗೆ 10.30ಕ್ಕೆ.

■ **ವಿದ್ಯಾರಣ್ಯ ಟ್ರಸ್ಟ್, ವಿದ್ಯಾರಣ್ಯ ಕೋಚಿಂಗ್ ಸೆಂಟರ್ :** 10ನೇ ವರ್ಷದ ವಾರ್ಷಿಕೋತ್ಸವ, ಉದ್ಘಾಟನೆ : ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಮುಖ್ಯ ಅತಿಥಿಗಳು : ಮೈಸೂರು ನಗರ ಪಾಲಿಕೆ ಸದಸ್ಯ ಎಂ.ವಿ. ರಾಮಪ್ರಸಾದ್, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಮನೋರೋಗ ತಜ್ಞ ಡಾ. ರೇಖಾ ಮನಃಶಾಂತಿ, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಸಮಾಜ ಸೇವಕ ಚಕ್ರಪಾಣಿ, ಸೆಂಟರ್ ನಿರ್ದೇಶಕ ಡಾ. ಬಿ.ವಿ. ರವಿಶಂಕರ್, ಸ್ಥಳ: ವಿದ್ಯಾರಣ್ಯ ಕೋಚಿಂಗ್ ಸೆಂಟರ್ ಆವರಣ, ವಿದ್ಯಾರಣ್ಯಪುರಂ, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ :** ಸೀತಾ ಸತೀಶ್ ಅವರ ತೇಲಿದ ದೋಣಿ ಕೃತಿ ಲೋಕಾರ್ಪಣೆ ಸಮಾರಂಭ, ಕಾದಂಬರಿ ಬಿಡುಗಡೆ: ಡಾ.ವಿಜಯಲಕ್ಷ್ಮಿ ಐ.ಬಾಳೇಕುಂದ್ರಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಕಾದಂಬರಿ ಕುರಿತು: ಲೇಖಕ ಜಿ.ಎಲ್.ತ್ರಿಪುರಾಂತಕ, ವಿಶೇಷ ಆಹ್ವಾನಿತರು: ಪ್ರಾಧ್ಯಾಪಕ ಡಾ.ಗುರುಬಸವರಾಜ, ಉಪಸ್ಥಿತರು: ಸೀತಾ ಸತೀಶ್, ಡಿ.ಎನ್.ಲೋಕಪ್ಪ, ಸ್ಥಳ: ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಬೆಳಗ್ಗೆ 11ಕ್ಕೆ.

■ **ಬಸವ ಜಯಂತ್ಯುತ್ಸವ ಆಚರಣಾ ಸಮಿತಿ :** ಬಸವ ಜಯಂತಿ ಕಾರ್ಯಕ್ರಮದ ಅಂಗವಾಗಿ ಪೂರ್ವಭಾವಿ ಸಭೆ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಸ್ಥಳ: ಶ್ರೀ ಹೊಸಮಠದ ನಟರಾಜ ಸಭಾ ಭವನದ ಆವರಣ, ಮಧ್ಯಾಹ್ನ 3ಕ್ಕೆ.

■ **ರಂಗಾಯಣ:** 'ನಮ್ಮೀ ತಾಯ್ನೆಲ' ಚಿಣ್ಣರ ಮೇಳ ಮಕ್ಕಳ ಬೇಸಿಗೆ ಶಿಬಿರ, ಉದ್ಘಾಟನೆ: ಕಲಾವಿದ ವಾಸುಕಿ ವೈಭವ್, ಅಧ್ಯಕ್ಷತೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎನ್.ಮಂಜುಳ, ಮುಖ್ಯ ಅತಿಥಿಗಳು: ಭಾರತೀಯ ಅತೀ ಕಿರಿಯ ವುಶು (ಸಮರಕಲೆ) ಚಾಂಪಿಯನ್ ಕು.ಜಿ. ಪ್ರಣತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸ್ಥಳ: ರಂಗಾಯಣ, ಸಂಜೆ 4.30ಕ್ಕೆ.

■ **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್ :** ಶ್ರೀ ಕೃಷ್ಣ ಮಂಡಳಿಯ 47ನೇ ವಾರ್ಷಿಕೋತ್ಸವ ಸಮಾರಂಭ, ಸಾನ್ನಿಧ್ಯ : ಉಡುಪಿ ಶ್ರೀ ಪಲಿಮಾರು ಮಠದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು, ಮುಖ್ಯ ಅತಿಥಿಗಳು : ಸಾಹಿತಿ ರೋಹಿತ್ ಚಕ್ರತೀರ್ಥ, ಸನ್ಮಾನ : ಪ್ರಖ್ಯಾತ ದಾಸವಾಣಿ ಗಾಯಕ ಮೈಸೂರು ರಾಮಚಂದ್ರಾಚಾರ್, ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಹೆಚ್. ಶ್ರೀಧರ್ ಹಂಡೆ, ಸಾಂಸ್ಕೃತಿಕ ಕಾರ್ಯಕ್ರಮ, ಮೈಸೂರು ರಾಮಚಂದ್ರಾಚಾರ್ ಅವರಿಂದ ದಾಸವಾಣಿ, ಸ್ಥಳ: ಶ್ರೀ ಕೃಷ್ಣ ಸಭಾ ಭವನ, ಶ್ರೀಕೃಷ್ಣಧಾಮ, ಸಂಜೆ 5ಕ್ಕೆ.

■ **ಡಾ. ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ :** "ಅಣ್ಣಾವ್ರ ಅಭಿಮಾನಿ" ಡಾ. ರಾಜ್‌ಕುಮಾರ್ ಹಾಡಿರುವ ವಿಶೇಷ ಗೀತೆಗಳ ರಸಮಂಜರಿ ಕಾರ್ಯಕ್ರಮ, ಗಾಯಕರು : ಜಗದೀಶ್, ಬಾಲುಪ್ರಕಾಶ್, ಸುರೇಶ್, ಪ್ರದೀಪ್, ಸರ್ವಮಂಗಳ, ರಶ್ಮಿ, ಉದ್ಘಾಟನೆ: ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮುಖ್ಯ ಅತಿಥಿಗಳು: ಲಯನ್ ಪಿ.ದೇವೇಗೌಡ, ಮಾಜಿ ಲಯನ್ ಗವರ್ನರ್ ಹಿರಿಯ ಅಂಚೆ ಅಧೀಕ್ಷಕ ಎ.ಕೊರಗಪ್ಪ, ಜಯದೇವ ಹೃದ್ರೋಗ ಆಸ್ಪತ್ರೆಯ ಖ್ಯಾತ ಹೃದಯ ತಜ್ಞ ಡಾ. ಕೆ.ಎಸ್. ಸದಾನಂದ, ಡಾ.ಕೆ.ಸಂತೋಷ್, ಡಾ.ಎಂ.ಎಸ್.ನಟಶೇಖರ್, ಉದ್ಯಮಿ ರವಿಗೌಡ, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಅರಣ್ಯಾಧಿಕಾರಿ ಡಿ.ಸಿದ್ದರಾಜು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ.ರಾಜ್ ಕಲಾ ಸೇವಾ ರತ್ನ ಪ್ರಶಸ್ತಿ ಪ್ರದಾನ : ರಂಗಕರ್ಮಿ ರಾಜಶೇಖರ ಕದಂಬ, ಡಾ. ಜಯಪ್ಪ ಹೊನ್ನಾಳಿ, ರವಿಗೌಡ, ಡಿ. ಸಿದ್ದರಾಜು, ಶ್ರೀಮತಿ ವೀಣಾ ಎಸ್. ಪಂಡಿತ್, ಬಿ.ಎನ್. ಜನಾರ್ಧನ್, ಇಂದುಶೇಖರ್, ಶ್ರೀಮತಿ ಗೀತಾ ಜಯರಾಂ, ಆರ್. ಶ್ರೀನಿವಾಸ್, ರವಿಸಂತು, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ. ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ–ಸಿ.ವಿಶ್ವನಾಥ್, ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 8.30 ಹಾದಿಯಲ್ಲಿ ಕಂಡ ಮುಖ –ಭಾಗವಹಿಸುವವರು ನಿವೃತ್ತ ಕರ್ನಲ್ ರಘುಕೃಷ್ಣ ಅಯ್ಯಂಗಾರ್, ಪ್ರಸ್ತುತಿ–ಅಬ್ದುಲ್ ರಶೀದ್, 9.40 ನಮ್ಮ ಆರೋಗ್ಯ–"ಸ್ಕಿನ್ ಕೇರ್ ಇನ್ ಆಟೋ–ಇಮ್ಯೂನ್ ಡಿಸೀಸಸ್ ಕುರಿತು ಡಾ.ಸಂಗೀತಾ ಕೆ.ಎನ್. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟಾ, ಪ್ರಸ್ತುತಿ–ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ಮುಖಾಮುಖಿ–ಬೇಸಿಗೆ ಶಿಬಿರ ಕುರಿತು ಮಕ್ಕಳ ಪ್ರಶ್ನೆಗೆ ಉತ್ತರಿಸುವವರು ರಂಗ ಕಲಾವಿದ ದೀಪಕ್, 11.00ಸಾಲಿಟ್ಟು ಹಣತೆ ಬೆಳಗೀವು

ಮಧ್ಯಾಹ್ನ: 12.30 ದೇವರನಾಮ–ಎಂ.ಎಸ್. ಸುಬ್ಬಲಕ್ಷ್ಮಿ, ಎಂ.ಎಸ್. ಶೀಲಾ, 12.45 ಜನಪದ ಸಂಗೀತ –ಕೃಷ್ಣೇಗೌಡ ಮತ್ತು ತಂಡ, 1.00 ರಂಗಗೀತೆಗಳು–ಜಗಜ್ಯೋತಿ ಬಸವೇಶ್ವರ ನಾಟಕದ ಹಾಡುಗಳು, 1.20 ಭಾವಗೀತೆಗಳು–ಸಿ.ಅಶ್ವಥ್ ಮತ್ತು ಸಂಗಡಿಗರು, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಸುದರ್ಶನ ವಿಜಯ, ಪ್ರಸ್ತುತಿ– ಸುರತ್ಕಲ್ ತಡಂಬೈಲಿನ ಶ್ರೀ ದುರ್ಗಾಂಬಾ ಮಹಿಳಾ ಯಕ್ಷಗಾನ ಮಂಡಳಿಯ ಕಲಾವಿದರು, 5.05 ಮಿಶ್ರ ಮಾಧುರ್ಯ, 6.50 ಕೃಷಿರಂಗ–ಪಶುರಂಗ, ಪ್ರಾಯೋಜಕರು– ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ, ಮೈಸೂರು, ಕರ್ನಾಟಕ ಸರ್ಕಾರ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ ಮೈಸೂರಿನ ಯೋಗ ಶಿಕ್ಷಕ ಅಜಯ್‌ಕುಮಾರ್ ಅವರೊಂದಿಗೆ ಸಂವಾದ, ನಡೆಸಿಕೊಡುತ್ತಾರೆ– ದಿವಾಕರ ಹೆಗಡೆ, 9.15 ರಂಗಗೀತೆಗಳು–ಸತ್ಯ ಹರಿಶ್ಚಂದ್ರ ನಾಟಕದ ಹಾಡುಗಳು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಅರಿಂದಂ ಬಟ್ಟಾಚಾರ್ಯ–ಗಾಯನ

■ **ಜೆಎಸ್‌ಎಸ್ ಕಾನೂನು ಕಾಲೇಜು, ಸುರಾನ ಮತ್ತು ಸುರಾನ ಇಂಟರ್‌ನ್ಯಾಷನಲ್ ಅಟಾರ್ನಿ :** 20ನೇ ಸುರಾನ ಮತ್ತು ಸುರಾನ ನ್ಯಾಷನಲ್ ಕಾರ್ಪೋರೇಟ್ ಲಾ ಮೂಟ್ ಕಾಂಪಿಟೇಷನ್–2023 ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್, ಉಪಸ್ಥಿತರು: ಜೆಎಸ್‌ಎಸ್ ಕಾನೂನು ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ. ಕೆ.ಎಸ್. ಸುರೇಶ್, ಎಸ್‌ಎಸ್‌ಐಎ ಚೆನ್ನೈ ವಕೀಲ ಪ್ರೀತಮ್ ಸುರಾನ, ಜೆಎಸ್‌ಎಸ್ ಕಾನೂನು ಕಾಲೇಜು ಪ್ರಿನ್ಸಿಪಾಲ್ ಡಾ.ಎಸ್.ನಟರಾಜು, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಜೆಎಸ್‌ಎಸ್ ಕಾನೂನು ಕಾಲೇಜು, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆಯವರ ದಿವ್ಯಚೇತನ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ :** ರಂಗಾಭ್ಯಾಸಿಗಳಿಂದ ಆಂಟನ್ ಚೆಕಾವ್ ಅವರ ರಚನೆಯ ಚೆರ್ರಿ ತೋಟ ನಾಟಕ ಪ್ರದರ್ಶನ, ನಿರ್ದೇಶನ : ಎನ್.ಎಸ್.ಡಿ. ಪದವೀಧರೆ ಯಶಸ್ವಿನಿ ರಾವ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ



■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮೋತ್ಸವ, ಶ್ರೀರಾಮ ಪಟ್ಟಾಭಿಷೇಕ, ವಿದ್ವಾನ್ ಎ.ಎನ್. ಸೋಮಶೇಖರ್ ಅವರ ನೇತೃತ್ವದಲ್ಲಿ ಅಭಿಷೇಕ, ಅರ್ಚನೆ, ಶ್ರೀಮತಿ ವಸಂತ ವೆಂಕಟೇಶ ಅವರಿಂದ ಗಮಕ ವಾಚನ, ವ್ಯಾಖ್ಯಾನ : ಕೃ. ರಾಮಚಂದ್ರ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಪ್ರಸಾದ ವಿನಿಯೋಗ, ಸ್ಥಳ: ಉಡುಪಿ ಶ್ರೀ ಕೃಷ್ಣಮಂದಿರ, ಎಸ್.ಎಸ್. ರಸ್ತೆ.

■ **ಶ್ರೀ ರಾಮ ಮಂದಿರ :** ಶ್ರೀ ರಾಮನವಮಿ, ಬೆಳಗ್ಗೆ ಶ್ರೀ ಕಾಶಿಯಾತ್ರೆ ಪೂರ್ವಕ ಸೀತಾಕಲ್ಯಾಣ, ಸಂಜೆ 6.30ಕ್ಕೆ ವಿದ್ವಾನ್ ಮೈಸೂರ್ರ್ರೀನಾಥ್ ಅವರಿಂದ ಸಂಗೀತ, ಸ್ಥಳ: ಶ್ರೀ ರಾಮ ಮಂದಿರ, ಜಯನಗರ.

■ **ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ:** 107ನೇ ರಾಮನವಮಿ ವಾರ್ಷಿಕ ಪರಂಪರೆಯ ಸಂಗೀತೋತ್ಸವ, **ಬೆಳಗ್ಗೆ 11ಕ್ಕೆ** ಶ್ರೀರಾಮ ಪಟ್ಟಾಭೀಷೇಕ ಉತ್ಸವ, ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ, ಮೈಸೂರು ಸಹೋದರರಾದ ವಿದ್ವಾನ್ ಮೈಸೂರು ನಾಗರಾಜ್ ಮತ್ತು ಡಾ.ಮೈಸೂರು ಎಂ.ಮಂಜುನಾಥ್ ಅವರಿಂದ ದ್ವಂದ್ವ ವಯೋಲಿನ್ ವಾದನ, ಮೃದಂಗದಲ್ಲಿ ವಿದ್ವಾನ್ ಶ್ರೀ ಮುಷ್ಣಂ ರಾಜಾ ರಾವ್, ಘಟಂನಲ್ಲಿ ವಿದ್ವಾನ್ ಗಿರಿಧರ ಉಡುಪ. ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 6.15ಕ್ಕೆ.

ಏ.15ರಿಂದ ಮುಕ್ತ ವಿವಿಯಿಂದ ಬೃಹತ್ ಆನ್‌ಲೈನ್ ಪ್ಲೇಸ್‌ಮೆಂಟ್ ಉತ್ಸವ್



ವಿದ್ಯಾರ್ಥಿಗಳು ಗೂಗಲ್ ಪ್ಲೇ ಸ್ಟೋರ್‌ನಿಂದ proofile.in ಡೌನ್‌ಲೋಡ್ ಮಾಡಿಕೊಳ್ಳಬಹುದು. ಯಾವುದೇ ಸಹಾಯಕ್ಕಾಗಿ ಸಹಾಯವಾಣಿ 9513373737 ಸಂಖ್ಯೆಗೆ ಕರೆ ಮಾಡಬಹುದು.

ಮೈಸೂರು,ಏ.8-ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಮುಕ್ತ ವಿವಿ ವಿದ್ಯಾರ್ಥಿಗಳಿಗಾಗಿ ಏ.15ರಿಂದ 30ರವರೆಗೆ ಬೃಹತ್ ಆನ್‌ಲೈನ್ ಪ್ಲೇಸ್‌ಮೆಂಟ್ ಉತ್ಸವ್ ಏರ್ಪಡಿಸಿದೆ. ಮುಕ್ತ ವಿವಿ ಉದ್ದಿಮೆ-ಸಂಸ್ಥೆ ಸಮನ್ವಯ ಘಟಕ ಹಾಗೂ ಉದ್ಯೋಗ ಘಟಕಗಳು ಜಂಟಿಯಾಗಿ ಪ್ರೊಫೈಲ್.ಇನ್ ಸಂಸ್ಥೆಯೊಂದಿಗೆ ಏರ್ಪಡಿಸಿರುವ ಈ ಉತ್ಸವದಲ್ಲಿ ಹತ್ತಕ್ಕೂ ಹೆಚ್ಚು ಕಂಪನಿಗಳಿಂದ ವಾರ್ಷಿಕ 3ರಿಂದ 6 ಲಕ್ಷಕ್ಕೂ ಅಧಿಕ ವೇತನವಿರುವ 2000ಕ್ಕೂ ಹೆಚ್ಚು ಉದ್ಯೋಗಾವಕಾಶಗಳಿವೆ ಎಂದು ಮುಕ್ತ ವಿವಿ ಪ್ರಕಟಣೆ ತಿಳಿಸಿದೆ.

ರಾಜ್ಯಾದ್ಯಂತ ಇರುವ ಮುಕ್ತ ವಿವಿ ವಿದ್ಯಾರ್ಥಿಗಳಿಗೆ ಸದರಿ ಕ್ಯಾಂಪೇನ್‌ನಲ್ಲಿ ಬಯೋಡಾಟ ಬರೆಯುವ ಬಗ್ಗೆ, ಸಂದರ್ಶನ ಎದುರಿಸುವ ಬಗ್ಗೆ ತರಬೇತಿ ನೀಡಲಾಗುವುದು. ಅಲ್ಲದೆ, ಪ್ರಾಥಮಿಕ ಹಂತದ ಸಂದರ್ಶನವನ್ನು ವಿದ್ಯಾರ್ಥಿಗಳು ಮನೆಯಿಂದಲೇ ಆನ್‌ಲೈನ್ ಮೂಲಕ ಎದುರಿಸಬಹುದಾಗಿದೆ. ಉತ್ಸವದ ಹಂತ ಒಂದರಲ್ಲಿ ವಿವಿಧ ಉದ್ಯೋಗಾವಕಾಶಗಳ ಮಾಹಿತಿ ಹಾಗೂ ವಿಷುವಲ್ ಬಯೋಡೇಟಾ ಸಿದ್ಧಪಡಿಸಲು ಸಹಾಯ ಮಾಡಲಾಗುವುದು.

ಎರಡನೇ ಹಂತದಲ್ಲಿ ದಾಖಲೆಗಳ ಪರಿಶೀಲನೆ ಹಾಗೂ ಹೆಚ್.ಆರ್. ಮತ್ತು ಕಂಪನಿಗಳಿಗೆ ಅವಶ್ಯಕವಿರುವ ವಿದ್ಯಾರ್ಥಿಗಳ ದಾಖಲೆಗಳನ್ನು ಪರಿಶೀಲನೆ ಮಾಡಲಾಗುವುದು ಹಾಗೂ ಪ್ರಾಥಮಿಕ ಹಂತದ ಸಂದರ್ಶನಗಳನ್ನು ನಡೆಸಲಾಗುವುದು. ಮೂರನೇ ಹಂತದಲ್ಲಿ ಪ್ರಾಥಮಿಕ ಹಂತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಅವರ ಹತ್ತಿರದ ಸ್ಥಳದಲ್ಲಿ ಮುಖಾಮುಖಿ ಸಂದರ್ಶನ ನಡೆಸಲಾಗುವುದು ಎಂದು ಮುಕ್ತ ವಿವಿ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಟೀಂ ಮೈಸೂರು ತಂಡದಿಂದ ಗಿಡಗಳ ಸಂರಕ್ಷಣೆ



ಮೈಸೂರು,ಏ.8(ಎಸ್‌ಪಿಎನ್)-ನಗರದ ಪ್ರಮುಖ ರಸ್ತೆಗಳಲ್ಲಿ ಅರಣ್ಯ ಇಲಾಖೆ, ಸಾರ್ವಜನಿಕರು ನೆಟ್ಟಿರುವ 200ಕ್ಕೂ ಹೆಚ್ಚು ಚಿಕ್ಕ ಗಿಡಗಳಿಗೆ ಬೇಸಿಗೆಯಲ್ಲಿ ಟೀಂ ಮೈಸೂರು ತಂಡದ ಸದಸ್ಯರು ಟ್ಯಾಂಕರ್‌ನಲ್ಲಿ ನೀರು ಹಾಕಿ, ಪೋಷಿಸುತ್ತಿರುವ ಕಾರ್ಯ ಎಂಟನೇ ವಾರಕ್ಕೆ ಕಾಲಿಟ್ಟಿದೆ.

ಗಿಡಗಳನ್ನು ನೆಟ್ಟರೆ ಸಾಲದು, ಅವುಗಳನ್ನು ಸಂರಕ್ಷಿಸಿ, ಪೋಷಿಸುವುದು ಅಷ್ಟೇ ಮುಖ್ಯ. ಈ ನಿಟ್ಟಿನಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕಲಾಮಂದಿರದ ಬಲಭಾಗದಿಂದ ಆರಂಭಗೊಂಡು ರೈಲ್ವೆ ನಿಲ್ದಾಣದವರೆಗೆ 80 ಗಿಡಗಳಿಗೆ, ಕ್ರಾಫರ್ಡ್ ಹಾಲ್ ಮುಂಭಾಗದಿಂದ ರಾಮಸ್ವಾಮಿ ವೃತ್ತದವರೆಗೆ 112 ಒಟ್ಟು 197 ಗಿಡಗಳಿಗೆ ಪ್ರತಿವಾರ ಟ್ಯಾಂಕರ್ ಮೂಲಕ ನೀರು ಹಾಕಿ ಪೋಷಿಸುತ್ತಾರೆ. ಕಳೆದ 7 ವರ್ಷದಿಂದ ಈ ಕಾರ್ಯ ನಡೆಯುತ್ತಿದ್ದು, ಈ ಹಿಂದೆ ವಿಶ್ವ ಮಾನವ ಜೋಡಿ ರಸ್ತೆಯಲ್ಲಿರುವ ಗಿಡಗಳಿಗೆ 5ವರ್ಷ ಬೇಸಿಗೆಯಲ್ಲಿ ನೀರು ಹಾಕುವ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ಹಾಗೆಯೇ ಕಲಾಮಂದಿರ, ಕ್ರಾಫರ್ಡ್ ಹಾಲ್, ರಾಮಸ್ವಾಮಿ ವೃತ್ತದಲ್ಲಿರುವ ಚಿಕ್ಕ ಗಿಡಗಳಿಗೆ ನೀರು ಹಾಕಿ ಪೋಷಿಸುವ ಕಾರ್ಯ ನಿರಂತರವಾಗಿ ನಡೆಯಲಿದೆ ಎಂದು ಟೀಂ ಮೈಸೂರು ಸಂಚಾಲಕ ಗೋಕುಲ್ ಗೋವರ್ಧನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಸ್ತ್ ರಂಜನೆಯ ಸಂಗೀತ ಸಂಜೆ



ಮೈಸೂರು,ಏ.8(ಎಂಕೆ)-ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಮೂನ್‌ಲೈಟ್ ಮ್ಯೂಸಿಕ್ ಅಕಾಡೆಮಿ ವತಿಯಿಂದ ಪೀಪಲ್ ಫಾರ್ ಅನಿಮಲ್ಸ್ ಸಂಸ್ಥೆಯ ಸಹಾಯಾರ್ಥಕ್ಕಾಗಿ ಆಯೋಜಿಸಿದ್ದ ಚಲನಚಿತ್ರ ಗೀತೆಗಳ ಸಂಗೀತ ರಸಸಂಜೆ ಕಾರ್ಯಕ್ರಮ ಕೇಳುಗರಿಗೆ ಮಸ್ತ್ ಮನರಂಜನೆ ನೀಡಿತು.

ಮೂನ್‌ಲೈಟ್‌ನ ಸ್ಟ್ಯಾನಿ ಮರ್ಸಲ್ ನೇತೃತ್ವದಲ್ಲಿ ನಡೆದ ಸಂಗೀತ ಸಂಜೆಯಲ್ಲಿ ಗಾಯಕರಾದ ಹರ್ಷ ರಂಜನಿ, ಎನ್.ರಶ್ಮಿ, ಕಾರ್ತಿಕ್, ಅನಿತಾ, ಅನಿಲ್, ಇನ್ನಿತರರು ಹತ್ತಾರು ಕನ್ನಡ ಚಲನಚಿತ್ರ ಗೀತೆಗಳನ್ನು ಸುಮಧುರವಾಗಿ ಹಾಡಿ ನೆರೆದಿದ್ದವರನ್ನು ರಂಜಿಸಿದರು. ರಸಸಂಜೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಎಸಿಪಿ ಶಿವಶಂಕರ್ ಮಾತನಾಡಿ, ಗಾಯಕರನ್ನು ಪರಿಚಯಿಸುವ ಆರ್ಕೆಸ್ಟ್ರಾಗಳಿಗೆ ಬರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೂ ಮೂನ್‌ಲೈಟ್ ಮ್ಯೂಸಿಕ್ ಅಕಾಡೆಮಿ ತನ್ನ ವಿನೂತನ ಸಂಗೀತ ಕಾರ್ಯಕ್ರಮಗಳ ಮೂಲಕ ಹೆಸರುವಾಸಿಯಾಗಿದೆ. ಹಲವಾರು ಗಾಯಕರನ್ನು ಕೊಡುಗೆಯಾಗಿ ನೀಡಿದದರಲ್ಲದೆ ಇಂತಹ ಸಹಾಯಾರ್ಥ ಸಂಗೀತ



ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಬೇಕು ಎಂದು ಆಶಿಸಿದರು. ಇಂಜಿನಿಯರ್ ಸುಷ್ಮಾ ರಘು ಮತ್ತಿತರರಿದ್ದರು.

ರಜಾದಿನಗಳಲ್ಲೂ ಅಂಚೆ ಇಲಾಖೆ ನೌಕರರಿಂದ ಕರ್ತವ್ಯ ನಿರ್ವಹಣೆ

ಏಪ್ರಿಲ್ ತಿಂಗಳ ಮಧ್ಯದ ವೇಳೆಗೆ 20 ಲಕ್ಷ ಚುನಾವಣಾ ಗುರುತು ಪತ್ರ ವಿತರಿಸುವ ಗುರಿ

भारतीय डाक
India Post

ಬೆಂಗಳೂರು: ರಾಜ್ಯ ಚುನಾವಣಾ ಆಯೋಗದ ಪರವಾಗಿ ಅಂಚೆ ಕಚೇರಿ ಮೂಲಕ ನಿತ್ಯವೂ ಸಾವಿರಾರು ಚುನಾವಣಾ ಗುರುತು ಪತ್ರ(EPIC)ಗಳನ್ನು ಕಳುಹಿಸುತ್ತಿರುವುದರಿಂದ ಕರ್ನಾಟಕ ವಿಧಾನ ಸಭೆ ಚುನಾವಣೆಗೆ ಇನ್ನು ಬೆರಳೆಣಿಕೆಯ ದಿನಗಳು ಇರುವುದರಿಂದ ಕರ್ನಾಟಕ ಅಂಚೆ ಇಲಾಖೆ ನೌಕರರು ಈಗ ಸರ್ಕಾರಿ ರಜಾ ದಿನಗಳಲ್ಲಿ ಮತ್ತು ಭಾನುವಾರಗಳಂದು ಸಹ ಕೆಲಸ ಮಾಡುತ್ತಿದ್ದಾರೆ.

ಈಗಾಗಲೇ ಅಂಚೆ ಇಲಾಖೆ ಮೂಲಕ ರಾಜ್ಯದ 5 ಲಕ್ಷ ಮತದಾರರಿಗೆ ಚುನಾವಣಾ ಗುರುತು ಪತ್ರ ವಿತರಿಸಲಾಗಿದೆ. ಏಪ್ರಿಲ್ ಮಧ್ಯಭಾಗದ ವೇಳೆಗೆ 20 ಲಕ್ಷದವರೆಗೆ ವಿತರಿಸುವ ನಿರೀಕ್ಷೆಯಿದೆ. ಚುನಾವಣಾ ಆಯೋಗದ ಆದೇಶದಂತೆ ಅಂಚೆ ಕಚೇರಿ ಮೂಲಕ ವಿತರಣೆಯಾಗುವ ವಸ್ತುಗಳ ಮೇಲೆ ಚುನಾವಣೆ ದೃಷ್ಟಿಯಿಂದ ತೀವ್ರ ನಿಗಾ ಇರಿಸಬೇಕಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ರಾಜ್ಯ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರಕುಮಾರ್, ಸುರಕ್ಷತೆ ಕ್ರಮವಾಗಿ ಈಗ ನಾವು ರಾಜ್ಯದ 68 ಕೇಂದ್ರಗಳಲ್ಲಿ ಮಾತ್ರ ಚುನಾವಣಾ ಗುರುತು ಪತ್ರದ ಬುಕ್ಕಿಂಗ್‌ನ್ನು ಸ್ವೀಕರಿಸುತ್ತಿದ್ದೇವೆ. ಆದರೆ ಕಾರ್ಡುಗಳ ವಿತರಣೆಯನ್ನು 9,613 ಅಂಚೆ ಕಚೇರಿಗಳಲ್ಲಿ ಮಾಡಲಾಗುತ್ತದೆ. ಅವುಗಳನ್ನು ಸ್ಪೀಡ್ ಪೋಸ್ಟ್ ಮತ್ತು ನಿಗದಿತ ವಿಳಾಸವಿದ್ದರೆ ಮಾತ್ರ ವಿತರಿಸಲಾಗುತ್ತದೆ. ಇನ್ನು ಕೆಲವು ಸ್ಥಳಗಳಲ್ಲಿ ಪಿಕ್ ಅಪ್ ಮತ್ತು ಡ್ರಾಪ್ ಸರ್ವಿಸ್ ನಡೆಸಲಾಗಿದೆ ಎಂದರು.

ಕಳೆದ ವರ್ಷ ಜುಲೈ 25ಕ್ಕೆ ಮಾಡಿಕೊಂಡ ಒಪ್ಪಂದ ಪ್ರಕಾರ ಚುನಾವಣಾ ಗುರುತು ಪತ್ರಗಳನ್ನು ಅಂಚೆ ಕಚೇರಿ ಮೂಲಕ ವಿತರಿಸಲಾಗುತ್ತಿದೆ. 5 ವರ್ಷಗಳವರೆಗೆ ಈ ಒಪ್ಪಂದ ಮಾಡಿಕೊಳ್ಳಲಾಗಿದೆ. ಒಪ್ಪಂದದ ಅಡಿಯಲ್ಲಿ ಎಲ್ಲಾ ವಸ್ತುಗಳ ಟ್ರ್ಯಾಕಿಂಗ್ ಮತ್ತು ಪತ್ತೆಹಚ್ಚುವಿಕೆ ಮಾಡಲಾಗುತ್ತದೆ. ಬೆಂಗಳೂರು ಜಿಪಿಒ ಈ ಎಲ್ಲಾ ವಿಷಯಗಳಿಗೆ ನೋಡಲ್ ಕಚೇರಿಯಾಗಿದ್ದು 73 ಚುನಾವಣಾಧಿಕಾರಿಗಳನ್ನು ಗುರುತು ಪತ್ರಗಳನ್ನು ಪಿಕ್ ಅಪ್ ಮತ್ತು ಬುಕ್ಕಿಂಗ್ ಮಾಡಲು ಗುರುತಿಸಲಾಗಿದೆ.

ಮೈಸೂರಿಗೆ ಹರಿದು ಬರುತ್ತಿವೆ ಪ್ರವಾಸಿಗರ ದಂಡು

ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ ಇನ್ನಿತರ ಪ್ರವಾಸಿ ತಾಣಗಳಲ್ಲಿ ಭಾರೀ ಪ್ರವಾಸಿಗರ ಕಲರವ









ಮೈಸೂರಿನಲ್ಲಿ ಅತೀ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಸ್ಥಳಗಳು ಎಂದರೆ, ಅದುವೇ ಅಂಬಾವಿಲಾಸ ಅರಮನೆ ನಂತರ ಮೃಗಾಲಯ ಈ ಎರಡು ಪ್ರವಾಸಿ ಸ್ಥಳಗಳಿಗೆ ಕಳೆದ ನಾಲ್ಕು ದಿನಗಳಲ್ಲಿ ಅತೀ ಹೆಚ್ಚು ಪ್ರವಾಸಿಗರು ಭೇಟಿ ನೀಡಿದ್ದು, ಅದರಂತೆ ಅಂಬಾವಿಲಾಸ ಅರಮನೆ ಏ.1ರಿಂದ 8ರವರೆಗೂ 87,928 ಮಂದಿ ಪ್ರವಾಸಿಗರು ಭೇಟಿ ನೀಡಿದ್ದು, ಅದರಲ್ಲಿ ಏ.8ರಂದು ಒಂದೇ ದಿನ 19,635 ಮಂದಿ ಭೇಟಿ ನೀಡಿದ್ದಾರೆ. ಅದರಲ್ಲಿ ವಿದ್ಯಾರ್ಥಿಗಳು 2,330, ವಿದೇಶಿಗರು 67 ವಯಸ್ಕರು17,238 ಮಂದಿ ಸೇರಿದಂತೆ 19,635 ಅರಮನೆಯ ಸೊಬಗನ್ನು ಸವಿದಿದ್ದು, ಹಾಗೇ ಏ.1ರಂದು 10,262, ಏ.2-12,857, ಏ.3-6361, ಏ.4-7425, ಏ.5-048, ಏ.6-7582 ಹಾಗೂ ಏ.7-15,729 ಮಂದಿ ಭೇಟಿ ನೀಡಿದ್ದಾರೆ. ನಾಳೆ(ಏ.9) ಭಾನುವಾರ ಹಿನ್ನೆಲೆಯಲ್ಲಿ ಮತ್ತಷ್ಟು ಪ್ರವಾಸಿಗರು ಅರಮನೆಗೆ ಭೇಟಿ ನೀಡುವ ನಿರೀಕ್ಷೆ ಇದೆ.

-ಟಿ.ಎಸ್.ಸುಬ್ರಮಣ್ಯ, ಅರಮನೆ ಮಂಡಳಿ ಉಪನಿರ್ದೇಶಕ

ಮೈಸೂರು,ಏ.8(ಜಿಎ)-ಸಾಲು ಸಾಲು ಸರ್ಕಾರಿ ರಜೆ ಜೊತೆಗೆ ಬೇಸಿಗೆ ರಜೆ ಹಿನ್ನೆಲೆಯಲ್ಲಿ ಮೈಸೂರಿಗೆ ಪ್ರವಾಸಿಗರ ದಂಡು ಹರಿದು ಬರುತ್ತಿದೆ.

ದೇಶಾದ್ಯಂತ ಏ.7ರಿಂದ ಸಾಲು ಸಾಲು ಸರ್ಕಾರಿ ರಜೆ ಇರುವ ಹಿನ್ನೆಲೆಯಲ್ಲಿ ಪ್ರವಾಸಿಗರ ಸ್ವರ್ಗವಾಗಿರುವ ಮೈಸೂರಿನಲ್ಲಿ ಎಲ್ಲಾ ಪ್ರವಾಸಿ ತಾಣಗಳಲ್ಲಿ ಎತ್ತ ನೋಡಿದರು ಪ್ರವಾಸಿಗರ ದಟ್ಟಣೆ ಕಾಣುತ್ತಿದೆ.

ಬಹುತೇಕ ಶಾಲೆಗಳಲ್ಲಿ ಏಪ್ರಿಲ್ ತಿಂಗಳ ಆರಂಭದಿಂದಲೇ ಮಕ್ಕಳಿಗೆ ಬೇಸಿಗೆ ರಜೆ ನೀಡಿದ್ದು, ಇದರೊಟ್ಟಿಗೆ ಏ.7 ಗುಡ್‌ಫ್ರೈಡೇ, ಏ.8 ಎರಡನೇ ಶನಿವಾರ ಹಾಗೂ ಏ.9ರಂದು ಭಾನುವಾರ ಸರ್ಕಾರಿ ರಜೆ ಇರುವ ಕಾರಣ ಮೈಸೂರಿನ ಪ್ರಮುಖ ಪ್ರವಾಸಿ ತಾಣಗಳಾದ ಚಾಮರಾಜೇಂದ್ರ ಮೃಗಾಲಯ, ಚಾಮುಂಡಿ ಬೆಟ್ಟ, ಮೈಸೂರು ಅರಮನೆ, ಕಾರಂಜಿಕೆರೆ, ಜಗನ್ಮೋಹನ ಅರಮನೆ, ನಂಜನಗೂಡು ನಂಜುಂಡೇಶ್ವರ ದೇಗುಲ ಸೇರಿದಂತೆ ಹಲವು ತಾಣಗಳಿಗೆ ನಿತ್ಯವೂ ಸಾವಿರಾರು ಮಂದಿ ಭೇಟಿ ನೀಡುತ್ತಿದ್ದಾರೆ. ವಿಶ್ವಪ್ರಸಿದ್ಧ ಧಾರ್ಮಿಕ ಸ್ಥಳವಾದ ಚಾಮುಂಡಿ ಬೆಟ್ಟಕ್ಕೂ ಸಾಗರೋಪಾದಿಯಲ್ಲಿ ಭಕ್ತಾದಿಗಳು ಮತ್ತು ಪ್ರವಾಸಿಗರು ಭೇಟಿ ನೀಡಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯುತ್ತಿದ್ದು, ಅದರಂತೆ ಏ.7ರಂದು 15 ಸಾವಿರಕ್ಕೂ ಅಧಿಕ ಪ್ರವಾಸಿಗರು ಭೇಟಿ ನೀಡಿದ್ದಾರೆ.

ರಜೆಯಿರುವ ಹಿನ್ನೆಲೆ ನಗರಕ್ಕೆ ರಾಜ್ಯ ಸೇರಿದಂತೆ ಕೇರಳ, ತಮಿಳುನಾಡು ಸೇರಿದಂತೆ ವಿದೇಶಿ ಪ್ರವಾಸಿಗರು ಆಗಮಿಸಿದ್ದು, ಈಗಾಗಲೇ ಹೋಟೆಲ್ ಕೊಠಡಿಗಳನ್ನು ಬುಕ್ಕಿಂಗ್ ಮಾಡಿಕೊಂಡಿದ್ದಾರೆ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದರು.

ಇದೇ ಸಂದರ್ಭದಲ್ಲಿ ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ಹಿನ್ನೆಲೆಯಲ್ಲಿ ಹೋಟೆಲ್‌ಗಳಲ್ಲಿಯೂ ಎಂದಿನಂತೆ ಸೂಕ್ತ ನಿಗಾ ವಹಿಸಿದ್ದು, ರೂಂ ಬುಕ್ ಮಾಡುವ ಪ್ರವಾಸಿಗರ ಸವಿವರವನ್ನು ಹೋಟೆಲ್ ವ್ಯಾಪ್ತಿಯ ಪೊಲೀಸ್ ಠಾಣೆಗೆ ಮಾಹಿತಿ ನೀಡುತ್ತಿದ್ದೇವೆ. ಹಾಗೇ ಪೊಲೀಸರು ಸಹ ಪ್ರತಿ ನಿತ್ಯ ತಪಾಸಣೆ ನಡೆಸುತ್ತಿದ್ದಾರೆ ಎಂದರು.





ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಘೋಷಿತ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಬೆಂಗಳೂರಿನಲ್ಲಿ ಭೇಟಿಯಾಗಿ ಹೂಗುಚ್ಛ ನೀಡಿ, ಅಭಿನಂದಿಸಿದರು. ಈ ವೇಳೆ ಮುಖಂಡರಾದ ಕೆಂಚಪ್ಪ, ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ, ಹಿನಕಲ್ ಕೆಂಪನಾಯಕ ಇದ್ದರು.

ಚೆನ್ನೈ ವಿಮಾನ ನಿಲ್ದಾಣದ ನೂತನ ಟರ್ಮಿನಲ್ ಕಟ್ಟಡ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ





ಚೆನ್ನೈ,ಏ.8- ಚೆನ್ನೈ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 1,260 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಹೊಸ ಇಂಟಿಗ್ರೇಟೆಡ್ ಟರ್ಮಿನಲ್ ಕಟ್ಟಡವನ್ನು(ಹಂತ-1) ಪ್ರಧಾನಿ ನರೇಂದ್ರ ಮೋದಿ ಶನಿವಾರ ಉದ್ಘಾಟಿಸಿದರು.

ರಾಜ್ಯದ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರದರ್ಶಿಸಲು ಹೊಸ ಇಂಟಿಗ್ರೇಟೆಡ್ ಟರ್ಮಿನಲ್ ಕಟ್ಟಡವನ್ನು ಅನನ್ಯವಾಗಿ ವಿನ್ಯಾಸಗೊಳಿಸಲಾಗಿದೆ. ಸುಮಾರು 2,20,972 ಚ.ಮೀ ವಿಸ್ತೀರ್ಣ ಹೊಂದಿರುವ ಈ ಟರ್ಮಿನಲ್ ಚೆನ್ನೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಯಾಣಿಕರ ದಟ್ಟಣೆ ಮತ್ತು ಏರ್ ಟ್ರಾಫಿಕ್ ನಿಯಂತ್ರಣಕ್ಕೆ ಸಹಕಾರಿಯಾಗಲಿದೆ. ಈಗ ನಿರ್ಮಾಣವಾದ ಟಿ-2 ಮೂಲಕ ಚೆನ್ನೈ ಏರ್‌ಪೋರ್ಟ್‌ನಲ್ಲಿ ಪ್ರಯಾಣಿಕರ ಸಂಖ್ಯೆಯನ್ನು ವರ್ಷಕ್ಕೆ 23 ಮಿಲಿಯನ್‌ನಿಂದ 30 ಮಿಲಿಯನ್‌ಗೆ ಹೆಚ್ಚಿಸಬಹುದಾಗಿದೆ.

ಹೊಸ ವಿಮಾನ ನಿಲ್ದಾಣದ ನೆಲ ಮಹಡಿಯಲ್ಲಿ ರಂಗೋಲಿಯಂಥ ವಿನ್ಯಾಸಗಳನ್ನು ನೆಲದ ಮೇಲೆ ಬಹಳ ದೊಡ್ಡ ಪ್ರಮಾಣದಲ್ಲಿ ಬಿಡಿಸಲಾಗಿದೆ. ಹೊಸ ಟರ್ಮಿನಲ್ ಸ್ಥಳೀಯ ತಮಿಳು ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಉದಾಹರಣೆಗೆ ಕೋಲಂ, ಸೀರೆ, ದೇವಾಲಯಗಳು ಮತ್ತು ಇತರ ಅಂಶಗಳು ನೈಸರ್ಗಿಕ ಪರಿಸರವನ್ನು ಎತ್ತಿ ತೋರಿಸುತ್ತವೆ ಎಂದು ಸರ್ಕಾರ ಹೇಳಿದೆ. ಕಾರ್ಯಕ್ರಮದಲ್ಲಿ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಎಂ ಸಿಂಧಿಯಾ, ತಮಿಳುನಾಡು ರಾಜ್ಯಪಾಲ ಆರ್ ಎನ್ ರವಿ, ಮುಖ್ಯಮಂತ್ರಿ ಎಂ ಕೆ ಸ್ಟಾಲಿನ್ ಸೇರಿದಂತೆ ಹಲವರು ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಮುಂದಿನ 5 ದಿನಗಳಲ್ಲಿ 2ರಿಂದ 4 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ಹೆಚ್ಚಳ



ನವದೆಹಲಿ: ದೇಶದ ಬಹುತೇಕ ಭಾಗಗಳಲ್ಲಿ ಮುಂದಿನ ಐದು ದಿನಗಳ ಕಾಲ ಬಿಸಿಲ ಝಳ ಹೆಚ್ಚಾಗಲಿದ್ದು, ಉಷ್ಣಾಂಶದಲ್ಲಿ 2ರಿಂದ 4 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆ ಕಂಡುಬರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶನಿವಾರ ಹೇಳಿದೆ.

ಮುಂದಿನ 5 ದಿನಗಳ ಅವಧಿಯಲ್ಲಿ ಬಿಸಿಗಾಳಿ ಬೀಸುವ ಸಾಧ್ಯತೆ ಇಲ್ಲ ಎಂದು ಐಎಂಡಿ ಟ್ವೀಟ್‌ಮಾಡಿದೆ. ತಮಿಳು ನಾಡು, ಪುದುಚೇರಿ, ಕಾರೈಕಲ್‌ನಲ್ಲಿ ಭಾನುವಾರ ಹಾಗೂ ಸೋಮವಾರ ಗುಡುಗು, ಸಿಡಿಲು ಸಹಿತ ಸಾಧಾರಣ ಮಳೆ ಬೀಳಲಿದೆ. ಮಂದಿನ 5 ದಿನಗಳ ಅವಧಿಯಲ್ಲಿ ಕೇರಳದಲ್ಲಿ ಜೋರಾದ ಗಾಳಿಯೊಂದಿಗೆ ಸಾಧಾರಣ ಮಳೆಯಾಗಲಿದೆ. ಮಧ್ಯ ಪ್ರದೇಶ, ಒಡಿಶಾ, ಮಹಾರಾಷ್ಟ್ರ ಹಾಗೂ ಛತ್ತೀಸಗಢಗಳಲ್ಲಿ ಜೋರಾಗಿ ಗಾಳಿ ಬೀಸಲಿದ್ದು, ಗುಡುಗು, ಸಿಡಿಲು ಸಹಿತ ಮಳೆ ಬೀಳಲಿದೆ. ಜಾರ್ಖಂಡ್‌ನಲ್ಲಿ ಮಂಗಳವಾರ ಮಳೆ ಬೀಳಲಿದ್ದು, ನಂತರ, ಕ್ರಮೇಣ ಕಡಿಮೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ.

ಸುಖೋಯ್-30 ಯುದ್ಧ ವಿಮಾನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾರಾಟ



ತೇಜ್‌ಪುರ್ (ಅಸ್ಸಾಂ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ (ಏ.8) ಅಸ್ಸಾಂನಲ್ಲಿ ಭಾರತೀಯ ವಾಯುಪಡೆಯ ಸುಖೋಯ್ 30 ಎಂಕೆಐ ಯುದ್ಧ ವಿಮಾನದಲ್ಲಿ ಮೊದಲ ಬಾರಿಗೆ ಹಾರಾಟ ನಡೆಸಿದರು.

ಮೂರು ದಿನಗಳ ಅಸ್ಸಾಂ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಇಂದು ಸುಖೋಯ್ ವಿಮಾನದಲ್ಲಿ ಹಾರಾಟ ನಡೆಸಿದರು. ಈ ಕುರಿತ ಫೋಟೊ ಮತ್ತು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಮುರ್ಮು ಅವರು ಏ.6ರಂದು ಅಸ್ಸಾಂಗೆ ಭೇಟಿ ನೀಡಿದ್ದು, ನಿನ್ನೆಯಷ್ಟೇ ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ ಗಜ ಉತ್ಸವ-2023 ಅನ್ನು ಉದ್ಘಾಟಿಸಿ ಮಾತನಾಡಿದ್ದರು. ದ್ರೌಪದಿ ಮುರ್ಮು ಅವರು ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ 2ನೇ ರಾಷ್ಟ್ರಪತಿಯಾಗಿದ್ದಾರೆ. 2009ರಲ್ಲಿ ಮಾಜಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರು ಸುಖೋಯ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ್ದರು.

ವರ್ಷಕ್ಕೊಮ್ಮೆ ಹೃದಯ ತಪಾಸಣೆ ಮಾಡಿಸಿಕೊಳ್ಳಿ

ಪತ್ರಕರ್ತರಿಗೆ ಜಯದೇವ ಹೃದ್ರೋಗ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್.ಸದಾನಂದ ಸಲಹೆ





ಮೈಸೂರಿನ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಶನಿವಾರ ಪತ್ರಕರ್ತರಿಗೆ ಆಯೋಜಿಸಿದ್ದ ಉಚಿತ ಹೃದಯ ತಪಾಸಣೆ ಶಿಬಿರವನ್ನು ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ ಅವರು ಉದ್ಘಾಟಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, ನಗರ ಉಪಾಧ್ಯಕ್ಷ ಎಂ.ಎಸ್. ಬಸವಣ್ಣ, ಕಾರ್ಯಕಾರಿ ಸಮಿತಿ ಸದಸ್ಯ ಶಿವಮೂರ್ತಿ ಜುಪ್ತಿಮಠ ಹಾಗೂ ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಅವರನ್ನು ಕಾಣಬಹುದು. (ಎಡಚಿತ್ರ). ಹೃದಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡಿದ್ದ ಪತ್ರಕರ್ತರನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು,ಏ.8(ಆರ್‌ಕೆ)-ಸದಾ ಒತ್ತಡದಲ್ಲಿ ಕೆಲಸ ಮಾಡುವ ಪತ್ರಕರ್ತರು ವರ್ಷಕ್ಕೊಮ್ಮೆಯಾದರೂ ಹೃದಯ ತಪಾಸಣೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯಬೇಕೆಂದು ಮೈಸೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್.ಸದಾನಂದ ಸಲಹೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಮತ್ತು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಸಹಯೋಗದೊಂದಿಗೆ ಪತ್ರಕರ್ತರು ಹಾಗೂ ಕುಟುಂಬದವರಿಗೆ ಆಯೋಜಿಸಿದ್ದ ಉಚಿತ ಹೃದಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಕೆಲಸದ ಒತ್ತಡದಲ್ಲಿ ಆರೋಗ್ಯದ ಕಡೆ ಗಮನ ಕೊಡಲು ಸಾಧ್ಯವಾಗದ ಕಾರಣ ಮಾಧ್ಯಮ ಮಿತ್ರರು ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಅದರಲ್ಲೂ ಹೃದಯ ಸಂಬಂಧಿ ಖಾಯಿಲೆಗಳ ಬಗ್ಗೆ ನಿರ್ಲಕ್ಷ್ಯ ಸಲ್ಲದು. ಆದ್ದರಿಂದ ಕನಿಷ್ಠ ವರ್ಷಕ್ಕೊಮ್ಮೆಯಾದರೂ ತಮ್ಮ ಹೃದಯದ ಆರೋಗ್ಯ ಸರಿ ಇದೆಯೇ ಎಂದು ಪರೀಕ್ಷೆ ಮಾಡಿಸಿಕೊಂಡು ವೈದ್ಯರಿಂದ ಸೂಕ್ತ ಚಿಕಿತ್ಸೆ, ಸಲಹೆ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಇತ್ತೀಚೆಗೆ ಸಕ್ಕರೆ ಖಾಯಿಲೆ ಮತ್ತು ಹೃದ್ರೋಗ ಹೆಚ್ಚುತ್ತಿದೆ. ಬದಲಾದ ಜೀವನಶೈಲಿ, ಆಹಾರ ಪದ್ಧತಿ, ಕಾರ್ಯದೊತ್ತಡದಿಂದಾಗಿ ಹದಿಹರೆಯದವರಿಗೂ ಹೃದಯಾಘಾತವಾಗುತ್ತಿದ್ದು, ಆಸ್ಪತ್ರೆಗೆ ಬರುವಷ್ಟರಲ್ಲೇ ಬಹುತೇಕ ಮಂದಿ ಸಾವನ್ನಪ್ಪುತ್ತಿದ್ದಾರೆ. ನಾವು ಎಚ್ಚೆತ್ತುಕೊಂಡು ಶಿಸ್ತುಬದ್ಧ ಜೀವನ ನಡೆಸದಿದ್ದರೆ ಅಪಾಯವಾದೀತು ಎಂದು ಡಾ. ಸದಾನಂದ ಅವರು ಇದೇ ಸಂದರ್ಭ ಕಿವಿಮಾತು ಹೇಳಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಮಾತನಾಡಿ, ಕೆಲಸದ ಧಾವಂತದಲ್ಲಿ ಆರೋಗ್ಯ ಕಡೆಗಣಿಸುತ್ತಿರುವುದರಿಂದ ಪತ್ರಕರ್ತರು ಅನಾರೋಗ್ಯಕ್ಕೊಳಗಾಗುತ್ತಾರೆ. ಅದರಿಂದ ದೊಡ್ಡ ಪ್ರಮಾಣದ ಸಮಸ್ಯೆ ಎದುರಾಗುತ್ತದೆ. ಅದಕ್ಕಾಗಿ ಈ ತಪಾಸಣಾ ಶಿಬಿರ ಏರ್ಪಡಿಸಿದ್ದು, ಜಯದೇವ ಹೃದ್ರೋಗ ಆಸ್ಪತ್ರೆಯು ಆಗಿಂದಾಗ್ಗೆ ಪತ್ರಕರ್ತರಿಗೆ ಹೃದಯ ತಪಾಸಣೆ ನಡೆಸುವ ಮೂಲಕ ಸಾರ್ವಜನಿಕರ ಜೊತೆಗೆ ನಮ್ಮ ಆರೋಗ್ಯ ರಕ್ಷಣೆಗೂ ತೋರುತ್ತಿರುವ ಕಾಳಜಿಗೆ ಜಿಲ್ಲಾ ಪತ್ರಕರ್ತರ ಸಂಘ ಸದಾ ಚಿರಋಣಿ ಎಂದರು.

ಸಂಸ್ಥೆಯ ಮುಖ್ಯಸ್ಥರಾದ ಡಾ. ಸಿ.ಎನ್.ಮಂಜುನಾಥ್ ಅವರ ದೂರದೃಷ್ಟಿ, ಮಾನವೀಯ ಗುಣ, ವೃತ್ತಿಬದ್ಧತೆ, ಶಿಸ್ತುಬದ್ಧ ಆಡಳಿತದಿಂದಾಗಿ ಆಸ್ಪತ್ರೆ ಗುಣಾತ್ಮಕ ಚಿಕಿತ್ಸಾ ಸೇವೆ ಮೂಲಕ ಸಾರ್ವಜನಿಕರಿಗೆ ಉಪಕಾರಿಯಾಗಿದೆ. ಮೈಸೂರು ಸಂಸ್ಥೆಯ ಮುಖ್ಯಸ್ಥರೂ ಸಹ ಅತ್ಯಂತ ಜವಾಬ್ದಾರಿಯಿಂದ ರೋಗಿಗಳ ಸ್ನೇಹಿಯಾಗಿ ವೈದ್ಯರು, ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹಳೇ ಮೈಸೂರು ಭಾಗದ ಹೃದ್ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ಅವರು ಶ್ಲಾಘಿಸಿದರು.

ಶಿಬಿರದಲ್ಲಿ 170ಕ್ಕೂ ಹೆಚ್ಚು ಮಂದಿ ಪತ್ರಕರ್ತರಿಗೆ ಬಿಪಿ, ಶುಗರ್, ರಕ್ತ ಪರೀಕ್ಷೆ, ಇಸಿಜಿ, ಎಕೋ ಕಾರ್ಡಿಯೋಗ್ರಫಿ, ಟ್ರೆಡ್‌ಮಿಲ್ ಟೆಸ್ಟ್ (ಟಿಎಂಟಿ) ಮಾಡಲಾಯಿತು. ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಡಾ.ಎಂ.ಪಶುಪತಿ, ನರ್ಸಿಂಗ್ ಸೂಪರಿಂಟೆಂಡೆಂಟ್ ಹರೀಶ್‌ಕುಮಾರ್, ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ವಾಣಿ ಮೋಹನ್, ಪಂಕಜ, ಎನ್‌ಎಬಿಹೆಚ್ ಸಂಯೋಜಕ ಸೈಯದ್ ಮತೀನ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ. ಹರೀಶ್, ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, ಉಪಾಧ್ಯಕ್ಷ ಎಂ.ಎಸ್. ಬಸವಣ್ಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಮೂರ್ತಿ ಜುಪ್ತಿಮಠ, ಬೀರೇಶ, ಎನ್. ಸುರೇಶ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ ಹಾಗೂ ಇತರರು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಓವರ್ ಪಟು (ಕ್ರಿಕೆಟ್‌ನಲ್ಲಿ ಬಹಳ ಕ್ಯಾಚ್ ಬಿಟ್ಟು ಆಟ ಮುಗಿಯುವ ಹೊತ್ತಿನಲ್ಲಿ) : ಸಾರ್ ನಾನು ಬಸ್ ಕ್ಯಾಚ್ ಮಾಡಬೇಕಿದೆ. ಬೇಗ ಹೋಗ್ತೀನಿ ಸಾರ್.
ಕ್ಯಾಪ್ಟನ್ : ಬೇಗ ಹೋಗು, ಅದನ್ನೂ ಬಿಟ್ಟು ಬಿಟ್ಟೀಯಾ?!

ಮೈಸೂರು ಮಿತ್ರ

ಭಾನುವಾರ, 9 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜನತೆಗೆ ಯಾವುದು ಗೊತ್ತಿಲ್ಲವೋ ಅದನ್ನು ತಿಳಿಸುವುದು ವಿದ್ಯಾಭ್ಯಾಸದ ಉದ್ದೇಶವಲ್ಲ, ಹೇಗೆ ವರ್ತಿಸಬೇಕೆಂಬುದನ್ನು ತಿಳಿಸುವುದೇ ಅದರ ಗುರಿ.

–ಜಾನ್‌ರಸ್ಕಿನ್

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಆಳೋ ಅರಸಿಲ್ಲ. / ಕೇಳೋ ಪ್ರಧಾನಿ ಇಲ್ಲ ಅಂದಂಗೆ

ನಿಮ್ಮ ಪತ್ರಗಳು

ರಸ್ತೆ ಕಾಮಗಾರಿ ತ್ವರಿತ ಪೂರ್ಣಗೊಳಿಸಿ

ಮಾನ್ಯರೆ,

ನಾನು ಮೈಸೂರಿನ ವಿಶ್ವೇಶ್ವರ ನಗರದ ಸಿವೇಜ್ ಫಾರಂ ಮುಖ್ಯ ರಸ್ತೆಯಲ್ಲಿರುವ ಒಂದು ಅಪಾರ್ಟ್‌ಮೆಂಟ್‌ನ ನಿವಾಸಿಯಾಗಿದ್ದೇನೆ. ಆರು ವರ್ಷಗಳ ಹಿಂದೆ ಈ ರಸ್ತೆಗೆ ಡಾಂಬರೀಕರಣ ಮಾಡಲಾಗಿತ್ತು. ಆದರೆ ಡಾಂಬರೀಕರಣ ಹೆಚ್ಚು ಸಮಯ ಉಳಿಯಲಿಲ್ಲ. ಈ ಮಧ್ಯೆ ಎಕ್ಸೆಲ್ ಪ್ಲಾಂಟ್ ಎದುರು ಚರಂಡಿ ಕಾಮಗಾರಿಗಾಗಿ ರಸ್ತೆ ಅಗೆದ ಕಾರಣ ಹಲವಾರು ದಿನ ವಾಹನ ಸಂಚಾರಕ್ಕೆ ಅವಕಾಶ ಇಲ್ಲದಂತಾಯಿತು. ದಿನ ಕಳೆದಂತೆ ರಸ್ತೆಯ ಸ್ಥಿತಿ ತೀರಾ ಹದಗೆಟ್ಟಿತು. ಈ ರಸ್ತೆಯ ದುಸ್ಥಿತಿಯ ಬಗ್ಗೆ ವಾರ್ಡ್ 62 ರ ಪಾಲಿಕೆ ಸದಸ್ಯರಲ್ಲಿ ಹಲವಾರು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಕೊನೆಗೊಂದು ದಿನ ಕೆ.ಆರ್. ಕ್ಷೇತ್ರದ ಶಾಸಕರು ಜೆ.ಪಿ.ನಗರದ ಎಕ್ಸೆಲ್ ಪ್ಲಾಂಟ್ ಮುಖ್ಯ ರಸ್ತೆಯ ಡಾಂಬರೀಕರಣಕ್ಕಾಗಿ ತಪೋವನ ಅಪಾರ್ಟ್‌ಮೆಂಟ್ ಎದುರು ಗುದ್ದಲಿ ಪೂಜೆ ನೆರವೇರಿಸಿದರು. ಇದಾದ ಬಳಿಕ ನಾಲ್ಕು ತಿಂಗಳು ಕಳೆದರೂ ಇಲ್ಲಿ ಯಾವುದೇ ಕೆಲಸ ಪ್ರಾರಂಭಿಸಲಿಲ್ಲ.

ಕೊನೆಗೆ ಫೆಬ್ರವರಿ 2023ರಲ್ಲಿ ವಿದ್ಯಾರಣ್ಯಪುರಂ ಕಡೆಯಿಂದ ಡಾಂಬರೀಕರಣ ಕಾಮಗಾರಿ ಆರಂಭಿಸಲಾಯಿತು. ಆದರೆ ತಪೋವನ ಅಪಾರ್ಟ್‌ಮೆಂಟ್‌ನಿಂದ ಸುಮಾರು 100 ಮೀ.ದೂರದಲ್ಲಿ ಕಾಮಗಾರಿಯನ್ನು ನಿಲ್ಲಿಸಲಾಗಿದೆ. ಅಪಾರ್ಟ್‌ಮೆಂಟ್ ಎದುರು ಅಲ್ಪಸ್ವಲ್ಪ ಇದ್ದ ರಸ್ತೆಯನ್ನೂ ಅಗೆದು ಹಾಕಿರುವುದರಿಂದ ಕಳೆದ ಆರೇಳು ತಿಂಗಳಿಂದ ಈ ಪ್ರದೇಶವೆಲ್ಲಾ ಧೂಳಿನಿಂದ ಆವರಿಸಿಕೊಂಡಿದೆ. ಇದರಿಂದ ಇಲ್ಲಿ ಸುತ್ತಮುತ್ತಲ ನಿವಾಸಿಗಳಿಗೆ ಉಸಿರಾಟದ ತೊಂದರೆ ಹಾಗೂ ಅಸ್ತಮಾದಂತಹ ಕಾಯಿಲೆಗಳು ಶುರುವಾಗಿದೆ. ಕೇವಲ ಈ ರಸ್ತೆ ಕಾಮಗಾರಿಯನ್ನು ಮಾತ್ರ ಸ್ಥಗಿತಗೊಳಿಸಲು ಕಾರಣವೇನೆಂದು ತಿಳಿದುಬಂದಿಲ್ಲ. ನಗರದ ವಿವಿಧ ಪ್ರದೇಶಗಳಲ್ಲಿ ಅನೇಕ ರಸ್ತೆ ಕಾಮಗಾರಿಗಳು ಮುಕ್ತಾಯಗೊಂಡಿದೆ. ವಿಪರೀತ ಧೂಳಿನ ಕಾರಣದಿಂದ ಈ ಪ್ರದೇಶದಲ್ಲಿ ವಾಸ ಮಾಡುವುದೇ ಕಷ್ಟಕರವಾಗಿದೆ. ಸಾಮಾನ್ಯ ನಾಗರಿಕರಿಗೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸುವಲ್ಲಿ ಈ ರೀತಿಯ ವಿಳಂಬ ನೀತಿಯಿಂದ ಜನರು ಬೇಸತ್ತಿದ್ದಾರೆ. ಆದುದರಿಂದ ನಿಂತು ಹೋಗಿರುವ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಇಲ್ಲಿಯ ನಿವಾಸಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸಂಬಂಧಪಟ್ಟವರಲ್ಲಿ ಮನವಿ.

–ತಪೋವನ ಅಪಾರ್ಟ್‌ಮೆಂಟ್ ನಿವಾಸಿಗಳು, ವಿಶ್ವೇಶ್ವರನಗರ, ಮೈಸೂರು.

ಬಡ ರೈತರ ಆತ್ಮಹತ್ಯೆಗೆ ಸರ್ಕಾರವೇ ಕಾರಣವಾಗಬೇಕಾಗುತ್ತೆ...!?

ಮಾನ್ಯರೆ,

ರಾಷ್ಟ್ರಮಟ್ಟದಲ್ಲಿ "ನಂದಿನಿ" ಹಾಲಿನ ಉತ್ಪನ್ನಗಳನ್ನು ಜನಪ್ರಿಯಗೊಳಿಸಿದ ಕೀರ್ತಿ ಕನ್ನಡದ ವರನಟ ರಾಜ್‌ಕುಮಾರ್ ಮತ್ತು ಅವರ ಸುಪುತ್ರ ಪುನೀತ್ ರಾಜಕುಮಾರ್‌ಗೆ ಸಲ್ಲಬೇಕು. ಇವರೀರ್ವರು ನಂದಿನಿ ಉತ್ಪನ್ನಗಳ ರಾಯಭಾರಿಯಾಗಿದ್ದರು. ರೈತರ ಬಾಳು ಬೆಳಗಿಸಲು ಇವರು ಕೆಎಂಎಫ್‌ನಿಂದ ಯಾವುದೇ ಸಂಭಾವನೆಯನ್ನೂ ಪಡೆಯಲಿಲ್ಲ. ಗ್ರಾಮೀಣ ಪ್ರದೇಶದ ಬಡ ಕುಟುಂಬದ ಜೀವನಾಡಿಯಾಗಿರುವ, ನಂದಿನಿ ಉತ್ಪನ್ನಗಳ ಜೊತೆ ಈಗ ಗುಜರಾತ್ ರಾಜ್ಯದ ಅಮುಲ್ ಉತ್ಪನ್ನಗಳನ್ನು




ಮಾರಾಟ ಮಾಡಲು ಯತ್ನಿಸುತ್ತಿರುವುದು, ಹೈನುಗಾರಿಕೆಯನ್ನೇ ನಂಬಿ ಬದುಕು ಕಟ್ಟಿಕೊಂಡಿರುವ ರಾಜ್ಯದ ಗ್ರಾಮೀಣ ರೈತರ ಪಾಲಿಗೆ 'ಮರಣ ಶಾಸನ' ಬರೆದಂತೆ.

ನಂದಿನಿ ಉತ್ಪನ್ನಗಳು ಗುಣಮಟ್ಟದಲ್ಲಿ ಸದಾ ರಾಷ್ಟ್ರ ಮಟ್ಟದಲ್ಲಿ ಜನಪ್ರಿಯವಾಗಿರುವುದರಿಂದಲೇ ತಿರುಪತಿಯ 'ಲಾಡು'ಗಳಿಗೂ ಕರ್ನಾಟಕದ ನಂದಿನಿ ತುಪ್ಪವನ್ನೇ ಬಳಸುತ್ತಾರೆ ಎಂದರೆ ನಂದಿನಿ ಉತ್ಪನ್ನಗಳಿಗೆ ಬೇರೆ ಯಾವುದು ಸರಿಸಾಟಿ ಇಲ್ಲ. ರಾಜ್ಯ ಸರ್ಕಾರ ಅಮುಲ್ ಉತ್ಪನ್ನಗಳ ಮಾರಾಟದ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿದ್ದರೆ, ಮುಂದೊಂದು ದಿನ ರೈತರು ಆತ್ಮಹತ್ಯೆ ಮಾಡಿಕೊಳ್ಳಲು ರಾಜ್ಯ ಸರ್ಕಾರವೇ ಕಾರಣವಾಗುತದೆ.

– ಬೂಕನಕೆರೆ ವಿಜೇಂದ್ರ, ಮೈಸೂರು

ಸಾಮಾಜಿಕ ಸೇವೆಗೆ ಸಂದ ಗೌರವ!

ಮಾನ್ಯರೆ,



ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷೆಯಾಗಿರುವ ಶ್ರೀಮತಿ ಸುಧಾಮೂರ್ತಿಯವರು "ಕರ್ನಾಟಕದ ಅಮ್ಮಾ" ಎಂದೇ ಜನಜನಿತ. ಇಂದಿನ ದಿನಗಳಲ್ಲಿ ಕೆಲವರು ಹಣ, ಆಸ್ತಿ, ಅಂತಸ್ತು, ಅಧಿಕಾರ ಬಂದೊಡನೆ ಅವರ ವ್ಯಕ್ತಿತ್ವದಲ್ಲಿ ಬದಲಾವಣೆಯಾಗಿ ನಾನು, ನನ್ನದು ಎಂಬ ಅಹಂಕಾರ ಮನೆ ಮಾಡಿ, ಮಾನವೀಯ ಮೌಲ್ಯಗಳಿಗೆ ತಿಲಾಂಜಲಿ ಇಟ್ಟು ಹಮ್ಮು ಬಿಮ್ಮಿನಿಂದ ವರ್ತಿಸುತ್ತಾರೆ. ಆದರೆ ದೇಶ ವಿದೇಶಗಳಲ್ಲಿ ಸಾಫ್ಟ್‌ವೇರ್ ಕಂಪನಿಗಳಿದ್ದು, ಸಾವಿರಾರು ಕೋಟಿಗಳ ಒಡತಿಯಾಗಿರುವ ಸುಧಾಮೂರ್ತಿಯವರು ಮಾತ್ರ ಇದಕ್ಕೆ ತದ್ವಿರುದ್ಧವಾಗಿದ್ದಾರೆ. ತಮ್ಮ ಕಂಪನಿಯ ನೌಕರರನ್ನು ಕುಟುಂಬ ಸದಸ್ಯರಂತೆ ಕಾಣುತ್ತಾರೆ. ಅದಕ್ಕೆ ಹೇಳುವುದು ತುಂಬಿದ ಕೊಡ ತುಳುಕುವುದಿಲ್ಲ ಎಂದು. ಸಾಮಾನ್ಯ ಜನರಂತೆ ಬೀದಿ, ಬದಿಯ ಅಂಗಡಿಗಳಲ್ಲಿ ಅಗತ್ಯವಸ್ತುಗಳನ್ನು ಖರೀದಿಸುತ್ತಾರೆ. ದೇವಾಲಯಗಳಿಗೆ ಹೋಗಿ ಹೂ ಕಟ್ಟಿ ಮತ್ತು ತರಕಾರಿಗಳನ್ನು ಹೆಚ್ಚಿರುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ.

ಅವರು ಬಡವರ, ನೊಂದವರ ಪಾಲಿಗೆ ಆಶಾಕಿರಣವಾಗಿದ್ದು, ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಇತರರಿಗೆ ಮಾದರಿ ಮತ್ತು ಸ್ಫೂರ್ತಿಯಾಗಿ ಎಲ್ಲರ ಮನ ಗೆದ್ದಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲೂ ಉತ್ತಮ ಬರವಣಿಗೆ, ಲೇಖನಗಳು ಹಾಗೂ ಅಂಕಣಕಾರರಾಗಿ ಅಪಾರ ಕೊಡುಗೆಯನ್ನು ನೀಡುವುದರ ಮೂಲಕ ಛಾಪೊತ್ತಿದ್ದಾರೆ. ಕಾರ್ಯಕ್ರಮಗಳಲ್ಲಿ ಭಾಷಣಗಳ ಮೂಲಕ ಜೀವನದ ನೀತಿ ಪಾಠಗಳನ್ನು ಹೇಳುವುದರ ಮೂಲಕ ಜನರಿಗೆ ಸನಿಹವಾಗಿದ್ದಾರೆ. ಸಾವಿರಾರು ಹೆಣ್ಣು ಮಕ್ಕಳಿಗೆ ದಾರಿದೀಪವಾಗಿರುವ ಅವರು, ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ನೆರವಾಗಿದ್ದಾರೆ. ರಾಜ್ಯ ನೆರೆ ಹಾವಳಿ, ಅತಿವೃಷ್ಟಿ, ಅನಾವೃಷ್ಟಿಯ ಹಾಗೂ ಕೊರೊನಾ ಸಂಕಷ್ಟದ ಸಂದರ್ಭದಲ್ಲಿ ಸಂತ್ರಸ್ತರಿಗೆ ಅಗತ್ಯ ವಸ್ತುಗಳ ಪೂರೈಕೆ, ಸೂರು ಕಲ್ಪಿಸಿ ಸಹಾಯ ಹಸ್ತವನ್ನು ಚಾಚುವುದರ ಮೂಲಕ ಮಾನವೀಯತೆ, ಹೃದಯ ವೈಶಾಲ್ಯತೆಯನ್ನು ಮೆರೆದಿರುವುದು ಇವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಪ್ರಾಣಿ ಪಕ್ಷಿಗಳ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿರುವ ಇವರು ಕೊರೊನಾ ಸಂಕಷ್ಟದಲ್ಲಿ ಮೈಸೂರಿನ ಜಯ ಚಾಮರಾಜೇಂದ್ರ ಮೃಗಾಲಯಕ್ಕೆ 3 ಬಾರಿ ದೇಣಿಗೆ ನೀಡಿ ಹಾಗೂ ಅಲ್ಲಿಯ ದಿನಗೂಲಿ ನೌಕರರಿಗೆ ಧನಸಹಾಯ ಮಾಡಿರುವುದನ್ನು ನಾವು ಇಲ್ಲಿ ಸ್ಮರಿಸಿಕೊಳ್ಳಬಹುದು.

ಅನೇಕ ಸಂಘ ಸಂಸ್ಥೆಗಳಿಗೆ ಉದಾರವಾಗಿ ಹಣಕಾಸಿನ ನೆರವನ್ನು ಚಾಚಿದ್ದಾರೆ. ಇಂದಿಗೂ ಕೂಡ ತಾಳಿಯಲ್ಲಿ ಕರಿಮಣಿಯನ್ನು ಹಾಕಿಕೊಂಡು ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿದಿದ್ದಾರೆ. ನಾಡು ಕಂಡ ಶ್ರೇಷ್ಠ ಆದರ್ಶ ಮಹಿಳೆಯರಲ್ಲಿ ಇವರು ಕೂಡ ಒಬ್ಬರಾಗಿದ್ದು, ಸರಳ, ಸಜ್ಜನಿಕೆ, ಸಾಧಕರು, ಸರಳ ಉಡುಪುಗಳನ್ನು ಧರಿಸುವುದರ ಮೂಲಕ ಮೇರು ವ್ಯಕ್ತಿತ್ವದ ಸಾಕಾರಮೂರ್ತಿಗಳಾದ ಶ್ರೀಮತಿ ಸುಧಾಮೂರ್ತಿಯವರ ಸಾಮಾಜಿಕ ಸೇವೆಯನ್ನು ಪರಿಗಣಿಸಿ, ಕೇಂದ್ರ ಸರ್ಕಾರವು ಭಾರತದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದು ಪ್ರಶಸ್ತಿಯ ಮೌಲ್ಯವೇ ದುಪ್ಪಟ್ಟಾಗುತ್ತದೆ.

–ಪರಶಿವಮೂರ್ತಿ ಎನ್.ಪಿ., ನಂಜೀಪುರ, ಸರಗೂರು ತಾ.



ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ಇಬ್ಬರು ಶ್ರೇಷ್ಠ ಸಂಗೀತಗಾರರು



ಸಂಗೀತ ವಿದ್ವಾನ್ ಕೆಂಪೇಗೌಡರು



ಮಹಾ ವೈದ್ಯನಾಥ ಅಯ್ಯರ್

ಇವರಿಬ್ಬರು ನಾಡಿನ ಶ್ರೇಷ್ಠ ಸಂಗೀತಗಾರರು. ಗಾಯನದಲ್ಲಿ ಒಬ್ಬರನ್ನೊಬ್ಬರು ಮೀರಿಸಿದವರು. ಅದರಲ್ಲೂ ಕೆಂಪೇಗೌಡರು ಮೈಸೂರು ಮಹಾರಾಜರಿಂದ ಮೆಚ್ಚುಗೆ ಗಳಿಸಿದ್ದರು. ಚಿಕ್ಕ ವಯಸ್ಸಿನಲ್ಲೇ ವಿವಾಹವಾಗಿ ಪುತ್ರಭಾಗ್ಯ ಪಡೆದಂತಹ ಗೌಡರು, ಅತೀ ಶೀಘ್ರದಲ್ಲೇ ಪತ್ನಿ ಹಾಗೂ ಪುತ್ರನನ್ನು ಕಳೆದುಕೊಂಡರು. ಆದರೆ, ಸಂಗೀತ ಉಸಿರಾಗಿಸಿಕೊಂಡು ಬದುಕು ಸಾಗಿಸಿದ್ದರು. ಒಂದು ಹಂತದಲ್ಲಿ ಆತ್ಮೀಯರಿಂದ ಬೀಳ್ಕೊಟ್ಟಂತಹ ಕೆಂಪೇಗೌಡರು ಮತ್ತೆಂದೂ ಯಾರ ಕಣ್ಣಿಗೂ ಬೀಳಲಿಲ್ಲ. ಅತ್ತ ಮಹಾ ವೈದ್ಯನಾಥ ಅಯ್ಯರ್ ಸಹ ಪ್ರಖ್ಯಾತ ಗಾಯಕರು. ತ್ಯಾಗರಾಜರ ನೇರ ಶಿಷ್ಯರಲ್ಲಿ ಒಬ್ಬರಾದ ಮನಂಬು ಚಾವಡಿ ವೆಂಕಟಸುಬ್ಬಯ್ಯರಲ್ಲಿ ಸಂಗೀತಾಭ್ಯಾಸ ಮಾಡಿ, ನಂತರ ತ್ಯಾಗರಾಜರ ಕೀರ್ತನೆ ಗಳಿಂದಲೇ ಪ್ರಭಾವಿತರಾದವರು. ಚಿಕ್ಕ ವಯಸ್ಸಿನಿಂದಲೇ ಸಂಗೀತ ಕಛೇರಿಗಳನ್ನು ನಡೆಸಿ ಎಲ್ಲರಿಂದಲೂ ಪ್ರಶಂಸೆ ಪಡೆದರು. ಈ ಇಬ್ಬರು ಮಹನೀಯರ ಪರಿಚಯ, ಅವರ ಸಾಧನೆ ವಿವರವಿದು;

ಮೊದಲನೆಯವರು ಕೆಂಪೇಗೌಡರು: ಇವರು ನಾಲ್ವಡಿ ಕೃಷ್ಣರಾಜ ಒಡೆಯರ್ ಆಸ್ಥಾನದಲ್ಲಿದ್ದ ಪ್ರಸಿದ್ಧ ಸಂಗೀತಗಾರರು. ಕೆಂಪೇಗೌಡರು ಬೆಂಗಳೂರು ಜಿಲ್ಲೆಯ ಬೇವೂರಿನಲ್ಲಿ ಹುಟ್ಟಿದರು. ಭೈರವಿ ರಾಗವನ್ನು ಆಲಾಪನೆ ಮಾಡುವುದರಲ್ಲಿ, ಪಲ್ಲವಿ ಹಾಗೂ ಕೀರ್ತನೆಗಳನ್ನು ಹಾಡುವುದರಲ್ಲಿಯೂ ಪ್ರಸಿದ್ಧರಾಗಿದ್ದರು. ಹಾಗಾಗಿ ಇವರು 'ಭೈರವಿ ಕೆಂಪೇಗೌಡರು' ಎಂದೇ ಪ್ರಸಿದ್ಧರಾಗಿದ್ದರು. ಆರಂಭದಲ್ಲಿ ಹಳ್ಳಿಯ ಹಾಡುಗಳನ್ನು ರಾಗವಾಗಿ ಹಾಡುತ್ತಿದ್ದರು. ಗೌಡರು ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಮೈಸೂರಿಗೆ ಬಂದರು. ಅಭಿಮಾನಿಯೊಬ್ಬರ ಸಲಹೆಯ ಮೇರೆಗೆ ತಮಿಳುನಾಡಿನ ಕೊಯಮತ್ತೂರಿಗೆ ತೆರಳಿ, ಅಲ್ಲಿ ಪಟ್ಟಂ ಸುಬ್ರಹ್ಮಣ್ಯ ಅಯ್ಯರ್ ಅವರ ಶಿಷ್ಯರಾದರು.

ಗೌಡರಿಗೆ ಸಂಗೀತ ಕಲಿಯಲು ಆಸಕ್ತಿ ಇದೆಯೇ ಎಂಬುದನ್ನು ಪರೀಕ್ಷಿಸಲು ಸುಬ್ರಹ್ಮಣ್ಯ ಅಯ್ಯರ್ ಅವರು ಮೊದಲು ಹಸು ಮೇಯಿಸುವ ಕೆಲಸಕ್ಕೆ ಹಾಕಿದರು. ಕೊನೆಗೆ ಅವರಿಗೆ ಸಂಗೀತಾಭ್ಯಾಸ ಮಾಡಿಸಿದರು. ಒಂದು ರಾತ್ರಿ ಅಯ್ಯರ್ ಅವರ ಮನೆಯ ಮಹಡಿಯಲ್ಲಿ ಸಂಗೀತಗಾರರೆಲ್ಲ ಸೇರಿದ್ದರು. ಅಯ್ಯರ್ ಅವರು ತಮಗೆ ಪ್ರಿಯವಾದ ಭೈರವಿ ರಾಗವನ್ನು ಆರಂಭಿಸಿದರು. ರಾತ್ರಿಯ ಊಟದ ಸಮಯವೂ ಮೀರುತ್ತಿತ್ತು. ಕೊನೆಗೆ ಅಯ್ಯರ್ ಅವರು ಊಟ ಆರಂಭಿಸಿದರು. ಈ ವೇಳೆ ಕೆಂಪೇಗೌಡರು ಸಂಗೀತ ಕಛೇರಿಯನ್ನು ಮುಂದುವರಿಸಿದರು. ಸುಬ್ರಹ್ಮಣ್ಯ ಅಯ್ಯರ್ ಅವರಿಗೆ ಕೆಂಪೇಗೌಡರ ಗಾಯನ ಕೇಳಿ ಬಹಳ ಸಂತೋಷವಾಯಿತು. ಪಟ್ಟಂ ಅವರು ಹೊಸ ಶಾಲನ್ನು ತರಿಸಿ, ಕೆಂಪೇಗೌಡರಿಗೆ ತಾವೇ ಹೊದಿಸಿ ಆಶೀರ್ವಾದ ಮಾಡಿದರು. ಭೈರವಿಯಲ್ಲಿ ನಿನ್ನನ್ನು ಮೀರಿಸುವವರು ಯಾರೂ ಇಲ್ಲ ಮತ್ತು ಮುಂದೆಯೂ ಯಾರೂ ಬರಲಾರರು ಎಂದು ಅಯ್ಯರ್ ಅವರೇ ಗೌಡರನ್ನು ಕೊಂಡಾಡಿದರು.

ಗೌಡರು ಆಗಿನ ಕಾಲದ ಪದ್ಧತಿಯಂತೆ ಚಿಕ್ಕವಯಸ್ಸಿನಲ್ಲಿಯೇ ಮದುವೆಯಾಗಿದ್ದರು. ಅವರಿಗೆ ಒಬ್ಬ ಮಗನಿದ್ದ. ತಿರುವಾಯೂರಿನಲ್ಲಿ ಸಂಗೀತ ಅಭ್ಯಾಸ ಮಾಡುತ್ತಿದ್ದ ಸಮಯದಲ್ಲಿ ಗೌಡರ ಪತ್ನಿ ಹಾಗೂ ಮಗ ನಿಧನರಾದರು.

ಈ ಹೊತ್ತಿಗಾಗಲೇ ಗೌಡರ ಕೀರ್ತಿ ಕನ್ನಡ ನಾಡಿನಲ್ಲಿ ವ್ಯಾಪಕವಾಗಿ ಹರಡಿತ್ತು. ಗೌಡರಿಗೆ ಮೈಸೂರಿನ ಅರಮನೆಯಿಂದ ಆಹ್ವಾನವೂ ಬಂದಿತು. ತಮ್ಮ ದುಃಖವನ್ನು ಮರೆಯುವ ಸಲುವಾಗಿ ಅರಮನೆಯ ಆಹ್ವಾನವನ್ನು ಒಪ್ಪಿಕೊಂಡು ಮೈಸೂರಿಗೆ ಬಂದರು. ಮೈಸೂರಿನ ಮಹಾರಾಜರ ಸಮ್ಮುಖದಲ್ಲಿ ಕೆಂಪೇಗೌಡರ ಸಂಗೀತ ಕಛೇರಿ ನಡೆಯಿತು. ಗೌಡರ ಸಂಗೀತ ಮೆಚ್ಚಿಕೊಂಡ ಮಹಾರಾಜರು ಗೌಡರನ್ನು ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿಕೊಂಡರು.

ಮೈಸೂರಿನ ಮಹಾರಾಜರ ಅತಿಥಿಯಾಗಿ ಬಂದಿದ್ದವರ ಎದುರಿಗೆ ಒಮ್ಮೆ ಗೌಡರು ಹಾಡಬೇಕಾಗಿ ಬಂದಿತು. ಮನಸ್ಸಿಲ್ಲದ ಮನಸ್ಸಲ್ಲಿ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಮನುಷ್ಯರ ಮುಂದೆ ಹಾಡುವುದು ವ್ಯರ್ಥ ಎಂದೆಣಿಸಿದ ಗೌಡರು, ನಂತರ ಯಾವುದಾದರೂ ದೇವಾಲಯದಲ್ಲಿ ದೇವರೆದುರಿಗೆ ಹಾಡುತ್ತಿದ್ದರು. ಕೆಲವು ಸಾರಿ ಆಪ್ತರೆದುರಿನಲ್ಲಿ ಮಾತ್ರ ಹಾಡುತ್ತಿದ್ದರು. ಇಂತಹ ಒಂದು ಸಂದರ್ಭದಲ್ಲಿಯೇ ಡಿ.ವಿ.ಗುಂಡಪ್ಪನವರು ಗೌಡರ ಸಂಗೀತವನ್ನು ಕೇಳಿ ಪ್ರಶಂಸೆಯ ಮಾತುಗಳನ್ನು ಆಡಿದರು.

ಆಗಿನ ಕಾಲದಲ್ಲಿ ಶ್ರೀಮಂತ ರಸಿಕರು, ಗೌಡರು ಹಾಡುತ್ತಿದ್ದ ಭೈರವಿ ರಾಗವನ್ನು ಕೇಳಿ, ಮೆಚ್ಚಿ ಸಾವಿರ ಸಾವಿರ ರೂಪಾಯಿ ಗೌರವಧನವಾಗಿ ಕೊಡುತ್ತಿದ್ದರು. ಒಮ್ಮೆ ಕಾಂಚೀಪುರಂನಲ್ಲಿ ಅವರು ಹಾಡುತ್ತಿದ್ದ ಕಛೇರಿಯೊಂದರಲ್ಲಿ ಭೈರವಿ ರಾಗವನ್ನು ಹಾಡುವಂತೆ ಕೋರಿಕೆ ಬಂದಾಗ, ತಾವು ಆ ರಾಗವನ್ನು ಏಕೆ ಹಾಡುವುದಿಲ್ಲವೆಂಬ ಸಂಗತಿಯನ್ನು ಸಭೆಗೆ ತಿಳಿಸಿದರು. ಆಗ ಸಾಹುಕಾರರೊಬ್ಬರು, ಮೂರು ಸಾವಿರ ರೂಪಾಯಿಗಳನ್ನು ತಂದು ದೇವರೆದುರಿಗೆ ಇಟ್ಟು ಭೈರವಿ ರಾಗವನ್ನು, ಹಾಡುವಂತೆ ಪ್ರಾರ್ಥಿಸಿದರು. ಯಾರ ಹಂಗಿಗೂ ಸಿಕ್ಕದೆ ಮೈಸೂರಿನ ಅರಮನೆಯನ್ನು ಬಿಟ್ಟು ಹೊರಟ ಕೆಂಪೇಗೌಡರು ಮೈಸೂರು ಮತ್ತು ತಮಿಳುನಾಡಿನ ಅನೇಕ ಕಡೆಗಳಲ್ಲಿ ಸುತ್ತಿದರು. ಸಮಯಕ್ಕೆ ಸರಿಯಾಗಿ ಊಟ ಮತ್ತು ನಿದ್ರೆಯಿಲ್ಲದೆ ಅಲೆದುದರಿಂದ ಗೌಡರ ಶಕ್ತಿ ಕುಂದುತ್ತಾ ಬಂದಿತು. ಅಂತಹ ಸಮಯದಲ್ಲಿ ಕನ್ನಡ ನಾಡಿನ ಮುಖಂಡರಾದ ಎಚ್.ಕೆ.ವೀರಣ್ಣಗೌಡರು, ಕೆಂಪೇಗೌಡರನ್ನು ಬಹಳ ಒತ್ತಾಯ ಮಾಡಿ ಕರೆತಂದು ತಮ್ಮ ಜೊತೆಯಲ್ಲಿ ಇರಿಸಿಕೊಂಡಿದ್ದರು. ಚನ್ನಪಟ್ಟಣದಲ್ಲಿದ್ದ ವೀರಣ್ಣಗೌಡರ ಕೊಠಡಿಯಲ್ಲಿ ಗೌಡರು ಆರು ತಿಂಗಳು ಇದ್ದರು.

ಸ್ವಾಮಿ ವಿವೇಕಾನಂದರು ಅಸ್ಸಾಮಿನಲ್ಲಿ ಪ್ರವಾಸ ಮಾಡುತ್ತಿದ್ದಾಗ, ಕೆಂಪೇಗೌಡರು ವಿವೇಕಾನಂದರ ಜೊತೆಯಲ್ಲಿದ್ದು, ತಮ್ಮ ಸಂಗೀತ ಸುಧೆಯಿಂದ ಅವರನ್ನು ತೃಪ್ತಿಪಡಿಸಿದರು. ಇದರ ನೆನಪಾಗಿ ವಿವೇಕಾನಂದರು ಗೌಡರಿಗೆ ಒಂದು ಕಾವಿ ಬಣ್ಣದ ಉತ್ತರೀಯವನ್ನು ಕೊಟ್ಟರು. ಕೆಂಪೇಗೌಡರು ಈ ಕಾವಿ ಬಣ್ಣದ ಉತ್ತರೀಯವನ್ನು ಪೂಜ್ಯಭಾವನೆಯಿಂದ ತಮ್ಮ ಬಳಿ ಸದಾ ಇಟ್ಟುಕೊಂಡಿದ್ದರು.

ಗೌಡರು ಘನ ವಿದ್ವಾಂಸರು: ಗೌಡರು ಎಂದೂ ಯಾವ ಹಂಗಿಗೂ ಒಳಪಟ್ಟವರಲ್ಲ. ಕೆಲವು ಸಮಯ ನನ್ನ ಜೊತೆಗಿದ್ದುದು ನನ್ನ ಪುಣ್ಯ ಎಂದು ವೀರಣ್ಣಗೌಡರು ಕೃತಜ್ಞತಾಪೂರ್ವಕವಾಗಿ ಕೆಂಪೇಗೌಡರನ್ನು ನೆನೆದಿದ್ದಾರೆ. ಕಡೆಗೆ ವೀರಣ್ಣಗೌಡರ ಒತ್ತಾಯಕ್ಕೆ ಮಣಿದು ಅವರು ಕೊಟ್ಟ ಹಣವನ್ನು ತೆಗೆದುಕೊಂಡು ಕೆಂಪೇಗೌಡರು ಬೆಂಗಳೂರಿನಲ್ಲಿ ರೈಲು ಹತ್ತಿದ್ದರು. ಆದರೆ ಚನ್ನಪಟ್ಟಣಕ್ಕೆ ಹಿಂದಿರುಗಲಿಲ್ಲ. ಕೆಂಪೇಗೌಡರಿಗಾಗಿ ಬೆಂಗಳೂರಿನಲ್ಲಿ ಎಲ್ಲಾ ಕಡೆಯೂ ಹುಡುಕಲು ಆರಂಭಿಸಿದರು. ಆದರೆ ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಕೆಂಪೇಗೌಡರನ್ನು ಯಾರೂ ಕಂಡವರಿಲ್ಲ. ಕೆಂಪೇಗೌಡರು ಕೊನೆಗೆ ಯಾರ ಕಣ್ಣಿಗೂ ಬೀಳಲೇ ಇಲ್ಲ.

ಎರಡನೆಯವರು ಮಹಾವೈದ್ಯನಾಥ ಅಯ್ಯರ್: ಇವರು 1844ರಲ್ಲಿ ಜನಿಸಿದರು. ಕರ್ನಾಟಕ ಸಂಗೀತ ಲೋಕದಲ್ಲಿ ತ್ಯಾಗರಾಜರ ಅನಂತರ ಬಂದ ಗಾಯಕರು ಮತ್ತು ಶ್ರೇಷ್ಠ ವಾಗ್ಗೇಯಕಾರರು. ಇವರು ತಮ್ಮ ಏಳನೆಯ ವಯಸ್ಸಿಗೆ ರಾಗಾಲಾಪನೆ ಮತ್ತು ಪಲ್ಲವಿ ಹಾಡುವ ಸಾಮರ್ಥ್ಯ ಗಳಿಸಿದ್ದು ಹತ್ತನೆ ವಯಸ್ಸಿಗೆ ತಮ್ಮ ಅಣ್ಣ ರಾಮಸ್ವಾಮಿ ಶಿವನ್ ಅವರ ಜೊತೆಗೆ ಸಂಗೀತ ಕಛೇರಿಗಳಲ್ಲಿ ಹಾಡುತ್ತಿದ್ದರು.

ತ್ಯಾಗರಾಜರ ನೇರ ಶಿಷ್ಯರಲ್ಲಿ ಒಬ್ಬರಾದ ಮನಂಬು ಚಾವಡಿ ವೆಂಕಟಸುಬ್ಬಯ್ಯನವರಲ್ಲಿ ಸಂಗೀತಾಭ್ಯಾಸವನ್ನು ಮಾಡಿ ಚಿಕ್ಕ ವಯಸ್ಸಿನಲ್ಲಿಯೇ ಸಂಗೀತ ಕಛೇರಿಗಳನ್ನು ನೀಡಲು ಆರಂಭಿಸಿದರು. ಅಯ್ಯರ್ ಅವರು ಪ್ರಾರಂಭದಿಂದಲೇ ತ್ಯಾಗರಾಜರ ಕೀರ್ತನೆಗಳಿಂದ ಪ್ರಭಾವಿತರಾಗಿದ್ದರು. ಒಂದು ವಿದ್ವತ್ ಸಭೆಯಲ್ಲಿ ತರುಣ ವೈದ್ಯನಾಥ ಅಯ್ಯರ್ ಚಕ್ರವಾಕ ರಾಗದ ಬಗೆಗೆ ಅದ್ಭುತ ವ್ಯಾಖ್ಯಾನವನ್ನು ನೀಡಿ, ಸಭೆಯಲ್ಲಿದ್ದ ಸಂಗೀತ ವಿದ್ವಾಂಸರಿಗೆ ಆಶ್ಚರ್ಯವನ್ನುಂಟು ಮಾಡಿದರು. ಸಭೆಯಲ್ಲಿ ಉಪಸ್ಥಿತರಿದ್ದ ಹಿರಿಯ ವೈದ್ಯನಾಥ ಅವರಂತಹ ವಿದ್ವಾಂಸರಿಗೂ ಕೂಡ, ತ್ಯಾಗರಾಜರು ಚಕ್ರವಾಕ ರಾಗದಲ್ಲಿ ಸುಗುಣಮುಲೆ ಮತ್ತು ಎಟುಲಬ್ರೋಚುವೊತ್ತಲಿಯ ಎಂಬ ಕೀರ್ತನೆಗಳನ್ನು ರಚಿಸಿದ್ದಾರೆಂಬ ವಿಷಯ ತಿಳಿದಿರಲಿಲ್ಲ. ಅಯ್ಯರ್ ಅವರಿಗೆ ಇನ್ನೂ ಹನ್ನೆರಡು ವರ್ಷಗಳಿದ್ದಾಗ ಹೆಚ್ಚಿನ ಸಂಗೀತ ಕೃತಿಗಳನ್ನು ಅಭ್ಯಾಸ ಮಾಡಲು ಆಗದೇ ಇದ್ದರೂ, ಇವರು ಕೆಲವೇ ಸುಪ್ರಸಿದ್ಧ ಕೀರ್ತನೆಗಳನ್ನು ಹಾಡಿ, ಆಲಾಪನೆ, ತನ, ಪಲ್ಲವಿ ಮತ್ತು ಕಲ್ಪನಾಸ್ವರಗಳಿಂದ ಸಭಿಕರನ್ನು ಸಂತೋಷಪಡಿಸುತ್ತಿದ್ದರು. ಭಾರತೀಯ ಸಂಗೀತಗಾರರಲ್ಲಿ ಮಹಾ ಎಂಬ ಬಿರುದನ್ನು ಪಡೆದು ಗೌರವಿಸಲ್ಪಟ್ಟವರು ಬಹಳ ಅಪರೂಪ. ಅಯ್ಯರ್ ಅವರು ಕಾನಡಾರಾಗದ ಸಿಂಹನಂದನ ತಾಳದಲ್ಲಿ ರಚಿಸಿದ ಗೌರೀನಾಯಕ ತಿಲ್ಲಾನ ಒಂದು ಮಹತ್ವದ ಕೃತಿ.

ಮಹಾವೈದ್ಯನಾಥ ಅಯ್ಯರ್ ಹಾಗೂ ಅವರು ಕುಟುಂಬದವರು ಪರಮದೈವ ಭಕ್ತರು. ವ್ರತ ಮತ್ತು ಉಪವಾಸಗಳನ್ನು ತಪ್ಪದೇ ಮಾಡುತ್ತಿದ್ದರು. ಅಯ್ಯರ್ ಅವರು ಯಾವಾಗಲೂ ಗೌರೀಶಂಕರ ರುದ್ರಾಕ್ಷಿ ಮಾಲೆಯನ್ನು ಧರಿಸುತ್ತಿದ್ದರು. ಅವರ ಸೌಮ್ಯ ಹಾಗೂ ಕಾಂತಿಯುಕ್ತ ಮುಖ ಇವರ ಆಧ್ಯಾತ್ಮವನ್ನು ಸಾರಿ ಹೇಳುವಂತಿತ್ತು. ಎಲ್ಲರೂ ಅಯ್ಯರ್ ಅವರನ್ನು ಶಿವ ಸಾನ್ನಿಧ್ಯದವರು ಎಂದು ಕರೆಯುತ್ತಿದ್ದರೇ ಹೊರತು ಅಪರೂಪಕ್ಕಾದರೂ ಇವರ ಹೆಸರನ್ನು ಕರೆಯುತ್ತಿರಲಿಲ್ಲ.

ಪಟ್ಟಂ ಸುಬ್ರಹ್ಮಣ್ಯ ಅಯ್ಯರ್ ಅವರು ತಮಗಿಂತ ಒಂದೂವರೆ ವರ್ಷ ದೊಡ್ಡವರಾದ ವೈದ್ಯನಾಥ ಅಯ್ಯರ್ ಅವರ ಮನೆಗೆ ಪ್ರತಿ ವರ್ಷವೂ ಉಪಾಕರ್ಮದ ದಿನ ಹೋಗಿ ಶಿವನಾಳ ಎಂದು ಅವರಿಗೆ ನಮಸ್ಕಾರ ಮಾಡಿ ಅವರಿಂದ ಆಶೀರ್ವಾದ ಪಡೆಯುತ್ತಿದ್ದರು.

ವೈದ್ಯನಾಥ ಅಯ್ಯರ್ ಅವರ ಸಂಗೀತ ದೈವದತ್ತವಾದದ್ದು. ಅಯ್ಯರ್ ಅವರಿಗೂ ಹಾಗೂ ಅವರ ಸೋದರ ರಾಮಸ್ವಾಮಿ ಶಿವನ್ ಅವರಿಗೂ ಮಹಾರಾಜರುಗಳಿಂದ ಮನ್ನಣೆ ಮತ್ತು ಗೌರವ ದೊರಕಿದ್ದಿತು.

ಪುದುಕೋಟೆಯ ಮಹಾರಾಜರು ಅಯ್ಯರ್ ಮತ್ತು ಅವರ ಸೋದರರ ಗಾಯನ ಕೇಳಿ ಸಂತೋಷದಿಂದ ವಸ್ತ್ರಭೂಷಣ ಹಾಗೂ ಖಿಲ್ಲತ್ತುಗಳನ್ನು ಬಹುಮಾನವಾಗಿ ಕೊಟ್ಟದ್ದು ಮಾತ್ರವಲ್ಲದೆ, ಇವರಿಬ್ಬರನ್ನೂ ತಮ್ಮ ದರ್ಬಾರ್ ರಥದಲ್ಲಿ ಕೂರಿಸಿ, ಸಂಗೀತ ವಾದ್ಯಗಳೊಂದಿಗೆ ಪುದುಕೋಟೆಯ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ಮಾಡಿಸಿದರು. ಅಯ್ಯರ್ ಅವರು ಮೈಸೂರಿನ ಮಹಾರಾಜರಿಂದಲೂ ಆಹ್ವಾನ ಪಡೆದು ಮೈಸೂರಿಗೆ ಬಂದರು. ವೈದ್ಯನಾಥ ಅಯ್ಯರ್ ಅವರು ಭೈರವಿ ರಾಗದಲ್ಲಿ ಹಾಡಿದ ಚಿಂತಯಾಮಿ ಕೀರ್ತನೆಯನ್ನು ಮಹಾರಾಜರು ಪೋನೋಗ್ರಾಫಿನ (ಗ್ರಾಮಫೋನ್ ರೆಕಾರ್ಡ್‌ನಲ್ಲಿ) ಮುದ್ರಿಸಿಕೊಂಡರು. ಸಂಗೀತ ಕಛೇರಿಯಲ್ಲಿ ಅರಮನೆಯ ಸಂಪ್ರದಾಯದ ಉಡುಪನ್ನು ಧರಿಸಲು ಅಯ್ಯರ್ ಅವರು ಸಂಕೋಚಪಟ್ಟಾಗ, ಮಹಾರಾಜರು ಅವರಿಗೆಂದೇ ಮಾಡಿಸಿದ ನಿಲುವಂಗಿ ಮತ್ತು ಚಿನ್ನದ ಸರವನ್ನೂ ಮತ್ತು ಮೈಸೂರಿನ ಪೇಟವನ್ನೂ ನೀಡಿ ಗೌರವಿಸಿದರು.

ತಿರುವಾಂಕೂರ್ ಮಹಾರಾಜರಾದ ಆಯಿಲ್ಯಂ ತಿರುನಾಳರ ಆಸ್ಥಾನದಲ್ಲಿ ಅಷ್ಟಾಗಿ ಬಳಕೆಯಲ್ಲಿಲ್ಲದ ಖರಹರ ಪ್ರಿಯರಾಗವು ಅದ್ಭುತ ಪರಿಣಾಮವನ್ನುಂಟು ಮಾಡಿತು. ಕನಕಾಂಗಿ ಮತ್ತು ಕೆಲವು ಅಪರೂಪದ ರಾಗಗಳನ್ನು ಹಾಡುವುದರಲ್ಲಿ ಅಯ್ಯರ್ ಪ್ರಸಿದ್ಧರಾಗಿದ್ದರು.

ಪಾಲ್ಘಾಟಿನಲ್ಲಿ ನಡೆದ ಒಂದು ಕಛೇರಿಯಲ್ಲಿ ದೀಕ್ಷಿತರ ವಾತಾಪಿ ಗಣಪತಿಂ ಭಜೇಹಂ ಎಂಬ ಹಂಸಧ್ವನಿ ರಾಗದ ಕೀರ್ತನೆಯನ್ನು ಮೆಚ್ಚಿಕೊಂಡು ಶ್ರೋತೃಗಳು ಮತ್ತೆ ಕೇಳಿದಾಗ ಅಯ್ಯರ್ ಮೂರು ಬಾರಿ ಹಾಡಿದರು.

ಮಹಾವೈದ್ಯನಾಥ ಅಯ್ಯರ್ ಅವರ ಗಾನಸುಧೆ ಕೇಳಿದ ಹಳೆಯ ತಲೆಮಾರಿನ ಸಂಗೀತ ವಿದ್ವಾಂಸರೊಬ್ಬರು, 'ಅಯ್ಯರ್ ಅವರ ತಂದೆ ಪಂಚನಾದ ಅಯ್ಯರ್ ಅವರನ್ನು ಒಮ್ಮೆ ಭೇಟಿಯಾದಾಗ ನಿಮ್ಮ ಮಗ ಎಂತಹ ಸುಮಧುರ ಕಂಠವನ್ನು ಹೊಂದಿದ್ದಾನೆ. ತ್ಯಾಗರಾಜರ ನಂತರ ಕರ್ಣಾನಂದ ಸಂಗೀತವನ್ನು ನೀಡಲು ಒಬ್ಬ ಸಂಗೀತಗಾರನಾದರೂ ಹುಟ್ಟಿಕೊಂಡನಲ್ಲ ಎಂದರಂತೆ.

ಕಾರ್ಯಕರ್ತನೇ ಹಾಸನದ ಜೆಡಿಎಸ್ ಅಭ್ಯರ್ಥಿ, ಬ್ಲ್ಯಾಕ್‌ಮೇಲ್ ನನ್ನ ಹತ್ತಿರ ನಡಿಯೋದಿಲ್ಲ

ಭವಾನಿ ರೇವಣ್ಣಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಟಾಂಗ್

ಹಾಸನ: ಕರ್ನಾಟಕ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದರೂ ಹಾಸನ ಕ್ಷೇತ್ರದ ಜೆಡಿಎಸ್ ಟಿಕೆಟ್ ಫೈಟ್ ಇನ್ನೂ ಮುಗಿದಿಲ್ಲ. ಒಂದೆಡೆ, ತನಗೆ ಟಿಕೆಟ್ ನೀಡದಿದ್ದರೆ ಪಕ್ಷೇತರರಾಗಿ ಸ್ಪರ್ಧಿಸುತ್ತೇನೆ ಎಂದು ಭವಾನಿ ರೇವಣ್ಣ ಎಚ್ಚರಿಕೆ ನೀಡಿದ್ದರೆ, ಇನ್ನೊಂದೆಡೆ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರೂ ಆಗಿರುವ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ, ಕಾರ್ಯಕರ್ತನಿಗೆ ಟಿಕೆಟ್ ನೀಡುವ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದಿದ್ದಾರೆ.

ಈ ಬಗ್ಗೆ ಬೆಂಗಳೂರಿನಲ್ಲಿ ಮಾತನಾಡಿದ ಅವರು, ಪಕ್ಷೇತರವಾಗಿ ಸ್ಪರ್ಧಿಸುತ್ತೇನೆ ಎಂದು ದೇವೇಗೌಡರಿಗೆ ಎಮೋಷನಲ್ ಬ್ಲ್ಯಾಕ್‌ಮೇಲ್ ಮಾಡಬಹುದು. ಆದರೆ ಇದೆಲ್ಲ ನನ್ನ ಹತ್ತಿರ ನಡೆಯುವುದಿಲ್ಲ ಎಂದು ಭವಾನಿ ರೇವಣ್ಣಗೆ ಪರೋಕ್ಷವಾಗಿ ಟಾಂಗ್ ಕೊಟ್ಟಿದ್ದಾರೆ.

ಕಾರ್ಯಕರ್ತನಿಗೆ ಟಿಕೆಟ್ ಅಂತಾ ನಿರಂತರವಾಗಿ ಹೇಳಿದ್ದೇನೆ. ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಒಬ್ಬ ಕಾರ್ಯಕರ್ತನೇ ಹಾಸನ ಕ್ಷೇತ್ರದ





ಜೆಡಿಎಸ್ ಅಭ್ಯರ್ಥಿಯಾಗಲಿದ್ದಾರೆ ಎಂದು ಹೇಳಿದ ಕುಮಾರಸ್ವಾಮಿ, ಯಾರು ಸಮರ್ಥವಾಗಿದ್ದಾರೆಂದು ನನಗೂ ಗೊತ್ತು, ನಿಮಗೂ ಗೊತ್ತು. ಕಾರ್ಯಕರ್ತರು ಯಾರಿಗೆ ಟಿಕೆಟ್ ಅಂತ ಕೂಗುತ್ತಿದ್ದಾರೆ. ತೀರ್ಮಾನ ಆಗಿದೆ. ಸದ್ಯದಲ್ಲೇ ಹಾಸನ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಘೋಷಣೆ ಆಗುತ್ತದೆ. ನನ್ನ ಪಕ್ಷದ ಜವಾಬ್ದಾರಿ ಬಳಿಕ ನನಗೆ ಕಾರ್ಯಕರ್ತ ಮುಖ್ಯ. ಎಲ್ಲರನ್ನೂ ಒಂದುಗೂಡಿಸಿ ಇಲ್ಲಿಯವರೆಗೂ ಉಳಿಸಿಕೊಂಡು ಬಂದಿದ್ದೇವೆ. ಅತ್ಯಂತ ತಾಳ್ಮೆಯಿಂದ ನಡೆದುಕೊಂಡಿದ್ದೇನೆ. ಯಾವುದೇ ಬ್ಲಾಕ್‌ಮೇಲ್‌ಗೆ ಹಿಂದೆ ಸರಿಯಲ್ಲ, ನನಗೆ ಪಕ್ಷ ಮುಖ್ಯ ಎಂದರು.

ಯಶವಂತಪುರದಲ್ಲಿ ನಡೆದ ಪಂಚರತ್ನ ಯಾತ್ರೆ ವೇಳೆ ಕುಮಾರಸ್ವಾಮಿ ಅವರನ್ನು ಭೇಟಿಯಾದ ಹಾಸನ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರು ಸ್ವರೂಪ್‌ಗೆ ಟಿಕೆಟ್ ನೀಡುವಂತೆ ಮನವಿ ಮಾಡಿದ್ದಾರೆ. ಮನವಿ ಸ್ವೀಕರಿಸಿದ ನಂತರ ಮಾತನಾಡಿದ ಕುಮಾರಸ್ವಾಮಿ, ನೀವು ಹೇಳಿದವರಿಗೇ ಟಿಕೆಟ್ ನೀಡಲಾಗುತ್ತದೆ ಎಂದು ಹೇಳಿದ್ದಾರೆ.

ಹಾಸನ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಟಿಕೆಟ್‌ಗಾಗಿ ಭವಾನಿ ರೇವಣ್ಣ ತೀವ್ರ ಹೋರಾಟ ನಡೆಸುತ್ತಿರುವುದು ಗೊತ್ತೇ ಇದೆ. ರೇವಣ್ಣ ಕುಟುಂಬ ಮತ್ತು ಕುಮಾರಸ್ವಾಮಿ ನಡುವೆ ಟಿಕೆಟ್ ಜಟಾಪಟಿ ನಡೆಯುತ್ತನೇ ಇದೆ. ಇವರನ್ನು ಮನವೊಲಿಸಲು ದಳಪತಿ ಮನೆಯಲ್ಲಿ ಸಂಧಾನಸಭೆ ನಡೆಯುತ್ತಲೇ ಇದೆ. ಆದರೂ ಹಾಸನ ಟಿಕೆಟ್ ಫೈಟ್ ಮುಂದುವರಿದಿದೆ. ಹೀಗಿದ್ದರೂ ಕುಮಾರಸ್ವಾಮಿಯನ್ನು ನಾನು ಯಾವತ್ತೂ ಬಿಟ್ಟು ಕೊಡಲ್ಲ ಎಂದು ಹೆಚ್.ಡಿ.ರೇವಣ್ಣ ಹೇಳಿದ್ದಾರೆ.

ಕಾಶ್ಮೀರದಲ್ಲಿ ಕೇಂದ್ರ ಸಚಿವ ಕಿರಣ್ ರಿಜಿಜು ಕಾರಿಗೆ ಟ್ರಕ್ ಡಿಕ್ಕಿ; ಅಪಾಯದಿಂದ ಪಾರು

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ರಾಂಬನ್ ಜಿಲ್ಲೆಯ ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರ ಕಾರಿಗೆ ಟ್ರಕ್ ಡಿಕ್ಕಿ ಹೊಡೆದಿದೆ. ಕಿರಣ್ ರಿಜಿಜು ಅವರು ಶನಿವಾರ ಸಂಜೆ ಕಾಶ್ಮೀರದಿಂದ ವಾಪಸ್ ಬರುತ್ತಿದ್ದ ವೇಳೆ ರಾಂಬನ್ ಜಿಲ್ಲೆಯ ಬನಿಹಾಲ್ ಪ್ರದೇಶದಲ್ಲಿ ಅಪಘಾತ ಸಂಭವಿಸಿದೆ. ಇದೊಂದು ಸಣ್ಣ ಅಪಘಾತ ಅಷ್ಟೆ, ಎಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಎಡಿಜಿ ಮುಖೇಶ್ ಸಿಂಗ್ ಹೇಳಿದ್ದಾರೆ. ಈ ಅಪಘಾತದಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ಮುಖೇಶ್ ಸಿಂಗ್ ಅವರು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com





ಹುಲಿರಾಯನಿಗೆ ಸಿಕ್ತು ಮೋದಿ ಅಭಯ...

ನಂ.ಶ್ರೀಕಂಠಕುಮಾರ್
ಮೊ: 9481067333



ಸುವರ್ಣ ಮಹೋತ್ಸವ ಆಚರಣೆ



ರಾಷ್ಟ್ರೀಯ ಹುಲಿ ಸಂರಕ್ಷಣಾ ಯೋಜನೆಯು 50 ವರ್ಷಗಳು ಪೂರೈಸಿದ ಹಿನ್ನೆಲೆ ಸುವರ್ಣ ಮಹೋತ್ಸವ ಆಚರಣೆಯನ್ನು ವಿಶ್ವದ ಶ್ರೇಷ್ಠ ಆಡಳಿತಗಾರರು, ವನ್ಯಜೀವಿ ಪ್ರೇಮಿಯೂ ಆದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಹೆಚ್ಚಿನ ಆಸಕ್ತಿ, ಸಂಭ್ರಮದಿಂದ ಆಚರಿಸಲು ಸ್ವತಃ ಬಂಡಿಪುರ ರಾಷ್ಟ್ರೀಯ ಅರಣ್ಯಕ್ಕೆ ಆಗಮಿಸಿದ್ದು, ಪೂರಕವಾದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಬಂಡಿಪುರದಲ್ಲಿ ಅಮೃತಕಾಲ ಸಮಯದಲ್ಲಿ ಹುಲಿ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರದ ದೃಷಿಕೋನ ಮತ್ತು ಬೆಳ್ಳಿಹಬ್ಬದ ಸ್ಮರಣಾರ್ಥ ನಾಣ್ಯ ಬಿಡುಗಡೆ, ಆನೆ ಶಿಬಿರಕ್ಕೆ ಭೇಟಿ, ಅಲ್ಲದೇ ಮಾವುತರೊಂದಿಗೆ ಸಂವಾದ, ಕಾಡಾನೆಯ ಜೀವ ಉಳಿಸಿದ ಅರಣ್ಯ ಸಿಬ್ಬಂದಿಯನ್ನು ಮತ್ತು ಆಸ್ಕರ್ ಪ್ರಶಸ್ತಿಗಳಿಸಿದ ಸಾಕ್ಷ್ಯ ಚಿತ್ರ 'ದಿ ಎಲಿಫೆಂಟ್ ವಿಸ್ಪರರ್ಸ್' ನಲ್ಲಿರುವ ಆನೆಮರಿ ಸಲಹಿದ ಬೊಮ್ಮ ಮತ್ತು ಬೆಳ್ಳಿ ದಂಪತಿಯನ್ನು ಸನ್ಮಾನಿಸಲಿದ್ದಾರೆ. ನಂತರ ಮೈಸೂರಿನಲ್ಲಿ ರಾಷ್ಟ್ರದ ಹುಲಿ ಗಣತಿಯ ಇತ್ತೀಚಿನ ವರದಿಯನ್ನು ಬಿಡುಗಡೆ ಮಾಡಲಿದ್ದು ಜೊತೆಗೆ 50ನೇ ವರ್ಷದ ಪ್ರಾಜೆಕ್ಟ್ ಟೈಗರ್ ಯೋಜನೆಯ ಅಂಗವಾಗಿ ವರ್ಷಪೂರ ಆಚರಣೆಯ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಅರಣ್ಯ ಸಂಪತ್ತು ಹಾಗೂ ಹುಲಿ ಸಂತತಿ ಸಂರಕ್ಷಣೆಯ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳು, ಯೋಜನೆಗಳನ್ನು ಜಾರಿಗೊಳಿಸುತ್ತಿರುವುದು ಹೆಮ್ಮೆಯ ವಿಷಯ. ಈಗಾಗಲೇ ಘೋಷಿತ ಅರಣ್ಯ ಪ್ರದೇಶಗಳ ಅಂತರರಾಜ್ಯ ಗಡಿ ಸಂರಕ್ಷಣೆಯ ಆಧುನೀಕರಣ ಮತ್ತು ಅಭಿವೃದ್ಧಿ, ಅಗತ್ಯ ಸಿಬ್ಬಂದಿ ನೇಮಕ, ಬೇಸಿಗೆ ಕಾಲದಲ್ಲಿ ಆಗಾಗ್ಗೆ ಸಂಭವಿಸಬಹುದಾದ ಕಾಡ್ಗಿಚ್ಚು ನಿಯಂತ್ರಣಕ್ಕೆ ವ್ಯವಸ್ಥೆ, ವನ್ಯಜೀವಿಗಳ ಕಳ್ಳಬೇಟೆಗಾರರನ್ನು ತಡೆಗಟ್ಟುವುದು ಸೇರಿದಂತೆ ಹಲವಾರು ನೈಸರ್ಗಿಕ ಸಮಸ್ಯೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗಮನಹರಿಸುವ ಅವಶ್ಯಕತೆ ಇದೆ. ಹಾಗೆಯೇ ಅರಣ್ಯದ ಗಡಿಭಾಗದಲ್ಲಿ ಇರುವ ಗ್ರಾಮಗಳಲ್ಲಿ ಉಗ್ರ ವ್ಯಾಘ್ರನಿಂದ ಜನರ ಹಾಗೂ ಜಾನುವಾರುಗಳ ಪ್ರಾಣಹಾನಿಗಳ ವರದಿಗಳೂ ಆಗುತ್ತಿದ್ದು ಹಾಗೆಯೇ ಮಾನವನನ್ನು ಬೇಟೆಯಾಡುವ ಇತರೆ ಮಾಂಸಾಹಾರಿ ವನ್ಯ ಪ್ರಾಣಿಗಳಿಂದಲೂ ಉಂಟಾಗುತ್ತಿರುವ ಉಪಟಳದಿಂದ ಪ್ರಾಣಹಾನಿಯಾದ ಸಂದರ್ಭದಲ್ಲಿ ಅಂತಹ ಕುಟುಂಬಗಳಿಗೆ ಸೂಕ್ತ ಹೆಚ್ಚಿನ ಪರಿಹಾರದ ಬಗ್ಗೆಯೂ ಗಮನ ಹರಿಸಿ ಅಗತ್ಯ ಕ್ರಮ ಕೈಗೊಳ್ಳುವ ಅಗತ್ಯವಿದೆ.


ಜಗತ್ತಿನಾದ್ಯಂತ ಇರುವ ಪ್ರಮುಖ ಅರಣ್ಯಗಳಲ್ಲಿ ಭಾರತದಲ್ಲಿನ ಗಂಧದಗುಡಿಯೆಂದೇ ಪ್ರಖ್ಯಾತವಾದ ಕರ್ನಾಟಕವು ಸಂವೃದ್ಧವಾದ ಅರಣ್ಯದಿಂದ ಕೂಡಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಸ್ವಾತಂತ್ರ್ಯ ಪೂರ್ವದ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಶ್ರೇಷ್ಠ ಆಡಳಿತಗಾರರಾಗಿ, ವನ್ಯಜೀವಿ ಪ್ರೇಮಿಗಳಾಗಿ ಅರಣ್ಯ ಸಂರಕ್ಷಣೆಗೆ ಇನ್ನಿಲ್ಲದ ಆದ್ಯತೆಯನ್ನು ನೀಡಿದ್ದರು. ಈ ನಿಟ್ಟಿನಲ್ಲಿ ಅಂದಿನ ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬಂಡಿಪುರದ ಸುತ್ತಮುತ್ತಲಿನ ಅರಣ್ಯ ಪ್ರದೇಶವನ್ನು ಕಾವಲು ವಲಯವನ್ನಾಗಿ ರೂಪಿಸಿ 1941ರಲ್ಲಿ ಶ್ರೀ ಗೋಪಾಲಸ್ವಾಮಿ ಬೆಟ್ಟದ ತಮ್ಮ ಇಷ್ಟ ದೈವವಾದ ಶ್ರೀ ವೇಣುಗೋಪಾಲಸ್ವಾಮಿ ಹೆಸರಿನಲ್ಲಿ ವೇಣುಗೋಪಾಲ ವನ್ಯ ಮೃಗ ಧಾಮವನ್ನು ಆರಂಭಿಸಿದರು. ಈ ಧಾಮದಲ್ಲಿ ಆಗಲೇ ಅಲ್ಲಲ್ಲಿ ಹುಲಿಯ ಸಂತತಿಯನ್ನು ನೈಸರ್ಗಿಕವಾಗಿ ಕಾಣಬಹುದಾಗಿತ್ತು.

ಆನಂತರ ವನ್ಯ ಮೃಗ ಹುಲಿಯ ಸಂತತಿ ಕ್ಷೀಣಿಸಿ ಕಣ್ಮರೆಯಾಗುತ್ತಿದ್ದು, ನಾಶದ ಅಂಚಿನಲ್ಲಿರುವುದನ್ನು ಗಮನಿಸಿ ಈ ಅಪೂರ್ವ ದೇಶೀಯ ವನ್ಯಜೀವಿ ಸಂತತಿಯನ್ನು ಉಳಿಸಿ, ವೃದ್ಧಿಪಡಿಸಬೇಕೆಂಬ ದೂರದೃಷ್ಟಿಯಿಂದ ದೇಶದ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು 1973ರಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಕಾಯ್ದೆಯನ್ನು ರೂಪಿಸಿ ದೇಶದಲ್ಲೇ ಪ್ರಪ್ರಥಮವಾಗಿ ಬಂಡಿಪುರದ ಅರಣ್ಯಧಾಮವನ್ನು ಆಯ್ಕೆಮಾಡಿ, ಇಲ್ಲಿ ಹುಲಿ ಸಂತತಿಯ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಿದರು. 1973ರ ನವೆಂಬರ್ 16ರಂದು ರಾಜ್ಯದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸು, ಬಂಡಿಪುರ ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿ ಸಂರಕ್ಷಣೆಯ ಯೋಜನೆಯನ್ನು ಉದ್ಘಾಟಿಸಿದರು.

ನಂತರದಲ್ಲಿ ರಾಷ್ಟ್ರೀಯ ಹುಲಿ ಯೋಜನೆಯನ್ನು ಪ್ರತಿಷ್ಠಿತ ಅಭಯಾರಣ್ಯಗಳಾದ ಕೊಡಗು ಜಿಲ್ಲೆಯ ನಾಗರಹೊಳೆ, 2011ರಲ್ಲಿ ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ರಂಗನ ಬೆಟ್ಟದ ಸುತ್ತಲಿನ ಸುಮಾರು 570 ಚ.ಕಿ.ಮೀ ಅರಣ್ಯ ಪ್ರದೇಶಕ್ಕೆ ವಿಸ್ತರಿಸಲಾಯಿತು. ಅಲ್ಲದೆ ಮಲೈ ಮಹದೇಶ್ವರ ಬೆಟ್ಟದ ಅರಣ್ಯವನ್ನು ಸಹ ರಾಷ್ಟ್ರೀಯ ಯೋಜನೆಯ ವ್ಯಾಪ್ತಿಗೆ ಒಳಪಡಿಸುವ ಪ್ರಯತ್ನಗಳು ನಡೆಯುತ್ತಿದೆ. ಬಂಡಿಪುರದ ಕಾವಲುಕಾಡು, ಕೊಡಗಿನ ನಾಗರಹೊಳೆ ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನಕ್ಕೆ ನೆರೆಯ ಪ್ರದೇಶವಾಗಿದ್ದು, ಕೇರಳ ರಾಜ್ಯದ ವೈನಾಡು ವನ್ಯಮೃಗ ಧಾಮ ಹಾಗೂ ತಮಿಳುನಾಡಿನ ಮುದುಮಲೈ ವನ್ಯ ಮೃಗಧಾಮಗಳಿಗೆ ಗಡಿಯನ್ನು ಹಂಚಿಕೊಂಡಿದೆ. ಕರ್ನಾಟಕ ಸರ್ಕಾರವು ಅಂತರರಾಜ್ಯಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದ ಒಳಗಿನ ಮಾರ್ಗದಲ್ಲಿ ರಾತ್ರಿ ವೇಳೆ ಸಂಚಾರ ನಿಷೇಧಿಸಿ ಅರಣ್ಯ ಹಾಗೂ ಪ್ರಾಣಿಪಕ್ಷಿ ಸಂಕುಲದ ರಕ್ಷಣೆಯ ಬದ್ಧತೆಯನ್ನು ತೋರಿರುವುದು ಸಮಾಧಾನ ಸಂತಸದ ವಿಷಯ.

ಬಂಡಿಪುರ ಸಂರಕ್ಷಿತ ಅರಣ್ಯ

ಬಂಡಿಪುರ ನಿಸರ್ಗ ಸಹಜ ಸುಂದರ ವಾತಾವರಣದಲ್ಲಿ ವೈವಿಧ್ಯಮಯ ವನ್ಯ ಮೃಗಗಳನ್ನು, ಅಪೂರ್ವ ಸಸ್ಯ ಸಂಪತ್ತನ್ನು ಕಾಣಬಹುದು. ಹುಲಿಯ ನಾಡಿನ ಅರಣ್ಯ ಕಾಶಿಯೆಂದೇ ಹೇಳಬಹುದು. ಬೃಹತ್ ಸಂಖ್ಯೆಯಲ್ಲಿನ ಜಿಂಕೆ, ಕಡವೆ, ಕರಡಿ, ಚಿಪ್ಪುಹಂದಿ ಮುಂತಾದ ವನ್ಯಮೃಗಗಳು ರಾಷ್ಟ್ರೀಯ ಪಕ್ಷಿಯಾದ ನವಿಲು, ಗಿಡುಗ, ಕಾಡುಕೋಳಿ, ಲಾವಕ್ಕಿ, ಮರಕುಟಿಗ ಮುಂತಾದ ಪಕ್ಷಿಸಂಕುಲಗಳು ಮೊಸಳೆ, ಹೆಬ್ಬಾವು, ಉಡ, ಆಮೆ ಇನ್ನಿತರ ಉರಗ ಕುಲಗಳು ವಿವಿಧ ಜಾತಿಯ ಮಂಗಗಳು ಬಂಡಿಪುರದ ಅರಣ್ಯದೆಲ್ಲೆಡೆ ಸ್ವೇಚ್ಛೆಯಿಂದ ವಿಹರಿಸುವುದನ್ನು ಪ್ರವಾಸಿಗರು ಕಾಣಬಹುದು. ಕಾಡಾನೆಗಳ ವೀಕ್ಷಣೆಯ ಅನುಭವ ವಿಶಿಷ್ಟವಾದುದು. ಗಂಭೀರ ಗತಿಯಿಂದ ಸಾಲಾಗಿ ಸಾಗುವ ಆನೆಗಳ ಹಿಂಡನ್ನು ನೋಡುವುದೇ ಮನಮೋಹಕ. ಅದೃಷ್ಟವಿದ್ದಲ್ಲಿ ಹುಲಿರಾಯನು ಅವಿಸ್ಮರಣೀಯ ದರ್ಶನ ನೀಡುತ್ತಾನೆ. ಇಂತಹ ಮೈನವಿರೇಳಿಸುವ ಅನೇಕ ನೋಟಗಳನ್ನು ಬಂಡಿಪುರದಲ್ಲಿ ಕಾಣಲು ಸಾಧ್ಯ. ಎತ್ತರಕ್ಕೆ ತಲೆಯೆತ್ತಿ ನಿಂತಿರುವ ತೇಗ, ಬೀಟೆ ಮತ್ತು ಅಮೂಲ್ಯವಾದ ಶ್ರೀಗಂಧದ ಮರಗಳು ಸಮೃದ್ಧವಾಗಿದ್ದು ಗಂಧದಗುಡಿಯನ್ನಾಗಿಸಿದೆ. ನಡುವೆ ಮನತಣಿಸುವ ರೋಲಿಂಗ್ ರಾಕ್ ಜಲಪಾತದ ನೋಟ ಅತೀ ಸುಂದರ. ಬಂಡಿಪುರ ಸಂರಕ್ಷಿತ ಅರಣ್ಯ ಪ್ರದೇಶವು ಸುಮಾರು 900 ಚ.ಕಿ.ಮೀ ವಿಸ್ತೀರ್ಣದವರೆಗೆ ವ್ಯಾಪಿಸಿದ್ದು ಭಾರತದ ಎರಡನೇ ಅತೀ ದೊಡ್ಡ ಹುಲಿ ಸಂರಕ್ಷಣಾ ನೆಲೆಯಾಗಿದೆ. ಇಲ್ಲಿ ಸುಮಾರು 170 ರಿಂದ 180ರ ಸಂಖ್ಯೆಯಷ್ಟು ಹುಲಿರಾಯನ ಬಳಗವಿದೆ ಎಂದು ಅಂದಾಜಿಸಲಾಗಿದೆ.



ನಾಗರಹೊಳೆ ಅಭಯಾರಣ್ಯ

ನಾಗರಹೊಳೆ ನ್ಯಾಷನಲ್ ಪಾರ್ಕ್ ಹಾಗೂ ಹುಲಿ ಸಂರಕ್ಷಣಾ ಪ್ರದೇಶವು ಅತ್ಯಂತ ಪ್ರತಿಷ್ಠಿತ ಅಭಯಾರಣ್ಯಗಳಲ್ಲಿ ಪ್ರಮುಖವಾದುದು. ಈ ಪ್ರದೇಶವು ವಿಶ್ವದ ಏಳು ಜೈವಿಕ ವಲಯಗಳಲ್ಲಿ ಒಂದಾಗಿರುವ ನೀಲಗಿರಿ ಜೈವಿಕ ವಲಯ ಭಾಗವಾಗಿದ್ದು ಉತ್ತಮ ಅರಣ್ಯ ಸಂಪತ್ತು ಹಾಗೂ ವನ್ಯಜೀವಿಗಳಿಗೆ ಪ್ರಶಸ್ತ ವಾಸಸ್ಥಾನವಾಗಿದೆ. ನಿತ್ಯ ಹರಿದ್ವರ್ಣ ಮತ್ತು ತೇವಾಂಶವುಳ್ಳ ಅರಣ್ಯವಾಗಿದ್ದು ಅತೀ ಶ್ರೇಷ್ಠ ಗುಣಮಟ್ಟದ ತೇಗದ ಮರಗಳ ಬೀಡಾಗಿದೆ. 2016ರಲ್ಲಿ ಈ ಅಭಯಾರಣ್ಯವನ್ನೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಯೋಜನೆಯ ವ್ಯಾಪ್ತಿಗೆ ತರಲಾಗಿದೆ. ಮೈಸೂರು ಜಿಲ್ಲೆಯ ಈ ಅಭಯಾರಣ್ಯವನ್ನು ಹುಣಸೂರು, ವೀರನಹೊಸಹಳ್ಳಿ, ಅಂತರಸಂತೆ, ಮೇಟಿಕುಪ್ಪೆ ಮತ್ತು ಡಿ.ಬಿ ಕುಪ್ಪೆ ವಲಯಗಳಾಗಿ ವಿಂಗಡಿಸಿ ಸುಮಾರು 350 ಚ.ಕಿ.ಮೀ ವ್ಯಾಪ್ತಿಯನ್ನು ಹೊಂದಿರುತ್ತದೆ. ಇದಕ್ಕೆ ಹೊಂದಿಕೊಂಡಂತಿರುವ ಕೊಡಗು ಜಿಲ್ಲೆಯ ನಾಗರಹೊಳೆ, ಕಲ್ಲಹಳ್ಳಿ ಮತ್ತು ಆನೆಚೌಕೂರು ವಲಯಗಳನ್ನು ನಿರ್ಮಿಸಿ ಸುಮಾರು 290 ಚ.ಕಿ.ಮೀ ಅರಣ್ಯ ಪ್ರದೇಶದ ವಿಸ್ತೀರ್ಣವನ್ನು ಹೊಂದಿರುತ್ತದೆ. ಒಟ್ಟಾರೆ ನಾಗರಹೊಳೆ ರಾಷ್ಟ್ರೀಯ ಹುಲಿ ಅಭಯಾರಣ್ಯದಲ್ಲಿ ಅಂದಾಜು 120 ರಿಂದ 130ರ ವರೆಗೆ ಹುಲಿಗಳಿದ್ದು, ನಿತ್ಯವೂ ಒಂದಲ್ಲ ಒಂದು ದರ್ಶನ ನೀಡುತ್ತಿವೆ. ಅಲ್ಲದೆ ಪ್ರಮುಖವಾಗಿ ವನ್ಯಜೀವಿಗಳಾದ ಚಿರತೆ, ಆನೆಗಳ ಹಿಂಡನ್ನು ವಿಶೇಷವಾಗಿ ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಕಾಣಬಹುದಾಗಿದೆ. 1992ರಲ್ಲಿ ಈ ಅಭಯಾರಣ್ಯವನ್ನು ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ಎಂದು ಮರುನಾಮಕರಣ ಮಾಡಲಾಗಿದೆ.



ವಾರಭವಿಷ್ಯ

9.4.2023 ರಿಂದ 15.04.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮೀನ, ಮೇಷ, ಚಂದ್ರ–ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಜ–ಮಿಥುನ, ಬುಧ–ಮೇಷ, ಗುರು–ಮೀನ ಶುಕ್ರ–ವೃಷಭ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಖಾಸಗಿ ಉದ್ಯೋಗಿಗಳಿಗೆ ವಿಶೇಷ ಧನಲಾಭ, ಹೊಸ ಉದ್ದಿಮೆ ಸ್ಥಾಪಿಸಲು ಸಮಯ ಅನುಕೂಲವಾಗಿದೆ. ಹಲವರಿಗೆ ಸಂಸ್ಥೆಯ ಒಡೆತನ ಬಳುವಳಿಯಾಗಿ ದೊರೆಯುವುದು. ಶುಭ ಶನಿದೇವನಿಂದ ಆಸ್ತಿ ವಿಭಾಗ ವಿಚಾರಗಳು ತೊಂದರೆ ಇಲ್ಲದೆ ಸಂಪನ್ನವಾಗುವುದು. ಇಲ್ಲ–ಸಲ್ಲದ ಖರ್ಚುಗಳು ಎದುರಾಗುವುದು. ಸಂಶಯ ಪ್ರವೃತ್ತಿಯಿಂದ ಕುಟುಂಬದಲ್ಲಿ ಅಶಾಂತಿಗೆ ಕಾರಣವಾಗುವುದು.
ಶ್ರೀ ಗಣಪತಿ ಸೇವೆ. ಶುಭ ಸಂಖ್ಯೆ–1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಸ್ವಸಾಮರ್ಥ್ಯದಿಂದ ಉನ್ನತ ಸ್ಥಾನ ಪ್ರಾಪ್ತಿ. ನಿಮ್ಮ ಗೌರವ ಪ್ರತಿಷ್ಠೆಗಳು ವೃದ್ಧಿಯಾಗಲಿದೆ. ವಿರೋಧಿಗಳ ಉಪಟಳವನ್ನು ಸಮರ್ಥವಾಗಿ ಹಿಮ್ಮೆಟ್ಟಿಸುವಿರಿ. ಸಾಮಾಜಿಕ ಜೀವನದಲ್ಲಿ ಎದುರಾಗುವ ಆತಂಕಗಳು ಸೂರ್ಯನೆದುರಲಿ ಮಂಜು ಕರಗಿದಂತೆ ಅದೃಶ್ಯವಾಗುವುದು. ವಿವಾಹಯೋಗ್ಯರಿಗೆ ಸೂಕ್ತ ಬಾಳಸಂಗಾತಿ ದೊರೆಯಲು ಗುರು–ಶುಕ್ರರ ಕೃಪೆ ಚೆನ್ನಾಗಿದೆ. ಸರ್ಕಾರಿ ಕಚೇರಿ ಕೆಲಸಗಳು ನಿಧಾನಗತಿಯಲ್ಲಿ ಸಾಗುವುದು.
ಶ್ರೀ ಚಾಮುಂಡೇಶ್ವರಿ ಉಪಾಸನೆ. ಶುಭ ಸಂಖ್ಯೆ–2.

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)
ಕೆಲಸ ಕಾರ್ಯಗಳ ಬಗ್ಗೆ ವಿಘ್ನಗಳು ಉಂಟಾದರೂ ಎದೆಗುಂದದೆ ಮುಂದುವರೆದು ಯಶಸ್ಸನ್ನು ಸಾಧಿಸಲಿದ್ದೀರಿ. ಸಹೋದ್ಯೋಗಿಗಳ ಸಹಕಾರದಿಂದ ನೆಮ್ಮದಿ ದೊರಕಲಿದೆ. ವ್ಯಾಪಾರ ವ್ಯವಹಾರಗಳು ಮಂದಗತಿಯಲ್ಲಿ ಸಾಗುವುದು. ವಿದ್ಯಾರ್ಥಿಗಳು ಆಲಸಿಗರಾಗಿ ಗುರಿ ಮುಟ್ಟುವುದರಲ್ಲಿ ವಿಫಲರಾಗುವರು. ಸಿಮೆಂಟು, ಕಬ್ಬಿಣ ವ್ಯಾಪಾರಿಗಳಿಗೆ ನಿರೀಕ್ಷಿತ ಲಾಭ ದೊರೆಯದು. ಸಟ್ಟಾ, ಲಾಟರಿಗಳಿಂದ ಸಡನ್ ಧನಲಾಭವಾದೀತು.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–4.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ವಾರದ ಆರಂಭ ಗೆಳೆಯರೊಡನೆ ಆಮೋದ–ಪ್ರಮೋದಗಳಲ್ಲಿ ಕಳೆಯುವುದು. ಮಾಡುವ ಕೆಲಸವನ್ನು ನಿರ್ಮಲ ಚಿತ್ತರಾಗಿ ನಿರ್ವಹಿಸಿ, ಗುರು ದರ್ಶನದಿಂದ ಗುರಿ ಕಾಣುತ್ತದೆ. ರೆಡಿಮೇಡ್ ಗಾರ್ಮೆಂಟ್ಸ್ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ಲೇವಾದೇವಿ ಸಂಸ್ಥೆಗಳಿಗೂ ಆದಾಯದಲ್ಲಿ ಹೆಚ್ಚಳವಾಗುವುದು. ಚತುರ್ಥ ಕೇತು ಆರೋಗ್ಯಕ್ಕೆ ಕುಂದು ತರುವನು. ಕರುಳು ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ದುರ್ಗಾ ಪರಮೇಶ್ವರಿ ದರ್ಶನ. ಶುಭ ಸಂಖ್ಯೆ–8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಸಪ್ತಾಹದ ಆದಿಗೆ ಹೊಸ ಮಿತ್ರರ ಪರಿಚಯ. ವಯಸ್ಸಿಗೆ ಬಂದ ಮಕ್ಕಳ ಚಲನ–ವಲನಗಳ ಮೇಲೆ ಗಮನವಿಡಿ. ರಾಜಕೀಯ ವ್ಯಕ್ತಿಗಳು ಜನಾಪವಾದಕ್ಕೆ ಗುರಿಯಾಗುವರು. ವಾರಮಧ್ಯೆ ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ದೊಡ್ಡ ಯೋಜನೆಗಳು ದೊರಕುವ ಸಂಭವವಿದೆ. ದೊಡ್ಡ ರೀತಿಯಲ್ಲಿ ಬಂಡವಾಳ ಹೂಡುವುದನ್ನು ಮುಂದೂಡಿ. ವಾರಾಂತ್ಯಕ್ಕೆ ಪ್ರಭಾವಿ ವ್ಯಕ್ತಿಗಳ ಭೇಟಿ, ಸಂಪರ್ಕಗಳು ಲಾಭದಾಯಕವೆನಿಸುವುದು.
ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–6.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಈ ವಾರದಲ್ಲಿ ಹಲವು ಮೂಲಗಳಿಂದ ಧನ ಸಂಚಯವಾಗುವುದು. ಋಣಮುಕ್ತರಾಗಲು ಸದವಕಾಶವಿದೆ. ಪಿತ್ರಾರ್ಜಿತ ಆಸ್ತಿ ಸಂಬಂಧಿತ ವಿಚಾರಗಳು ಸೆಟಲ್ ಆಗುವುದು. ಮನೆಯಲ್ಲಿ ವಿವಾಹಾದಿ ಶುಭ ಕಾರ್ಯಾನುಕೂಲ, ಯತ್ನಕಾರ್ಯ ಸಿದ್ಧಿಗಳು ಉಂಟಾಗಲಿದೆ. ಸತ್ಕರ್ಮಾಚರಣೆಯಿಂದ ಜನಾದರ ಗಳಿಸುವಿರಿ. ದೀರ್ಘಕಾಲಿನ ಅನಾರೋಗ್ಯದಿಂದ ಬಿಡುಗಡೆ ಆಗುವುದು. ಸಮಾಜಘಾತುಕರ ಸಂಪರ್ಕ ನಿಮಗೆ ಮುಳುವಾಗುವುದು.
ಶ್ರೀ ವೆಂಕಟೇಶ್ವರ ಪೂಜಿಸಿ. ಶುಭ ಸಂಖ್ಯೆ–9.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ನಿಮ್ಮ ರಾಶಿಗೆ ಶುಭ ಚಂದ್ರನ ಪ್ರವೇಶವಾಗಿದೆ. ಮನದಲ್ಲಿ ಹರುಷ, ಮುಖದಲ್ಲಿ ಮಂದಹಾಸ, ಮುಖ್ಯ ಕೆಲಸಗಳು ಸುಸೂತ್ರವಾಗಿ ನೆರವೇರುವುದು. ಮನೆಯಲ್ಲಿ ಮಂಗಳಕಾರ್ಯಕ್ಕೆ ನಾಂದಿ. ಕೆಲವರಿಗೆ ಹೊಸ ಉದ್ಯೋಗ ದೊರೆಯಲಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಗೌರವಕ್ಕೆ ಭಾಜನರಾಗುವಿರಿ. ರಾಹು–ಕೇತುಗಳು ಅಶುಭರಿದ್ದು, ಅಡ್ಡ ದಾರಿಯಲ್ಲಿ ನಡೆದು ತೊಂದರೆಗೆ ಗುರಿಯಾಗುವಿರಿ.
ಶ್ರೀ ಲಕ್ಷ್ಮೀದೇವಿ ದರ್ಶನ. ಶುಭ ಸಂಖ್ಯೆ–7.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)
ಸಪ್ತಾಹದ ಆದಿಗೆ ಹೊಸ ಹುರುಪಿನಿಂದ ಸ್ವಂತ ಕೆಲಸಗಳು ಸಂಪನ್ನಗೊಳ್ಳಲಿವೆ. ವಾರಪೂರ್ತಿ ಆದಾಯ ಚೆನ್ನಾಗಿರುತ್ತದೆ. ಆದಾಯಕ್ಕೆ ತಕ್ಕಂತೆ ಖರ್ಚುಗಳೂ ಎದುರಾಗಲಿವೆ. ವಿದ್ಯಾರ್ಥಿಗಳ ಜೀವನದಲ್ಲಿ ಹೊಸ ತಿರುವುಗಳು ಉಂಟಾಗುವುದು. ವಾರಮಧ್ಯೆ ಮಿತ್ರರೊಡಗೂಡಿ ಸಂತೋಷ ಕೂಟಗಳು. ಯಾವುದೇ ಆಸ್ತಿ ಖರೀದಿಗೆ ಮುನ್ನ ದಾಖಲೆಗಳನ್ನು ಪರಿಶೀಲಿಸಿ ಮುಂದುವರೆಯಿರಿ. ಶಿರೋವೇದನೆ ಕಾಡಬಹುದು.
ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–5.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಈ ವಾರ ಮಹತ್ತರ ಕೆಲಸಗಳು ಪೂರ್ಣಗೊಳ್ಳಲಿದೆ. ಯಶಃ, ಕೀರ್ತಿ, ಲಾಭಗಳಿಗೆ ಭಾಜನರಾಗುವಿರಿ. ಎಣ್ಣೆಕಾಳು, ಹತ್ತಿ ಫಸಲುಗಳು ಉತ್ತಮ ಆದಾಯವನ್ನು ತರುವುದು. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಹೊಸ ಒಡಂಬಡಿಕೆಗಳು ಉಂಟಾಗುವುದು. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟುವುದು. 'ಮಾಡಿದ್ದು ಉಣ್ಣೋ ಮಾರಾಯ' ಎಂಬಂತೆ. ಶರೀರದ ಆರೋಗ್ಯ 'ಕೈ' ಕೊಡಬಹುದು. ಅನಗತ್ಯ ತಿರುಗಾಟಗಳನ್ನು ತ್ಯಜಿಸಿ.
ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–8.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ಸಾಡೇಸಾತಿ ಪ್ರಭಾವದ ನಡುವೆಯೂ ಕಷ್ಟಪಟ್ಟು ಮಾಡಿದ ಕೆಲಸ ಸಫಲವಾಗುವುದು. ಗುರಿ ಮುಟ್ಟುವಲ್ಲಿ ಗುರುಗಳ ಮಾರ್ಗದರ್ಶನ ದೊರೆಯುವುದು. ಯಂತ್ರೋಪಕರಣ ವ್ಯಾಪಾರಿಗಳಿಗೆ ಉತ್ತಮ ಲಾಭವಾಗಲಿದೆ. ಪಾಲುದಾರಿಕೆ ವ್ಯವಹಾರಗಳನ್ನು ಮಾಡದಿರಿ. ಭೂಮಿ ಕ್ರಯ–ವಿಕ್ರಯ ವಿಷಯಗಳು ಗೊಂದಲದ ಗೂಡಾಗಲಿದೆ. ಸುಳ್ಳು ದಾಖಲೆಗಳಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ.
ಶ್ರೀ ಶ್ರೀನಿವಾಸ ಉಪಾಸನೆ. ಶುಭ ಸಂಖ್ಯೆ–3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಈ ವಾರದಲ್ಲಿ ಹಂತ–ಹಂತವಾಗಿ ಮೇಲುಸ್ತರಕ್ಕೆ ಬರುವಿರಿ. ಹಳೆಯ ಸಾಲಗಳು ವಸೂಲಾಗುವ ಸಾಧ್ಯತೆ ಇದೆ. ವೈಯಕ್ತಿಕ ಹಾಗೂ ಸಾಮಾಜಿಕ ವಿಷಯಗಳಲ್ಲಿ ಪ್ರಗತಿಪರ ಚಿಂತನೆಗಳಿಂದ ಖ್ಯಾತಿಯನ್ನು ಗಳಿಸುತ್ತೀರಿ. 'ಮಾತು ಬಲ್ಲವ ಮಾಣಿಕ್ಯ ತಂದ' ಎಂಬಂತೆ ನಿಮ್ಮ ಉತ್ತಮ ಮಾತುಗಳು ನಿಮ್ಮ ಉಚ್ಛ್ರಾಯಕ್ಕೆ ಸಹಾಯಕವಾಗಲಿದೆ. ವಾರಾಂತ್ಯಕ್ಕೆ ಉದ್ಯೋಗ, ವ್ಯವಹಾರಗಳಲ್ಲಿ ಧನಲಾಭ. ಸಂಧಿವಾತ ಕಾಡಿಸಬಹುದು.
ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ–7.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಉದ್ಯೋಗ ವ್ಯವಹಾರಗಳಲ್ಲಿ ವಿಶೇಷ ಆಸಕ್ತಿ ವಹಿಸುವುದರಿಂದ ಹೆಚ್ಚಿನ ಹಣ ಸಂಪಾದನೆ ಆಗುವುದು. ಸನ್ನದುದಾರರಿಗೆ ದೊಡ್ಡ ಫೈಲ್ ದೊರೆಯುವುದು. ಪರೋಪಕಾರ ಬುದ್ಧಿಯಿಂದ ಜನಾದರ ಗಳಿಸುವಿರಿ. ಎಲ್ಲರನ್ನು ಅನುಮಾನಿಸಿ ನೋಡುವುದರಿಂದ 'ಅನುಮಾನಂ ಪೆದ್ದ ರೋಗಂ' ಎಂಬಂತೆ ಆಗುವುದು. ವಿದ್ಯಾರ್ಥಿಗಳು ಓದಿನಲ್ಲಿ ಹಿಂದೆ ಬೀಳುವರು. ಪಿತ್ತವ್ಯಾಧಿಯಿಂದ ಆರೋಗ್ಯದಲ್ಲಿ ಏರು–ಪೇರು.
ಶ್ರೀ ಮಂತ್ರಾಲಯ ಪ್ರಭುಗಳ ದರ್ಶನ. ಶುಭ ಸಂಖ್ಯೆ–8.

ನನ್ನ ಪ್ರಚಂಡ ಗೆಲುವಿಗೆ ದುದ್ದ ಹೋಬಳಿ ಸಾಕ್ಷಿಯಾಗಲಿ

ಅಭಿನಂದನಾ ಕಾರ್ಯಕ್ರಮದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು



ಮಂಡ್ಯ, ಏ.8– ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗುವುದು ಖಚಿತ. ನಿಮ್ಮ ಮನೆ ಮಗನಾದ ನಾನು ಆ ಸರ್ಕಾರದಲ್ಲಿರುವ ನಿಟ್ಟಿನಲ್ಲಿ ಈ ಬಾರಿಯ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಗೆಲ್ಲಲು ದುದ್ದ ಹೋಬಳಿ ಜನತೆ ಸಾಕ್ಷಿಯಾಗಬೇಕು ಎಂದು ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಸಿ.ಎಸ್.ಪುಟ್ಟರಾಜು ಅಭಿಪ್ರಾಯಪಟ್ಟರು.

ತಾಲೂಕಿನ ದುದ್ದ ಹೋಬಳಿ ಬೇವುಕಲ್ಲು ಗ್ರಾಪಂ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ದುದ್ದ ಹೋಬಳಿಯೊಂದಿಗೆ ನನಗೆ ವಿಶೇಷ ನಂಟಿದ್ದು, ಹೋಬಳಿಯ ಜನತೆಯ ಋಣ ನನ್ನ ಮೇಲಿದೆ. ಈಗಾಗಲೇ ಈ ಭಾಗದ 54 ಕೆರೆಗಳಿಗೆ ನೀರು ತುಂಬಿಸಲಾಗಿದೆ. ಮುಂದಿನ ದಿನಗಳಲ್ಲಿ ಉಳಿದಿರುವ 20ಕ್ಕೂ ಹೆಚ್ಚು ಕೆರೆಗಳಿಗೆ ನೀರು ತುಂಬಿಸಬೇಕಾಗಿದೆ. ಆ ಕೆಲಸ ನಿರಂತರವಾಗಿ ಆಗಬೇಕಾದರೆ ನಿಮ್ಮ ಮನೆ ಮಗ ಪುಟ್ಟರಾಜು ಮತ್ತೊಮ್ಮೆ ಗೆಲ್ಲಬೇಕಾಗಿದೆ ಎಂದರು.

ನಾನು ಸಚಿವನಾಗಿದ್ದ ವೇಳೆ 6 ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು. ಅಲ್ಲದೇ ಮೇಲುಕೋಟೆ ಕ್ಷೇತ್ರದ ಒಂದೊಂದು ಹೋಬಳಿಗೂ 3 ಸಬ್‌ಸ್ಟೇಷನ್‌ಗಳ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯ ಮಾಡಲಾಗಿದೆ ಎಂದರು.

ಕ್ಷೇತ್ರದಲ್ಲಿ ಜೆಡಿಎಸ್ ಕಾರ್ಯಕರ್ತರನ್ನು ಹೆದರಿಸಿದರೆ ಈ ನಿಮ್ಮ ಪುಟ್ಟರಾಜು ಸಹಿಸುವುದಿಲ್ಲ ಎಂದ ಅವರು, ಮನುಷ್ಯನಿಗೆ ಯಾವುದೂ ಶಾಶ್ವತ ಅಲ್ಲ ಹೀಗಾಗಿ ಒಳ್ಳೆಯ ನಡವಳಿಕೆ ಮುಖ್ಯ. ಯಾವುದೇ ಅಹಿತಕರ ನಡವಳಿಕೆ ಯಾರಿಗೂ ಬೇಡ ಎಂದರು.

ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ಮಾತನಾಡಿ, ದುದ್ದ ಹೋಬಳಿ ಹಳ್ಳಿಗಳಿಗೆ ಹೇಮಾವತಿ ಹಾಗೂ ಕಾವೇರಿ ನೀರು ತಂದುಕೊಟ್ಟವರು ಸಿ.ಎಸ್.ಪುಟ್ಟರಾಜು. ಅಭಿವೃದ್ಧಿಪರ ಚಿಂತನೆ ಮಾಡುವ ಶಾಸಕರು ನಮಗೆ ಬೇಕು. ಹೆಚ್‌ಡಿಕೆ ಸರ್ಕಾರದಲ್ಲಿ ಪುಟ್ಟರಾಜು ಅವರನ್ನು ಮತ್ತೊಮ್ಮೆ ಮಂತ್ರಿಯಾಗಿ ನೋಡಲು ಅತೀ ಹೆಚ್ಚು ಮತಗಳನ್ನು ಕೊಟ್ಟು ಅವರ ಕೈ ಬಲಪಡಿಸಬೇಕು ಎಂದರು.

ಇದಕ್ಕೂ ಮುನ್ನ ಬೇವುಕಲ್ಲು ಗ್ರಾಮಕ್ಕೆ ಆಗಮಿಸಿದ ಶಾಸಕ ಪುಟ್ಟರಾಜು ಅವರನ್ನು ಮಹಿಳೆಯರ ಪೂರ್ಣಕುಂಭ ಕಳಸ, ವಿವಿಧ ಜಾನಪದ ಕಲಾತಂಡಗಳೊಂದಿಗೆ ವಿವಿಧ ಹಾರಗಳನ್ನು ಹಾಕಿ, ತೆರೆದ ವಾಹನದಲ್ಲಿ ಮೆರವಣಿಗೆ ನಡೆಸುವ ಮೂಲಕ ಅದ್ದೂರಿ ಸ್ವಾಗತ ಕೋರಿದರು. ಈ ವೇಳೆ ಜೆಡಿಎಸ್ ಪಕ್ಷದ ಸಿದ್ಧಾಂತ ಮತ್ತು ಮೇಲುಕೋಟೆ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ವಿವಿಧ ಪಕ್ಷಗಳ ಮುಖಂಡರು ಶಾಸಕ ಪುಟ್ಟರಾಜು ನೇತೃತ್ವದಲ್ಲಿ ಜೆಡಿಎಸ್‌ಗೆ ಸೇರ್ಪಡೆಯಾದರು. ಗ್ರಾಮದ ಜನತೆ ಪುಟ್ಟರಾಜು ಅವರ ಚುನಾವಣೆ ಖರ್ಚಿಗಾಗಿ ದೇಣಿಗೆ ನೀಡಿದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಶಿವಕುಮಾರ್, ಮಾಜಿ ಅಧ್ಯಕ್ಷ ವಿಶ್ವೇಶ್ವರಯ್ಯ, ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ಮಲ್ಲೇಶ್, ತಾಪಂ ಮಾಜಿ ಸದಸ್ಯ ಎಚ್.ಬಿ.ಬೆಟ್ಟಸ್ವಾಮಿ, ಮುಖಂಡರಾದ ಶಿವಲಿಂಗಪ್ಪ, ಸಿ.ಬಸವರಾಜ್, ಸುರೇಶ್, ಯೋಗೇಶ್, ಎಂ.ಮಾದೇಗೌಡ ಸೇರಿದಂತೆ ಇತರರಿದ್ದರು.

ಸಂಭ್ರಮದ ಶ್ರೀಲಕ್ಷ್ಮಿದೇವಿ ಅಮ್ಮನವರ ಬ್ರಹ್ಮ ರಥೋತ್ಸವ



ಕೆ.ಆರ್.ಪೇಟೆ, ಏ.8– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದೇವತೆ ಶ್ರೀಲಕ್ಷ್ಮಿದೇವಿ(ಬಾಚಳ್ಳಮ್ಮ) ಅಮ್ಮನವರ ಬ್ರಹ್ಮ ರಥೋತ್ಸವ ಶನಿವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ನಡೆಯಿತು.

ರಥೋತ್ಸವ ಅಂಗವಾಗಿ ಶ್ರೀಲಕ್ಷ್ಮಿದೇವಿ ಅಮ್ಮನವರಿಗೆ ಮುಂಜಾನೆಯಿಂದಲೇ ಹೋಮ ಹವನ, ವಿಶೇಷ ಪೂಜೆಗಳು ನೆರವೇರಿದವು. ಗ್ರಾಮವನ್ನು ತಳಿರು ತೋರಣ ಹಾಗೂ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಬ್ರಾಹ್ಮಣ ಸೇವಾ ಸಮಿತಿಯಿಂದ ಶ್ರೀಲಕ್ಷ್ಮಿದೇವಿ ಮತ್ತು ಶ್ರೀಚನ್ನಕೇಶವ ಸ್ವಾಮಿ ಪಲ್ಲಕ್ಕಿ ಉತ್ಸವ ನಡೆಯಿತು. ಮಧ್ಯಾಹ್ನ 3 ಗಂಟೆಗೆ ಬಾಚಳ್ಳಮ್ಮ ದೇವಿ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ರಥದ ಚಕ್ರಗಳಿಗೆ ಸಾಂಪ್ರದಾಯಿಕ ಪೂಜೆ ನೆರವೇರಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ರಥ ಗ್ರಾಮದ ಅರಳೀಕಟ್ಟೆ ವೃತ್ತದಿಂದ ಮಲ್ಲಸಮುದ್ರ ಕೆರೆ ಬೀದಿ, ಶಾಲಾ ಬೀದಿಯಲ್ಲಿ ಸಾಗಿತು. ನಂತರ ಹೊಲಗದ್ದೆಗಳ ಬಯಲಿನಲ್ಲಿ ಸಾಗಿ, ಬ್ರಾಹ್ಮಣರ ಬೀದಿ, ಹೆಬ್ಬಾಗಿಲು ಬೀದಿ ಮೂಲಕ ರಂಗದ ಬೀದಿಯಲ್ಲಿ ಸಾಗಿ ರಂಗಸ್ಥಳದಲ್ಲಿ ಸ್ವಸ್ಥಾನ ಸೇರಿತು.

ಈ ವೇಳೆ ವಿವಿಧೆಡೆಗಳಿಂದ ಆಗಮಿಸಿದ್ದ ಭಕ್ತರು ಬಾಚಳ್ಳಮ್ಮ ಉಘೆ... ಉಘೆ... ಲಕ್ಷ್ಮಿದೇವಮ್ಮ ಉಘೇ.. ಉಘೇ.. ಎಂಬ ಜಯಘೋಷಗಳೊಂದಿಗೆ ರಥವನ್ನು ಭಕ್ತಿ ಭಾವದಿಂದ ಎಳೆದರು. ಭಕ್ತರು ರಥಕ್ಕೆ ಹಣ್ಣು ಜವನ ಎಸೆದು ದೇವರ ಕೃಪೆಗೆ ಪಾತ್ರರಾದರು.

ರಥೋತ್ಸವದ ಹಿನ್ನೆಲೆಯಲ್ಲಿ ರಂಗಕುಣಿತ, ಸಿಡಿ, ಬಾಯಿಬೀಗ, ಕೋಲಾಟ, ಕೊಂಡೋತ್ಸವ, ಸಿಡಿಮದ್ದು ಪ್ರದರ್ಶನ, ಸೋಮನ ಕುಣಿತ ಸೇರಿದಂತೆ ಇನ್ನಿತರ ಜನಪದ ಕುಣಿತ ನೋಡುಗರ ಗಮನ ಸೆಳೆಯಿತು. ಭಕ್ತರಿಗೆ ರಥೋತ್ಸವ ಸಮಿತಿಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಸಚಿವ ನಾರಾಯಣಗೌಡ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್.ದೇವರಾಜು, ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು, ಸಮಾಜ ಸೇವಕರಾದ ವಿಜಯ್ ರಾಮೇಗೌಡ, ಮಲ್ಲಿಕಾರ್ಜುನ್, ರಾಜಾಹುಲಿ ದಿನೇಶ್, ಎಂ.ಡಿ.ಕೃಷ್ಣಮೂರ್ತಿ, ಸುರೇಶ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ. ಅಶೋಕ್, ಸಮಾಜ ಸೇವಕರಾದ ಎ.ಜೆ. ಹರೀಶ್‌ಗೌಡ ಎ.ಪಿ.ಕೇಶವಗೌಡ ಮುಖಂಡರಾದ ಯಜಮಾನ್ ಎ.ಸಿ.ಸಂತೋಷ್, ಬೋರೇಗೌಡ, ನಿವೃತ್ತ ಬಿಇಓ ಎ.ಬಿ.ಪುಟ್ಟಸ್ವಾಮಿಗೌಡ, ಬಿ.ಎಸ್.ಪುಟ್ಟಸ್ವಾಮೀಗೌಡ, ಬಿ.ವಿ.ನಾಗೇಶ್, ಡಿ.ರಾಜೇಗೌಡ, ಬೋರಲಿಂಗೇಗೌಡ, ತಾಲೂಕು ದರಖಾಸ್ತು ಸಮಿತಿ ಸದಸ್ಯ ಆರ್.ಜಗದೀಶ್, ಸುಬ್ರಹ್ಮಣ್ಯ, ಗ್ರಾಪಂ ಅಧ್ಯಕ್ಷೆ ಜಯಂತಿ, ಉಪಾಧ್ಯಕ್ಷ ಕುಮಾರಗೌಡ, ಸದಸ್ಯರಾದ ಆರ್.ರಮೇಶ್, ರಾಮಾನಂದ್, ಚಿಲ್ಲದಹಳ್ಳಿ ಆರ್.ಶ್ರೀನಿವಾಸ್, ನೇತ್ರಾವತಿ, ರೇಣುಕಾ, ಪ್ರೇಮಾಶೇಖರ್, ಚನ್ನೇಗೌಡ, ಸಾವಿತ್ರಮ್ಮ ಗೋವಿಂದಶೆಟ್ಟಿ, ಪಿಡಿಓ ದೇವೇಗೌಡ ಇನ್ನಿತರರಿದ್ದರು.

ಪ್ರತ್ಯೇಕ ಅಪಘಾತ: ಇಬ್ಬರ ದುರ್ಮರಣ

ಮದ್ದೂರು, ಏ.8– ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಮಹಿಳೆ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಯರಗನಹಳ್ಳಿಯಲ್ಲಿ ಶುಕ್ರವಾರ ಜರುಗಿದೆ.

ಗ್ರಾಮದ ನಿವಾಸಿ ಲೇ.ನಿಂಗಯ್ಯ ಅವರ ಪತ್ನಿ ನಿಂಗಮ್ಮ(85) ಮೃತಪಟ್ಟವರು. ಈಕೆ ಮದ್ದೂರು–ತುಮಕೂರು ರಸ್ತೆ ಬದಿ ನಡೆದುಕೊಂಡು ಹೋಗುತ್ತಿದ್ದ ವೇಳೆ ಹಿಂಬದಿಯಿಂದ ಬಂದ ಕ್ಯಾಂಟರ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ನಿಂಗಮ್ಮ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮೃತರ ಪುತ್ರ ಅಪ್ಪಾಜಿಗೌಡ ನೀಡಿದ ದೂರಿನ ಮೇರೆಗೆ ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಶವದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು.

ಬೆಸಗರಹಳ್ಳಿ: ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡಿದ್ದ ಸವಾರ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿರುವ ಘಟನೆ ಶನಿವಾರ ನಡೆದಿದೆ. ಮದ್ದೂರು ತಾಲೂಕಿನ ಕೊಪ್ಪ ಹೋಬಳಿ ಕೀಳಘಟ್ಟ ಗ್ರಾಮದ ಲೇ.ಹೊನ್ನಯ್ಯ ಅವರ ಪುತ್ರ ರಾಜು(55) ಮೃತಪಟ್ಟವರು. ಈತ ಏ.5ರಂದು ಸ್ವಗ್ರಾಮದಿಂದ ಅರೆಕಲ್ಲುದೊಡ್ಡಿ ಮಾರ್ಗವಾಗಿ ಸಂಚರಿಸುತ್ತಿದ್ದ ವೇಳೆ ನಿಯಂತ್ರಣ ತಪ್ಪಿದ ಬೈಕ್ ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ರಾಜು ಅವರನ್ನು ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬೆಸಗರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಲು
18 ವರ್ಷ ಮೇಲ್ಪಟ್ಟವರು ತಪ್ಪದೇ ಅರ್ಜಿ ಸಲ್ಲಿಸಿ



ಶ್ರೀರಂಗಪಟ್ಟಣ, ಏ.8– ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಲು ಏ.11 ಅಂತಿಮ ದಿನವಾಗಿದ್ದು, 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ನಮೂನೆ 6ರಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಡಾ. ಗೋಪಾಲ ಕೃಷ್ಣ ತಿಳಿಸಿದರು.

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪಟ್ಟಣದ ತಾಲೂಕು ಕಚೇರಿಗೆ ಭೇಟಿ ನೀಡಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕಾರ್ಯವೈಖರಿ ಪರಿಶೀಲಿಸಿ ಮಾತನಾಡಿದ ಅವರು, ಚುನಾವಣೆಯಲ್ಲಿ ಯಾವುದೇ ಅಕ್ರಮ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದ್ದು, ಪ್ರತಿ ಚೆಕ್‌ಪೋಸ್ಟ್‌ನಲ್ಲಿ ಸಿಸಿ ಟಿವಿ ಕಣ್ಗಾವಲಿನಲ್ಲಿ ಅನುಮಾನಾಸ್ಪದ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ ಎಂದರು.

ಅಧಿಕಾರಿಗಳು ಹಾಗೂ ಸಿಬ್ಬಂದಿ ಪಾರದರ್ಶಕವಾಗಿ ಕೆಲಸ ಮಾಡಬೇಕು. ಇದೇ ಮೊದಲ ಬಾರಿಗೆ 80 ವರ್ಷ ಮೇಲ್ಪಟ್ಟ ಹಿರಿಯರು, ವಿಕಲಚೇತನರು ಮತ್ತು ನಿಶಕ್ತರಿಗೆ ಮನೆಯಲ್ಲೇ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆದರೂ ಸಹ ಮತ ಕೇಂದ್ರಗಳಿಗೆ ವೀಲ್ಹ್‌ಚೇರ್ ಸೇರಿದಂತೆ ಇತರೆ ಮೂಲ ಸೌಕರ್ಯ ಒದಗಿಸಲಾಗಿದ್ದು, ಪ್ರತಿಯೊಬ್ಬರು ಮತಗಟ್ಟೆ ಬಂದು ಮತದಾನ ಮಾಡುವಂತೆ ಮನವಿ ಮಾಡಿದರು.

ಈ ವೇಳೆ ಚುನಾವಣಾಧಿಕಾರಿ ಸಂಜೀವಪ್ಪ, ತಹಸೀಲ್ದಾರ್ ಅಶ್ವಿನಿ, ಉಪತಹಸೀಲ್ದಾರ್ ರೇಖಾ, ಬಿಇಓ ಅನಂತರಾಜು, ಕಂದಾಯ ನಿರೀಕ್ಷಕರಾದ ಉಮೇಶ್, ಜೈಕುಮಾರ್, ಕೃಷಿ ಸಹಾಯಕ ನಿರ್ದೇಶಕ ನಿಶಾಂತ್‌ಕೀಲಾರ, ಗ್ರಾಮ ಲೆಕ್ಕಿಗ ಶ್ರೀಧರ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಹೈಕಮಾಂಡ್ ತೀರ್ಮಾನದಂತೆ ದರ್ಶನ್ ಪುಟ್ಟಣ್ಣಯ್ಯಗೆ ಬೆಂಬಲ

ಮಾಜಿ ಸಚಿವ ಎನ್.ಚಲುವರಾಯಸ್ವಾಮಿ



ಪಾಂಡವಪುರ, ಏ.8– ಕಾಂಗ್ರೆಸ್ ಹೈಕಮಾಂಡ್ ತೀರ್ಮಾನದಂತೆ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ಬೆಂಬಲ ಸೂಚಿಸಲಾಗಿದೆ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದಲ್ಲಿ ಕಾಂಗ್ರೆಸ್ ಹಾಗೂ ರೈತ ಸಂಘದ ಮುಖಂಡರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ 2 ಬಾರಿ ಶಾಸಕರಾದಾಗ ಕಾಂಗ್ರೆಸ್ ಪಕ್ಷದ ಜೊತೆಗೆ ಇದ್ದರು. ಹೀಗಾಗಿ ಕಳೆದ 2018ರ ಚುನಾವಣೆ ವೇಳೆ ಪುಟ್ಟಣ್ಣಯ್ಯನವರು ನಿಧನ ಹೊಂದಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿಯಾಗಿದ್ದ ಅವರ ಪುತ್ರ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ಬೆಂಬಲ ನೀಡಿತ್ತು. ಕಳೆದ ಚುನಾವಣೆಯಲ್ಲಿ ದರ್ಶನ್ ಗೆದಿದ್ದರೆ ಈ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲ ನೀಡುತ್ತಿರಲಿಲ್ಲ. ಕಳೆದ ಚುನಾವಣೆಯಲ್ಲಿ ದರ್ಶನ್‌ಗೆ ಸೋಲುಂಟಾದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಈ ಬಾರಿಯೂ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ಬೆಂಬಲ ನೀಡಿದೆ. ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ನಮ್ಮ ಬೆಂಬಲಿತ ಅಭ್ಯರ್ಥಿ ಪರ ಕೆಲಸ ಮಾಡಲಿದ್ದಾರೆ ಎಂದರು.

ಕಳೆದ 5 ವರ್ಷ ಅಧಿಕಾರ ನಡೆಸಿದ ಬಿಜೆಪಿ–ಜೆಡಿಎಸ್ ಪಕ್ಷಗಳ ದುರಾಡಳಿತ ನೋಡಿ ರಾಜ್ಯದ ಜನತೆ ಈ ಬಾರಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ನಿರ್ಧರಿಸಿದ್ದಾರೆ. ಈ ಚುನಾವಣೆಯಲ್ಲಿ ದರ್ಶನ್ ಪುಟ್ಟಣ್ಣಯ್ಯ ಗೆಲುವು ಸಾಧಿಸಿದರೆ ಅವರು ಕಾಂಗ್ರೆಸ್‌ಗೆ ಬೆಂಬಲ ನೀಡಲಿದ್ದಾರೆ ಎಂದರು.

ಚುನಾವಣೆ ಸಂದರ್ಭ ತಂತ್ರಗಾರಿಕೆ, ಚಾಣಾಕ್ಷತನವನ್ನು ಎಲ್ಲಾ ಪಕ್ಷದವರು ಮಾಡುತ್ತಾರೆ. ಆದರೆ, ನಾವು ಯಾವುದೇ ಕುತಂತ್ರ ನಡೆಸುತ್ತಿಲ್ಲ. ಹೆಚ್.ಡಿ.ಕುಮಾರಸ್ವಾಮಿ ಯಾವ ಅರ್ಥದಲ್ಲಿ ಹಾಗೆ ಹೇಳಿದ್ದಾರೋ ಗೊತ್ತಿಲ್ಲ. ಹೆಚ್‌ಡಿಕೆ ಇತ್ತೀಚೆಗೆ ಜಿಲ್ಲೆಗೆ ಬಂದಾಗ ಚಲುವರಾಯಸ್ವಾಮಿ ನನ್ನ ಆ ಜನ್ಮ ಶತ್ರು ಎಂದಿದ್ದಾರೆ. ಆದರೆ ನಾನು ಅವರನ್ನು ಹಳೇ ಸ್ನೇಹಿತರು ಎನ್ನುತ್ತೇನೆ ಎಂದರು.

ಮೇಲುಕೋಟೆ ಕಾಂಗ್ರೆಸ್‌ನಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಎಲ್ಲಾ ಮುಖಂಡರು ಒಂದಾಗಿ ಕೆಲಸ ಮಾಡಲಿದ್ದಾರೆ. ಮಂಡ್ಯದಲ್ಲಿ ರೈತ ಸಂಘದಿಂದ ಸ್ಪರ್ಧಿಸಿರುವ ಅಭ್ಯರ್ಥಿಯನ್ನು ಹಿಂದೆ ಸರಿಸುವ ಪ್ರಯತ್ನ ನಡೆಯುತ್ತಿದೆ. ಡಾ.ರವೀಂದ್ರ ಅವರನ್ನು ದರ್ಶನ್ ಪುಟ್ಟಣ್ಣಯ್ಯ ಭೇಟಿ ಮಾಡಿದ್ದು, ಅವರು ಸಹ ದರ್ಶನ್ ಪರ ಕೆಲಸ ಮಾಡಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಮಾಜಿ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಎಚ್.ಬಿ.ರಾಮು, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ರೈತಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್, ಕೆಪಿಸಿಸಿ ಸದಸ್ಯರಾದ ಎಚ್.ತ್ಯಾಗರಾಜು, ನಾಗರಾಜು, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಂಜನ ಶ್ರೀಕಾಂತ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣೇಗೌಡ, ಸರ್ವೋದಯ ಕರ್ನಾಟಕ ಅಧ್ಯಕ್ಷ ಕೆ.ಎಸ್.ದಯಾನಂದ, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ವಿಜೇಂದ್ರಮೂರ್ತಿ, ಕೆ.ಕುಬೇರ, ಬಿ.ಜೆ. ಸ್ವಾಮಿ, ಕುರುಬರ ಸಂಘದ ತಾಲೂಕು ಅಧ್ಯಕ್ಷ ಡಿ.ಹುಚ್ಚೇಗೌಡ, ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರೇವಣ್ಣ, ಬನ್ನಂಗಾಡಿ ಗ್ರಾಪಂ ಉಪಾಧ್ಯಕ್ಷ ತಮ್ಮೇಗೌಡ ಸೇರಿದಂತೆ ಹಲವರು ಇದ್ದರು.

ಕಾಂಗ್ರೆಸ್ ಪಕ್ಷ ನನಗೆ ಬೆಂಬಲ ನೀಡಿದ್ದಕ್ಕೆ ನಾನು ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಜಿಲ್ಲೆ, ತಾಲೂಕಿನ ಎಲ್ಲಾ ಕಾಂಗ್ರೆಸ್ ಮುಖಂಡರಿಗೆ ಧನ್ಯವಾದ ತಿಳಿಸುತ್ತೇನೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಎಲ್ಲಾ ಕಾಂಗ್ರೆಸ್, ರೈತ ಸಂಘದ ಮುಖಂಡರು ಜೊತೆಗೂಡಿ ಕುಳಿತು ಚರ್ಚಿಸಿ ಚುನಾವಣೆ ಗೆಲ್ಲಲು ಯೋಜನೆ ರೂಪಿಸಲಾಗುವುದು.

–ದರ್ಶನ್ ಪುಟ್ಟಣ್ಣಯ್ಯ, ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ.

ಒಂದನೇ ಪುಟದಿಂದ

ನಮ್ಮನ್ನು ಬಲಿ ಕೊಡಬೇಡಿ...!

ಜಿಲ್ಲೆಯ 1184 ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಲಕ್ಷಾಂತರ ರೈತರು ಉತ್ತಮ ಬೆಲೆಗೆ ಹಾಲು ಮಾರಾಟ ಮಾಡಿ, ಜೀವನ ನಡೆಸುತ್ತಿದ್ದಾರೆ. ಬೆಳೆಹಾನಿ ಅಥವಾ ಬೆಲೆ ಕುಸಿತದಿಂದ ಸಂಕಷ್ಟಕ್ಕೀಡಾಗುವ ರೈತರನ್ನು ಈ ಹೈನುಗಾರಿಕೆ ಕೈ ಹಿಡಿದಿದೆ. ಬಹುತೇಕ ರೈತರು ಒಂದೆರಡು ಹಸುಗಳನ್ನಾದರೂ ಸಲಹಿ, ಬದುಕು ಕಟ್ಟಿಕೊಂಡಿದ್ದಾರೆ. ಹಾಗಾಗಿ ರಾಜ್ಯದ 'ನಂದಿನಿ ಹಾಲು' ಮಾರಾಟ ಕ್ಷೇತ್ರವನ್ನು ಗುಜರಾತ್‌ನ 'ಅಮೂಲ್' ಆಕ್ರಮಿಸಿಕೊಂಡರೆ ಸಹಜವಾಗಿ ಸ್ಥಳೀಯ ಹಾಲು ಉತ್ಪಾದಕರಿಗೆ ಭಾರೀ ಹೊಡೆತ ಬೀಳುತ್ತದೆ ಎಂಬ ಸಾಮಾನ್ಯ ಲೆಕ್ಕಾಚಾರ ಶುರುವಾಗಿದೆ.

ಉತ್ಪಾದಕರು ಪೂರೈಸುವ ಹಾಲನ್ನು ಯೋಗ್ಯ ದರ ನೀಡಿ ಖರೀದಿಸಿ, ಅದನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ, ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಗ್ರಾಹಕರಿಗೆ ಪೂರೈಸುತ್ತಿರುವ ಮೈಮುಲ್, ರಾಸುಗಳಿಗೆ ಪಶು ವೈದ್ಯಕೀಯ ಸೇವೆ, ಕೃತಕ ಗರ್ಭಧಾರಣಾ ಸೌಲಭ್ಯ, ಹಸಿರು ಮೇವಿನ ಬೀಜಗಳು, ಕಾಂಡಗಳು ವಿತರಣೆ, ಕೃಷಿ ತಜ್ಞರ ನೆರವು, ಅಧಿಕ ಹಾಲಿನ ಉತ್ಪಾದನೆಗಾಗಿ ಸಮತೋಲನ ಪಶು ಆಹಾರ ಪೂರೈಸುತ್ತಿದೆ. ಮುಂದಿನ ದಿನಗಳಲ್ಲಿ ಇಲ್ಲಿಯೂ ಅಮೂಲ್ ಮಾರುಕಟ್ಟೆ ವಿಸ್ತರಿಸಿದರೆ ಮೈಮುಲ್ ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಗಿ, ಇದರ ಎಲ್ಲಾ ಕಾರ್ಯಚಟುವಟಿಕೆಗಳಿಗೆ ಅಡ್ಡಿಯಾಗಿ ವ್ಯವಸ್ಥೆಯೇ ಹಾಳಾಗಬಹುದು ಎಂಬ ಅಭಿಪ್ರಾಯವೂ ಇದೆ.

ಮೆಟ್ರೋಪಾಲಿಟನ್ ನಗರಗಳನ್ನು ಅಮೂಲ್ ಗುರಿಯಾಗಿಸಿಕೊಂಡು ತನ್ನ ವಹಿವಾಟು ವಿಸ್ತರಣೆಗೆ ಮುಂದಾಗಿದೆ. ಐಸ್‌ಕ್ರೀಂ, ಗುಡ್‌ಲೈಫ್ ಮಾದರಿ ಅಸೆಪ್ಟಿಕ್ ಟೆಟ್ರಾ ಪ್ಯಾಕ್ ಹಾಲು ಮಾರಾಟ ಹಿಂದಿನಿಂದಲೂ ಇದೆ. ಆದರೆ ಇದೀಗ ಬೆಂಗಳೂರಿನಲ್ಲಿ ನಂದಿನಿ ಮಾದರಿಯ ತಾಜಾ ಹಾಲಿನ ಪ್ಯಾಕೆಟ್‌ಗಳನ್ನು ಆನ್‌ಲೈನ್ ಆರ್ಡರ್ ಮೂಲಕ ಸರಬರಾಜು ಮಾಡಲು ಮುಂದಾಗಿದೆ. ಇದಕ್ಕಾಗಿ ಕ್ವಿಕ್ ಕಾಮರ್ಸ್ ಪ್ಲಾಟ್‌ಫಾರ್ಮ್ ಸಜ್ಜುಗೊಳಿಸಿದೆ. ಏಜೆನ್ಸಿಗಳಿಗೆ ಹೆಚ್ಚು ಲಾಭಾಂಶ ನೀಡಿ, ಗ್ರಾಹಕರಿಗೂ ಕಡಿಮೆ ಬೆಲೆಯಲ್ಲಿ ಹಾಲು–ಮೊಸರನ್ನು ಮನೆ ಬಾಗಿಲಿಗೆ ತಲುಪಿಸಿದರೆ ನಿಶ್ಚಿತವಾಗಿ ಸ್ಥಳೀಯ ನಂದಿನಿ ಉತ್ಪನ್ನಗಳ ವಹಿವಾಟಿನ ಮೇಲೆ ಋಣಾತ್ಮಕ ಪರಿಣಾಮ ಬೀರಬಹುದು. ಪ್ರಸಿದ್ಧ ಅಮೂಲ್ ಒಕ್ಕೂಟದ ಉತ್ಪನ್ನಗಳಿಗೆ ಉತ್ತರ ಭಾರತದ ಜನ ಆಕರ್ಷಿತರಾಗಿ, ಹೆಚ್ಚು ಕೊಳ್ಳುತ್ತಾರೆ. ಈ ಕಾರಣದಿಂದಲೇ ಉತ್ತರ ಭಾರತದವರು ಹೆಚ್ಚಿರುವ ಬೆಂಗಳೂರನ್ನು ಅಮುಲ್ ಆಯ್ಕೆ ಮಾಡಿಕೊಂಡಿದೆ ಎಂದು ಹೇಳಲಾಗುತ್ತಿದೆ.

ಏನೂ ಆಗುವುದಿಲ್ಲ: ಮತ್ತೊಂದೆಡೆ ಅಮೂಲ್ ಹಾಲು ಮತ್ತು ಮೊಸರು ಮಾರಾಟಕ್ಕೆ ಮುಂದಾಗಿದೆ ಎಂಬ ಮಾತ್ರಕ್ಕೆ ಇಷ್ಟೊಂದು ಆತಂಕಕ್ಕೀಡಾಗುವ ಪ್ರಮೇಯವಿಲ್ಲ ಎಂಬ ಅಭಿಪ್ರಾಯ ಕೇಳಿಬರುತ್ತಿದೆ. ಬೆಂಗಳೂರಿನಲ್ಲಿ ಉತ್ತರ ಭಾರತ ಮೂಲದವರು ಹೆಚ್ಚು ನೆಲೆಸಿರುವ ಕಾರಣದಿಂದ ಅಲ್ಲಿ ವ್ಯಾಪಾರ ವಿಸ್ತರಣೆಗೆ ಮುಂದಾಗಿದೆ. ಇದರಿಂದ ಕರ್ನಾಟಕ ಹಾಲು ಮಹಾಮಂಡಳ(ಕೆಎಂಎಫ್)ದ ನಂದಿನಿ ಉತ್ಪನ್ನಗಳ ವ್ಯಾಪಾರದಲ್ಲಿ ಸ್ವಲ್ಪ ವ್ಯತ್ಯಯವಾದರೂ ಭಾರೀ ತೊಂದರೆಯಾಗದು. ಮೈಸೂರು ಇನ್ನಿತರ ನಗರಗಳಲ್ಲಿ ಆನ್‌ಲೈನ್ ಆರ್ಡರ್ ಮೂಲಕ ಹಾಲು–ಮೊಸರು ಮಾರಾಟ ಫಲಿಸುವುದಿಲ್ಲ. ಇನ್ನು ತಾಲೂಕು ಕೇಂದ್ರಗಳಿಗೆ ವಿಸ್ತರಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ನಂದಿನಿ ಹಾಲು ಹಾಗೂ ಇನ್ನಿತರ ಉತ್ಪನ್ನಗಳಿಗೆ ಬೇಡಿಕೆ ಇದ್ದೇ ಇರುತ್ತದೆ. ತಾಜಾ ಹಾಲು–ಮೊಸರನ್ನು ತ್ವರಿತವಾಗಿ ಗ್ರಾಹಕರಿಗೆ ತಲುಪಿಸುವುದು ಅಮೂಲ್‌ನಿಂದ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದು ಅನೇಕರು ಅಭಿಪ್ರಾಯಿಸಿದ್ದಾರೆ.

ವ್ಯವಸ್ಥೆ ಸುಧಾರಣೆಯಾಗಲಿ: ಕೇಂದ್ರ ಸಚಿವ ಅಮಿತ್ ಷಾ, ಅಮೂಲ್–ಕೆಎಂಎಫ್ ಸಂಯೋಜನೆ ಬಗ್ಗೆ ಪ್ರಸ್ತಾಪಿಸಿದ ಬೆನ್ನಲ್ಲೇ ನಂದಿನಿ ಮೊಸರು ಪ್ಯಾಕೆಟ್‌ನಲ್ಲಿ ಇಂಗ್ಲಿಷ್‌ನಲ್ಲಿ ದಹಿ (ಮೊಸರು) ಹಿಂದಿ ಪದ ಮುದ್ರಿಸಿ, ಆಕ್ಷೇಪಣೆ ಬಳಿಕ ತೆಗೆದರು. ಈ ರೀತಿಯ ಗೊಂದಲ ಸೃಷ್ಟಿಸುವ ಬದಲು ನಂದಿನಿ ಉತ್ಪನ್ನಗಳ ಮಾರಾಟ ವಿಸ್ತರಣೆಗೆ ಕ್ರಮ ವಹಿಸಬೇಕು. ಸಾಧ್ಯವಾದರೆ ದೊಡ್ಡ ನಗರಗಳಲ್ಲಿ ಆನ್‌ಲೈನ್ ಆರ್ಡರ್ ಮೂಲಕ ಸರಬರಾಜು ಮಾರಾಟ ಇನ್ನಿತರ ಸುಧಾರಣಾ ಕ್ರಮ ಅನುಸರಿಸಬೇಕು. ಆರೋಕ್ಯ, ಡೊಡ್ಲ ಇನ್ನಿತರ ಹೊರ ರಾಜ್ಯಗಳ ಹಾಲು ಮತ್ತು ಮೊಸರು ಹೆಚ್ಚು ಮಾರಾಟವಾಗುವ ಭಾಗಗಳಲ್ಲಿ ನಂದಿನಿ ಉತ್ಪನ್ನಗಳ ಕೊರತೆಯಾಗದಂತೆ ನಿಗಾ ವಹಿಸಬೇಕು. ಕೆಲವು ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡರೆ ಅಮೂಲ್ ಅಥವಾ ಮತ್ಯಾವುದೇ ಒಕ್ಕೂಟಗಳು ಸ್ಪರ್ಧೆಗೆ ಇಳಿಯುವುದಿಲ್ಲ ಎಂದು ನಂದಿನಿ ಉತ್ಪನ್ನಗಳ ಮಾರಾಟಗಾರರೊಬ್ಬರು ತಿಳಿಸಿದ್ದಾರೆ.

ಹೈನುಗಾರಿಕೆ ನಂಬಿರುವ ರೈತರ ರಕ್ಷಿಸಿ

ರೈತರ ಜೀವನಕ್ಕೆ ಕೃಷಿ ಜೊತೆಗೆ ಹೈನುಗಾರಿಕೆ ಆಧಾರವಾಗಿದೆ. ಸಾಲ ಮಾಡಿ ಒಂದು–ಎರಡು ಹಸುಗಳನ್ನು ಕಟ್ಟಿಕೊಂಡು ಸ್ವಾಭಿಮಾನದಿಂದ ಬದುಕುತ್ತಿದ್ದೇವೆ. ಡೈರಿಗೆ ಹಾಲು ಹಾಕಿ ಅದರಿಂದ ಬರುವ ಹಣದಿಂದ ಕುಟುಂಬ ನಿರ್ವಹಣೆ ಮಾಡುತ್ತಿದ್ದೇವೆ. ಅಮೂಲ್–ನಂದಿನಿ ವಿಚಾರವಾಗಿ ಜಟಾಪಟಿ ನಡೆದಿರುವುದನ್ನು ಮಾಧ್ಯಮದಲ್ಲಿ ನೋಡಿದ್ದೇವೆ. ಯಾರೂ ರೈತರ ಹೊಟ್ಟೆ ಮೇಲೆ ಹೊಡೆಯಬೇಡಿ. ರೈತರಿಗೆ ಅನ್ಯಾಯವಾಗುವಂತಹ ಚಟುವಟಿಕೆಗಳಿಗೆ ಅವಕಾಶ ನೀಡಬೇಡಿ. ಬಡತನವಿದ್ದರೂ ನೆಮ್ಮದಿಯಾಗಿ ಬದುಕಲು ಅನುವು ಮಾಡಿಕೊಡಿ.

–ಭೈರಪ್ಪ, ಹಾಲು ಉತ್ಪಾದಕ

ವಿದೇಶಿ ಉತ್ಪನ್ನಗಳೂ ಬರುತ್ತಿವೆ

ಅಮೂಲ್–ನಂದಿನಿ ವಿಚಾರವನ್ನು ರಾಜಕೀಯವಾಗಿ ಬಳಸಿಕೊಳ್ಳಲಾಗುತ್ತಿದೆ. ಇದಕ್ಕಿಂತ ಮುಖ್ಯವಾದ ಸಂಗತಿಗಳ ಬಗ್ಗೆಯೂ ಗಮನಹರಿಸಬೇಕು. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಜಾಗತಿಕ ಮಾರುಕಟ್ಟೆಗೆ ಒಪ್ಪಿ ವಿಶ್ವ ವ್ಯಾಪಾರ ಸಂಸ್ಥೆ(ಡಬ್ಲ್ಯುಟಿಓ)ಯಲ್ಲಿ ಸಹಿ ಹಾಕಿದರು. ಅದನ್ನು ರೈತ ಹೋರಾಟಗಾರರಾದ ನಂಜುಂಡಸ್ವಾಮಿ ಖಂಡಿಸಿದ್ದರು. ಒಪ್ಪಂದಕ್ಕೆ ಸಹಿ ಹಾಕಿದ್ದರಿಂದ ವಿದೇಶಿ ಉತ್ಪನ್ನಗಳ ಮಾರಾಟ ಹವ್ಯಾತವಾಯಿತು. ನೇರ ಬಂಡವಾಳ ಹೂಡಿಕೆಯಿಂದ ಸಣ್ಣ ಪುಟ್ಟ ವ್ಯಾಪಾರಿಗಳು ಬೀದಿಪಾಲಾದರು. ಕಳೆದ ತಿಂಗಳಿಂದ ಡೆನ್ಮಾರ್ಕ್ ಇನ್ನಿತರ ದೇಶಗಳಿಂದ ಡೇರಿ ಉತ್ಪನ್ನಗಳ ಆಮದು ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಇದರಿಂದ ಮತ್ತಷ್ಟು ಅವಾಂತರವಾಗಲಿದೆ. ಅಮೂಲ್ ಇರಲಿ ವಿದೇಶದಿಂದ ಹಾಲು ಬಂದರೆ ನಮ್ಮ ರೈತರ ಬದುಕು ಅಧೋಗತಿಯಾಗುತ್ತದೆ. ಈ ಪರಿಸ್ಥಿತಿಗೆ ಕಾಂಗ್ರೆಸ್–ಬಿಜೆಪಿ ಎರಡೂ ಪಕ್ಷಗಳು ಕಾರಣ. ಅಮೂಲ್ ವಿರೋಧಿಸುವುದು ಸರಿ. ಹಾಗೆಯೇ ನಮ್ಮ ರಾಜ್ಯದಿಂದ ತಮಿಳುನಾಡು, ಕೇರಳ, ಮಹಾರಾಷ್ಟ್ರ ಇನ್ನಿತರ ರಾಜ್ಯಗಳಿಗೆ ರಫ್ತು ಮಾಡುವ ಹಾಲು ಹಾಗೂ ಅದರ ಉತ್ಪನ್ನಗಳ ಮಾರಾಟ ತಡೆದರೆ ನಮ್ಮ ರೈತರ ಬದುಕು ಏನಾಗುತ್ತದೆ. ರೈತ ಮುಖಂಡನಾಗಿ ವಾಸ್ತವಾಂಶ ಹೇಳುವುದು ನನ್ನ ಕರ್ತವ್ಯ. ರಾಜಕೀಯವಾಗಿ ಪ್ರಾದೇಶಿಕ ಭಾವನೆ ಕೆರಳಿಸುವ ಕೆಲಸ ಸರಿಯಲ್ಲ. ಡೆನ್ಮಾರ್ಕ್‌ನಿಂದ ಆಮದಾಗುವ ಡೇರಿ ಉತ್ಪನ್ನಗಳ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಕ್ರಮ ವಹಿಸಬೇಕು. ಹಾಗೆಯೇ ಹೈನುಗಾರಿಕೆ ನಂಬಿರುವ ರಾಜ್ಯದ ಸುಮಾರು 30 ಲಕ್ಷ ರೈತರ ಹಿತದೃಷ್ಟಿಯಿಂದ ಸೂಕ್ತ ಕ್ರಮ ಕೈಗೊಳ್ಳಬೇಕು.

–ಕುರುಬೂರು ಶಾಂತಕುಮಾರ್, ರೈತ ಮುಖಂಡ

ಆನೆ ಯೋಜನೆಗೆ 30 ವರ್ಷ: ಮೇ ತಿಂಗಳಲ್ಲಿ ದಕ್ಷಿಣದ ಎಲ್ಲಾ ರಾಜ್ಯಗಳಲ್ಲಿ ಆನೆ ಗಣತಿ ಆರಂಭ



ಬೆಂಗಳೂರು: ಆನೆ ಯೋಜನೆಯು 30 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಅಸ್ಸಾಂನಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 'ಗಜ ಉತ್ಸವ'ಕ್ಕೆ ಚಾಲನೆ ನೀಡಿದ್ದು, ಸಾವಿರಕ್ಕೂ ಹೆಚ್ಚು ಆನೆಗಳ ವಾಸಸ್ಥಾನವಾಗಿರುವ ಕರ್ನಾಟಕವು ಎಲ್ಲಾ ದಕ್ಷಿಣದ ರಾಜ್ಯಗಳಲ್ಲಿ ಮೇ ಮೂರನೇ ವಾರದಿಂದ ಆನೆ ಗಣತಿಯನ್ನು ಘೋಷಿಸುವಲ್ಲಿ ಮುಂದಾಳತ್ವ ವಹಿಸಿದೆ. ದಕ್ಷಿಣದ ಇತರ ರಾಜ್ಯಗಳ ಅರಣ್ಯ ಮುಖ್ಯಸ್ಥರೊಂದಿಗೆ ಗುರುವಾರ ವಿವರವಾದ ಚರ್ಚೆಯ ನಂತರ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ರಾಜ್ಯ ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಏಪ್ರಿಲ್ 9 ರಂದು ಹುಲಿ ಗಣತಿ ಬಿಡುಗಡೆಯಾಗಲಿದ್ದು, ಕರ್ನಾಟಕವನ್ನು ಹುಲಿ ರಾಜ್ಯ ಎಂದು ಘೋಷಿಸಲು ವೇದಿಕೆ ಸಿದ್ಧವಾಗಿದೆ. ಪ್ರತಿ ಐದು ವರ್ಷಗಳಿಗೊಮ್ಮೆ ಆನೆ ಗಣತಿಯನ್ನು ಮಾಡಲಾಗುತ್ತದೆ. ಆದಾಗ್ಯೂ, 2022 ರಲ್ಲಿ ಗಣತಿಯನ್ನು ಮಾಡಲಾಗಿರಲಿಲ್ಲ. ದಕ್ಷಿಣ ರಾಜ್ಯಗಳು ಮತ್ತು ಮಹಾರಾಷ್ಟ್ರವು ಆನೆ ಗಣತಿಯನ್ನು ಕೈಗೊಳ್ಳಲು ನಿರ್ಧರಿಸಿದವು. ಪ್ರಾಥಮಿಕ ಅಂದಾಜಿನ ಪ್ರಕಾರ ಕರ್ನಾಟಕ, ತಮಿಳುನಾಡು ಮತ್ತು ಕೇರಳಗಳಲ್ಲಿ 12,000ಕ್ಕೂ ಹೆಚ್ಚು ಆನೆಗಳಿವೆ. ಪ್ರಧಾನ ಮುಖ್ಯ ಅರಣ್ಯ, ವನ್ಯಜೀವಿ ಸಂರಕ್ಷಣಾಧಿಕಾರಿ ರಾಜೀವ್ ರಂಜನ್ ಮಾತನಾಡಿ, ಐಐಎಸ್‌ಸಿ ನೆರವಿನಿಂದ ನಡೆಸಲಾಗುವ ಆನೆ ಗಣತಿಯನ್ನು ಮಳೆಗಾಲದ ಮೊದಲು ಪೂರ್ಣಗೊಳಿಸಲು ನಿರ್ಧರಿಸಲಾಗಿದೆ ಎಂದಿದ್ದಾರೆ. ಕರ್ನಾಟಕದ ಆನೆಗಳ ಸಂಖ್ಯೆ ಅಧಿಕವಾಗಿದ್ದರೂ, ಮಾನವ–ಆನೆ ಸಂಘರ್ಷ ಮತ್ತು ಸಂರಕ್ಷಣೆಗೆ ಕೇಂದ್ರ ಸರ್ಕಾರವು ಕಡಿಮೆ ನೆರವನ್ನು ನೀಡುತ್ತಿದೆ ಎಂದು ಅಧಿಕಾರಿಗಳು ಮತ್ತು ತಜ್ಞರು ಹೇಳಿದ್ದಾರೆ. 1992 ರಲ್ಲಿ ಮೈಸೂರು ಆನೆ ಮೀಸಲು ಸ್ಥಾಪನೆಯೊಂದಿಗೆ ಆನೆ ಮೀಸಲು ಪ್ರದೇಶ ಆರಂಭಿಸಿದ ಮೊದಲ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ಇದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಕಾವೇರಿ ವನ್ಯಜೀವಿ ಅಭಯಾರಣ್ಯ, ಎಂಎಂ ಹಿಲ್ಸ್, ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯ, ತಲಕಾವೇರಿ ಮತ್ತು ಇತ್ತೀಚಿನ ಭದ್ರ ಆನೆ ಮೀಸಲು ಪ್ರದೇಶವನ್ನು ಒಳಗೊಂಡಿದೆ.

ಕೇಂದ್ರ ಸರ್ಕಾರದಿಂದ ಬಂದ ಹಣವು ತುಂಬಾ ಕಡಿಮೆಯಾಗಿದೆ. ಕೇಂದ್ರವು ಆನೆ ಯೋಜನೆ ಅಡಿಯಲ್ಲಿ ಸುಮಾರು 7 ರಿಂದ 8 ಕೋಟಿ ರೂಪಾಯಿಗಳನ್ನು ನಿಗದಿಪಡಿಸುತ್ತದೆ. ಆದರೆ, ಸುಮಾರು 5 ರಿಂದ 6 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡುತ್ತದೆ. ಆನೆ ನಿರ್ವಹಣೆಗೆ ರಾಜ್ಯ ಸರ್ಕಾರ 200 ಕೋಟಿ ರೂ. ಘೋಷಿಸಿದೆ. ಕರ್ನಾಟಕದ 11,000 ಹೆಕ್ಟೇರ್ ಅರಣ್ಯ ಭೂಮಿಯಲ್ಲಿ ಶೇ 60 ರಷ್ಟನ್ನು ಆನೆಗಳು ಆಕ್ರಮಿಸಿಕೊಂಡಿವೆ. ಈಗ ಮುಂಬರುವ ಗಣತಿಯಲ್ಲಿ ಅರಣ್ಯೇತರ ಪ್ರದೇಶಗಳನ್ನು ಮೌಲ್ಯಮಾಪನ ಮಾಡಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ.

ಕೈಪಿಡಿ ಬಿಡುಗಡೆ ಮಾಡಿದ ರಾಷ್ಟ್ರಪತಿ: ಕಾಜಿರಂಗದಲ್ಲಿ ನಡೆದ ಗಜ ಉತ್ಸವದಲ್ಲಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾನವ–ಆನೆ ಸಂಘರ್ಷ ನಿರ್ವಹಣೆ, ಭಾರತದಲ್ಲಿ ಆನೆ ಮೀಸಲು ಪ್ರದೇಶ ನಿರ್ವಹಣೆ ಮತ್ತು ಏಷ್ಯಾದ ಆನೆಗಳ ಕಳೇಬರ ಪರೀಕ್ಷೆ ಮತ್ತು ವಿಲೇವಾರಿಗಾಗಿ ಕ್ಷೇತ್ರ ಕೈಪಿಡಿಯನ್ನು ಬಿಡುಗಡೆ ಮಾಡಿದರು.

ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ (ಡಬ್ಲ್ಯುಐಐ) ಅಧಿಕಾರಿಗಳು ಮಾತನಾಡಿ, ಇದು ಪೋಸ್ಟ್‌ಮಾರ್ಟಮ್‌ನ ಕೈಪಿಡಿಯಾಗಿದೆ. ಏಕೆಂದರೆ ಇದು ಸಾವಿಗೆ ನಿಖರವಾದ ಕಾರಣ ಮತ್ತು ಮೃತದೇಹವನ್ನು ಹೇಗೆ ವಿಲೇವಾರಿ ಮಾಡಬೇಕು ಎಂಬುದನ್ನು ತಿಳಿಯಲು ಸಹಾಯ ಮಾಡುತ್ತದೆ. ರಣಹದ್ದುಗಳಿಗೆ ಆಹಾರಕ್ಕಾಗಿ ಶವವನ್ನು ಇಡಬೇಕು ಎಂದು ಪ್ರಚಾರ ಮಾಡಲಾಗಿದೆ. ಆದರೆ, ಯಾವುದೇ ಬೇಟೆಯಾಗದಂತೆ ಖಚಿತಪಡಿಸಿಕೊಳ್ಳಲು ದಂತಗಳನ್ನು ತಕ್ಷಣವೇ ಸುಡಲಾಗುತ್ತದೆ. ಆದಾಗ್ಯೂ, ಮೃತದೇಹದ ಮೇಲೆ ತೀವ್ರ ನಿಗಾ ಇಡಬೇಕು ಎಂದಿದ್ದಾರೆ.

ದಕ್ಷಿಣ ವಲಯ ಪ್ರಾದೇಶಿಕ ಸಮ್ಮೇಳನದಲ್ಲಿ ಕಾನೂನು ಅರಿವು



ಮೈಸೂರು, ಏ.8(ಎಂಕೆ)– ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ (ಎನ್‌ಎಎಲ್‌ಎಸ್‌ಎ) ಮೈಸೂರು ವಿಭಾಗದ ವತಿಯಿಂದ ನಡೆದ 'ದಕ್ಷಿಣ ವಲಯ ಪ್ರಾದೇಶಿಕ ಸಮ್ಮೇಳನ'ದಲ್ಲಿ ನಾಗರಿಕರ ಮನೆ ಬಾಗಿಲಿಗೆ ನ್ಯಾಯ ದೊರಕಬೇಕು ಎನ್ನುವ ಧ್ಯೇಯದೊಂದಿಗೆ ಕಾನೂನು ಅರಿವು ಮೂಡಿಸಲಾಯಿತು.

ಸಮ್ಮೇಳವನ್ನು ಉದ್ಘಾಟಿಸಿದ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಮುಖ್ಯಸ್ಥರು ಹಾಗೂ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಕಾನೂನು ಸೇವೆಗಳ ಬಗ್ಗೆ ತಿಳಿಸಿಕೊಟ್ಟರು. 2023ರ ಮೊದಲ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿನ ಇತ್ಯರ್ಥವಾಗದೆ ಬಾಕಿ ಉಳಿದಿದ್ದ 30.57 ಲಕ್ಷ ಕೇಸ್‌ಗಳು, 1.76 ಕೋಟಿ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. 2022–23ನೇ ಸಾಲಿನಲ್ಲಿ ನಡೆದ 3.88 ಲಕ್ಷ ಕಾನೂನು ಅರಿವು ಕಾರ್ಯಕ್ರಮಗಳ ಅನುಕೂಲತೆಯನ್ನು 5.7 ಜನರು ಪಡೆದುಕೊಂಡಿದ್ದಾರೆ ಎಂದು ಮಾಹಿತಿ ನೀಡಿದರಲ್ಲದೆ ಸಾರ್ವಜನಿಕರಲ್ಲಿ ಕಾನೂನು ಅರಿವು ಮೂಡಿಸುವುದು ಮುಖ್ಯವಾಗಿದೆ ಎಂದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಕಾನೂನು ಸೇವಾ ಸಂಸ್ಥೆಗಳು ಸಂವಿಧಾನದ ಆರ್ಟಿಕಲ್ 14, 21, 22(1), 38 ಮತ್ತು 39(ಎ) ಕುರಿತು ತಿಳಿಸಿಕೊಡಬೇಕು ಎಂದರು.

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಪ್ರಸನ್ನ ಬಿ.ವರಾಳೆ ಮಾತನಾಡಿ, ನ್ಯಾಯ ಒದಗಿಸುವಲ್ಲಿ ತಂತ್ರಜ್ಞಾನ ಬಳಕೆಯೂ ಅವಶ್ಯವಾಗಿದೆ. ಕಾನೂನು ಸೇವೆಗಳ ಮೂಲಕ ಸಮುದಾಯಗಳ ಸಬಲೀಕರಣವಾಗಬೇಕು ಎಂದು ತಿಳಿಸುತ್ತಲೇ ಕಾನೂನಿಗಿರುವ ಬೇಡಿಕೆಯನ್ನು ತಿಳಿಸಿದರು. ಹೈಕೋರ್ಟ್ ನ್ಯಾಯ ಮೂರ್ತಿಗಳಾದ ಬಿ.ವೀರಪ್ಪ, ಕೆ.ಸೋಮಶೇಖರ್ ಸೇರಿದಂತೆ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ಸದಸ್ಯರು ಉಪಸ್ಥಿತರಿದ್ದರು.

ಕಾಂಗ್ರೆಸ್‌ನಿಂದ 15 ಮುಖಂಡರು ಜೆಡಿಎಸ್‌ಗೆ

ರಾಮನಗರ: ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದ್ದಂತೆಯೇ ರಾಜ್ಯ ರಾಜಕೀಯದಲ್ಲಿ ಪಕ್ಷಾಂತರ ಪರ್ವ ಬಿರುಸಾಗಿ ನಡೆಯುತ್ತಿದೆ. ಮೂರು ಪ್ರಮುಖ ರಾಜಕೀಯ ಪಕ್ಷಗಳಲ್ಲಿಯೂ ಇದು ಕಂಡುಬರುತ್ತಿದ್ದು, ಕಾಂಗ್ರೆಸ್‌ನಿಂದ ಟಿಕೆಟ್ ವಂಚಿತ ಮುಖಂಡರು ಜೆಡಿಎಸ್ ನತ್ತ ಮುಖ ಮಾಡಿದ್ದಾರೆ.

ಕೇತಗಾನಹಳ್ಳಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಮಾರಸ್ವಾಮಿ, ಮಾಜಿ ವಿಧಾನಪರಿಷತ್ ಸದಸ್ಯ ರಘು ಆಚಾರ್ ಈಗಾಗಲೇ ಮಾತುಕತೆ ನಡೆಸಿದ್ದು, ಜೆಡಿಎಸ್ ಸೇರುವುದಾಗಿ ಅವರೇ ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷದಿಂದ 15 ಮುಖಂಡರು ಜೆಡಿಸ್‌ಗೆ ಬರುತ್ತಾರೆ ಎಂದರು. ಈ ಹಿಂದೆ ಕಾಂಗ್ರೆಸ್‌ನವರು ಜೆಡಿಎಸ್ ಮುಳುಗಿಸಲು ಶಾಸಕರನ್ನ ಕರೆದುಕೊಂಡು ಹೋದರು. ಇದೀಗ ಕಾಂಗ್ರೆಸ್‌ನಿಂದಲೇ ಜೆಡಿಎಸ್‌ಗೆ ಬರುತ್ತಿದ್ದಾರೆ ಎಂದರು.

'ಅಮುಲ್' ವಿರುದ್ಧ ಆಕ್ರೋಶ; ಸೇವ್ 'ನಂದಿನಿ' ಅಭಿಯಾನ: ಚುನಾವಣೆ ವೇಳೆ ಕೈ, ದಳ ದಾಳಿಗೆ ಬಿಜೆಪಿ ತತ್ತರ




ನಂದಿನಿ ದೇಶದ ನಂಬರ್ ಒನ್ ಬ್ರ್ಯಾಂಡ್

ಅಮುಲ್ ವಿಚಾರದಲ್ಲಿ ರಾಜಕಾರಣ ಮಾಡಬಾರದು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ

ಬೆಂಗಳೂರು, ಏ. 8 (ಕೆಎಂಶಿ)–ನಂದಿನಿ ನಂಬರ್ ಒನ್ ಬ್ರ್ಯಾಂಡ್ ಆಗಲಿದ್ದು, ಅಮುಲ್ ವಿಚಾರದಲ್ಲಿ ರಾಜಕಾರಣ ಮಾಡಬಾರದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೇರೆ ರಾಜ್ಯಗಳಲ್ಲಿ ನಂದಿನಿ ಮಾರಾಟವನ್ನು ನಾವು ಕೂಡ ಮಾಡಿದ್ದೇವೆ. ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಅಮುಲ್ ಹಿಮ್ಮೆಟ್ಟಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಅಭ್ಯರ್ಥಿಗಳ ಆಯ್ಕೆ: ಇಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಸಭೆ ನಡೆಯಲಿದೆ. ಎಲ್ಲಾ ಅಭ್ಯರ್ಥಿಗಳ ವಿಚಾರ ಚರ್ಚೆ ಮಾಡಲಾಗುವುದು.



ನಾಳೆ ಸಂಜೆ ಐದು ಗಂಟೆಗೆ ಸಂಸದೀಯ ಮಂಡಳಿ ಸಭೆ ನಡೆಯಲಿದ್ದು, ಸಭೆಯಲ್ಲಿ ಎಲ್ಲಾ 224 ಕ್ಷೇತ್ರಗಳ ಬಗ್ಗೆಯೂ ಚರ್ಚೆ ನಡೆಸಲಾಗುವುದು ಎಂದರು. ಕೆಲ ಎಂಎಲ್‌ಸಿ ಮತ್ತು ಸಂಸದರು ಟಿಕೆಟ್ ಆಕಾಂಕ್ಷಿಗಳಾಗಿದ್ದು, ಈ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಸಲಾಗುವುದು. ಚರ್ಚೆಯ ಬಳಿಕ ಎಷ್ಟು ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಲಿದೆ ಎಂದು ನಿರ್ಧಾರವಾಗಲಿದೆ ಎಂದು ತಿಳಿಸಿದರು. ಕಾಂಗ್ರೆಸ್‌ನಲ್ಲಿ ಟಿಕೆಟ್ ಹಂಚಿಕೆಯ ಗೊಂದಲದ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ನಮ್ಮ ಶಕ್ತಿ ಮೇಲೆ ನಮಗೆ ನಂಬಿಕೆ ಇದೆ. ಸಹಜವಾಗಿಯೇ ಅದರ ಲಾಭ ಆಗಲಿದೆ ಎಂದರು.

ಈ ಹಿಂದೆಯೂ ನಟರು ಪ್ರಚಾರ ಮಾಡಿದ್ದಾರೆ: ನಟ ಸುದೀಪ್ ಬಿಜೆಪಿಗೆ ಪರೋಕ್ಷವಾಗಿ ಬೆಂಬಲ ನೀಡುವ ಬಗ್ಗೆ ಮಾತನಾಡಿ, ಕಾಂಗ್ರೆಸ್ ಈ ಹಿಂದೆ ನಟರನ್ನು ಕರೆ ತಂದು ಚುನಾವಣಾ ಪ್ರಚಾರ ಮಾಡಿದ್ದಾರೆ. ಅಂಬರೀಶ್ ಪ್ರಚಾರ ಮಾಡಲಿಲ್ಲವೇ, ಶಾಸಕರಾಗಿರಲಿಲ್ಲವೇ ಎಂದು ಪ್ರಶ್ನಿಸಿದರು.

ಬಿಜೆಪಿಗೆ ಬೆಂಬಲ ನೀಡುವ ಮುಂಚೆ ಅದರಿಂದಾಗೊ ಎಲ್ಲಾ ಪರಿಣಾಮದ ಬಗ್ಗೆ ಮಾಹಿತಿ ಇದೆ. ಸುದೀಪ್ ಅವರು ನಮಗೆ ಬೆಂಬಲ ನೀಡಿರುವುದರಿಂದ ಸಹಜವಾಗಿ ಕಾಂಗ್ರೆಸ್‌ಗೆ ನಡುಕ ಹುಟ್ಟಿದೆ ಎಂದರು.

ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಣೆ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿ, ಆ ತರಹದ ಲೆಕ್ಕಾಚಾರ ಚರ್ಚೆಯಲ್ಲಿ ಮಾಡಿದಾಗಲೇ ತಿಳಿಯುವುದು ಎಂದರು.



ನಂದಿನಿ ಉತ್ಪನ್ನ ಹೊರ ರಾಜ್ಯ, ವಿದೇಶಗಳಲ್ಲೂ ಮಾರಾಟ ಆಗುತ್ತಿದೆ: ಯಾವುದೇ ಸ್ಪರ್ಧೆಗೂ ಸಿದ್ಧ

■ ಆರೋಗ್ಯ ಸಚಿವ ಡಾ.ಸುಧಾಕರ್ ಸಮರ್ಥನೆ ■ ಬಿಜೆಪಿ ಆಳ್ವಿಕೆ ಅವಧಿಯಲ್ಲಿ 'ನಂದಿನಿ'ಗೆ ಒತ್ತಾಸೆ ಜಾಸ್ತಿ

ಬೆಂಗಳೂರು, ಏ.8(ಕೆಎಂಶಿ)–ನಂದಿನಿ ಉತ್ಪನ್ನಗಳು ಬೇರೆ ರಾಜ್ಯ ಹಾಗೂ ವಿದೇಶಗಳಲ್ಲೂ ಮಾರಾಟವಾಗುತ್ತಿದ್ದು, ಯಾವುದೇ ಸ್ಪರ್ಧೆ ಎದುರಿಸಲು ಸಿದ್ಧವಾಗಿದೆ. ಅಮುಲ್ ಉತ್ಪನ್ನಗಳ ಮಾರಾಟದ ವಿಚಾರವನ್ನು ಕಾಂಗ್ರೆಸ್‌ನವರು ರಾಜಕೀಯಗೊಳಿಸಿದ್ದಾರೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ನಂದಿನಿ ಉತ್ಪನ್ನಗಳು ನಮ್ಮ ರಾಜ್ಯದ ಹೆಮ್ಮೆಯಾಗಿದೆ. ಹಿಂದಿನ ಸಿಎಂ ಬಿ.ಎಸ್.ಯಡಿಯೂರಪ್ಪನವರು ಮೊದಲ ಬಾರಿಗೆ ರೈತರಿಗೆ 2 ರೂ. ಪ್ರೋತ್ಸಾಹ ಧನ ನೀಡಿದ್ದರು. ಈಗ 5 ರೂ. ನೀಡಲಾಗುತ್ತಿದೆ. ಅಂದರೆ ನಂದಿನಿಗೆ ರಾಜ್ಯ ಬಿಜೆಪಿ ಸರ್ಕಾರ ಸಂಪೂರ್ಣ ಬೆಂಬಲ ನೀಡಿದೆ. ಯಾವುದೇ ಉತ್ಪನ್ನ ಯಾವುದೇ ಭಾಗಗಳಲ್ಲಿ ಮಾರಾಟವಾಗಬಹುದು. ಆದರೆ ಕಾಂಗ್ರೆಸ್‌ನವರು ಇದನ್ನು ರಾಜಕೀಯವಾಗಿಸಿದ್ದಾರೆ. ರಾಜ್ಯದಲ್ಲಿ ಈಗಾಗಲೇ 16 ರಿಂದ 18 ಕಂಪನಿಗಳು ತಮ್ಮ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುತ್ತಿವೆ. ಆಗ ಇವರಿಗೆ ಯಾವುದೇ ಸಮಸ್ಯೆ ಇರಲಿಲ್ಲ. ಆದರೆ ಅಮುಲ್ ಕಂಪನಿ ತನ್ನ ಉತ್ಪನ್ನ ಮಾರಾಟ ಮಾಡಲು ಮುಂದಾದಾಗ ಮಾತ್ರ ಸಮಸ್ಯೆ ಆರಂಭವಾಗಿದೆ ಎಂದರು.



ನಂದಿನಿ ಯಾವುದೇ ಸ್ಪರ್ಧೆಯನ್ನು ಎದುರಿಸಲು ಸಿದ್ಧ ಎಂಬುದು ನಮ್ಮ ವಿಶ್ವಾಸ. ವಿದೇಶಗಳಲ್ಲೂ ನಂದಿನಿ ಉತ್ಪನ್ನ ಮಾರಾಟವಾಗುತ್ತಿದೆ. ತಮಿಳುನಾಡು, ಮಹಾರಾಷ್ಟ್ರ ಮೊದಲಾದ ರಾಜ್ಯಗಳಲ್ಲೂ ನಂದಿನಿ ಹಾಲು ಮಾರಾಟವಾಗುತ್ತಿದೆ. ಕಾಂಗ್ರೆಸ್‌ನವರು ಎಲ್ಲದರಲ್ಲೂ ರಾಜಕೀಯ ಮಾಡುತ್ತಿದ್ದಾರೆ. ಹಾಗೆಯೇ ಮೊಸಳೆ ಕಣ್ಣೀರು ಹಾಕುತ್ತಿದ್ದರು. ಇದರಿಂದ ಯಾವುದೇ ಪ್ರಯೋಜನವಿಲ್ಲ ಎಂದರು. ಕಳೆದ ವಾರವಷ್ಟೇ ಕೋವಿಡ್‌ಗೆ ಸಂಬಂಧಿಸಿದಂತೆ ಮಾರ್ಗಸೂಚಿ ನೀಡಲಾಗಿದೆ. ಪರೀಕ್ಷೆ ಹೆಚ್ಚಳ, ಜೀನೋಮಿಕ್ ಸೀಕ್ವೆನ್ಸ್, ಆಸ್ಪತ್ರೆ ದಾಖಲು ಮೊದಲಾದವುಗಳ ಬಗ್ಗೆ ಗಮನಹರಿಸಲಾಗಿದೆ. ರಾಜ್ಯದಲ್ಲಿ ಈಗ ಕೋವಿಡ್ ನಿಯಂತ್ರಣದಲ್ಲಿದೆ. ಆದರೆ ಜನರು ಮೂರನೇ ಲಸಿಕೆಯನ್ನು ಕಡ್ಡಾಯವಾಗಿ ಪಡೆಯಬೇಕು. ಜೊತೆಗೆ ಜನಸಂದಣಿಯ ಪ್ರದೇಶಗಳಿಗೆ ಹೋಗಬಾರದು, ಮಾಸ್ಕ್ ಧರಿಸಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರ ಕಾನೂನು ಪ್ರಕಾರ ಎಲ್ಲವನ್ನೂ ಮಾಡುತ್ತದೆ. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸಲಾಗಿದೆ. ಕೈಗಾರಿಕಾ ಕ್ಷೇತ್ರದಲ್ಲೂ ಉತ್ತಮ ಯೋಜನೆಗಳನ್ನು ನೀಡಿದೆ. ಆದರೆ ಕಾಂಗ್ರೆಸ್ ಪಕ್ಷ ಆಧಾರರಹಿತವಾಗಿ ಎಲ್ಲದಕ್ಕೂ ಆರೋಪ ಮಾಡುತ್ತಿದೆ ಎಂದರು.

ಅಮುಲ್ ಉತ್ಪನ್ನಗಳಿಂದ ರಾಜ್ಯದ ರೈತರ ಹಿತಾಸಕ್ತಿಗೆ ಧಕ್ಕೆ

- ಲಕ್ಷಾಂತರ ಕೃಷಿಕರು, ಕೃಷಿ ಕೂಲಿಕಾರರ ಜೀವನಕ್ಕೆ ಆಧಾರವಾಗಿರುವ ಕೆಎಂಎಫ್
- ಮಂಡ್ಯ ಹಾಲು ಒಕ್ಕೂಟವೊಂದರಿಂದಲೇ 1 ಲಕ್ಷ 5 ಸಾವಿರ ಕುಟುಂಬಗಳಿಗೆ ಅನುಕೂಲ
- ಮಹಿಳೆಯರ ಸ್ವಾವಲಂಬನೆಗೆ ಸಾಕ್ಷಿಯಾಗಿರುವ ರಾಜ್ಯದ ಹೆಮ್ಮೆಯ ಸಂಸ್ಥೆಯ ಅಸ್ತಿತ್ವಕ್ಕೆ ಧಕ್ಕೆ
- ಅಮುಲ್ ಹಾಲು–ಮೊಸರು ಮಾರಾಟಕ್ಕೆ ಅವಕಾಶ ಮಾಡಿಕೊಡದಂತೆ ಒತ್ತಾಯ

ಮಂಡ್ಯ, ಏ.8– ಕೆಎಂಎಫ್ ಹಾಗೂ ಗುಜರಾತ್‌ನ ಅಮೂಲ್ ಸೇರ್ಪಡೆ ಅಥವಾ ಆ ಸಂಸ್ಥೆಯ ಹಾಲಿನ ಉತ್ಪನ್ನಗಳ ಮಾರಾಟಕ್ಕೆ ರಾಜ್ಯದಲ್ಲಿ ಅವಕಾಶ ನೀಡಿದಲ್ಲಿ ರಾಜ್ಯದ ರೈತರ ಹಿತಾಸಕ್ತಿಗಳಿಗೆ ಭಾರೀ ಧಕ್ಕೆಯಾಗಲಿದೆ. ಅಲ್ಲದೆ, ಮಂಡ್ಯ ಜಿಲ್ಲೆಯಲ್ಲಿ ಇದನ್ನೇ ನಂಬಿ ಜೀವನ ಮಾಡುತ್ತಿರುವ ಲಕ್ಷಾಂತರ ಜನರ ಬದುಕು ಬೀದಿಗೆ ಬರಲಿದೆ ಎಂದು ವಿಧಾನ ಪರಿಷತ್ ಸ್ಥಳೀಯ ಸಂಸ್ಥೆಗಳ ಮಂಡ್ಯ ಕ್ಷೇತ್ರದ ಶಾಸಕ ದಿನೇಶ ಗೂಳಿಗೌಡ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೆಎಂಎಫ್ ಹಾಗೂ ಅದರಡಿಯ ಎಲ್ಲ ಒಕ್ಕೂಟಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕು. ಯಾವುದೇ ಕಾರಣಕ್ಕೂ ಅಮುಲ್‌ನೊಂದಿಗೆ ವಿಲೀನ ಅಥವಾ ಒಪ್ಪಂದ ಮಾಡಿಕೊಳ್ಳಬಾರದು ಎಂದು ಆಗ್ರಹಿಸಿದ್ದಾರೆ.

ಮಂಡ್ಯ ಜಿಲ್ಲೆಯೊಂದರಲ್ಲೇ 1277 ಹಾಲು ಉತ್ಪಾದಕ ಸಹಕಾರ ಸಂಘಗಳಿವೆ. ಅದರಲ್ಲಿ 777 ಸಹಕಾರ ಸಂಘಗಳು ಸ್ವಂತ ಕಟ್ಟಡ ಹೊಂದಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. 1 ಲಕ್ಷ 5 ಸಾವಿರ ರೈತರು ಇಂತಹ ಸಹಕಾರ ಸಂಘಗಳ ಮೂಲಕ ಒಕ್ಕೂಟಕ್ಕೆ ಹಾಲು ನೀಡುತ್ತಿದ್ದಾರೆ. ಪ್ರತಿ ದಿನ 8.5 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಮಾತ್ರವಲ್ಲ ಮಂಡ್ಯ ಹಾಲು ಒಕ್ಕೂಟದಲ್ಲಿ ಹಾಲಿ 257 ಕಾಯಂ ನೌಕರರು, ಗುತ್ತಿಗೆ ಆಧಾರದಲ್ಲಿ 1057 ನೌಕರರು ಕೆಲಸ ಮಾಡುತ್ತಿದ್ದಾರೆ. ಈ ಎಲ್ಲ ಕುಟುಂಬಗಳಿಗೆ ಒಕ್ಕೂಟ ಜೀವನ ನೀಡಿದೆ. ಅಮುಲ್‌ನೊಂದಿಗೆ ಯಾವುದೇ ಕಾರಣಕ್ಕೂ ವಿಲೀನ ಮಾಡಬಾರದು. ವಿಲೀನ ಮಾಡುವುದರಿಂದ ನಮ್ಮ ರಾಜ್ಯದ ಸಹಕಾರ ವ್ಯವಸ್ಥೆಗೆ ಧಕ್ಕೆ ಆಗುತ್ತದೆ. ರೈತರ ಅಸ್ಮಿತೆಗೆ ಭಾರೀ ಹೊಡೆತ ಬೀಳುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೆಎಂಎಫ್ ರಾಜ್ಯದ ಹೆಮ್ಮೆಯ ಸಂಸ್ಥೆ. ಲಕ್ಷಾಂತರ ಕೃಷಿಕರು, ಕೃಷಿ ಕೂಲಿಕಾರರ ಬದುಕಿಗೆ ಈ ಸಂಸ್ಥೆ ಆಧಾರವಾಗಿದೆ. ಹಾಲನ್ನು ಖರೀದಿಸುವ ಮೂಲಕ ಹೈನುಗಾರಿಕೆಗೆ ಪ್ರೋತ್ಸಾಹ ನೀಡುತ್ತಿದೆ. ಈ ಮೂಲಕ ಕೃಷಿಗೂ ಸಹಕಾರಿಯಾಗಿದೆ. ಮಾತ್ರವಲ್ಲ, ರಾಜ್ಯದ ಕೋಟ್ಯಾಂತರ ಜನರ ಹಾಲು ಹಾಗೂ ಹಾಲಿನ ಬೇಡಿಕೆಗಳನ್ನು ಈಡೇರಿಸುತ್ತಿದೆ. ಜನರಿಗೆ ಗುಣಮಟ್ಟದ ಹಾಲಿನ ಉತ್ಪನ್ನಗಳನ್ನು ನೀಡುವ ಮೂಲಕ ಹೊರ ರಾಜ್ಯ, ದೇಶಗಳಲ್ಲೂ ಪ್ರಸಿದ್ಧವಾಗಿದೆ ಎಂದಿದ್ದಾರೆ. ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ, ಪ್ರತಿ ತಿಂಗಳ ಜೀವನ ನಿರ್ವಹಣೆಗೆ ಹಾಲು ಮಾರಾಟದ ಹಣದಿಂದ ಅನುಕೂಲವಾಗಿದೆ. ಇದರಿಂದ ಮಹಿಳೆಯರಿಗೆ ಉದ್ಯೋಗ ಸಿಕ್ಕಿದೆ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ದೊರೆಯಲು ಕೆಎಂಎಫ್ ಪ್ರಮುಖ ಕಾರಣವಾಗಿದೆ ಎಂದು ಶಾಸಕರು ಹೇಳಿದ್ದಾರೆ. ಈಗ ಏಕಾಏಕಿ ಮಾರುಕಟ್ಟೆಗೆ ಅಮೂಲ್ ಹಾಲು ಮತ್ತು ಮೊಸರು ಪ್ರವೇಶ ಮಾಡಿದರೆ ಇದರಿಂದ ರಾಜ್ಯದ ಹೈನುಗಾರಿಗೆಗೆ ಭಾರೀ ಹೊಡೆತ ಬೀಳಲಿದೆ. ಮಂಡ್ಯ ಜಿಲ್ಲೆಯಲ್ಲಂತೂ ಹೈನುಗಾರಿಕೆಯನ್ನೇ ನಂಬಿಕೊಂಡು ಲಕ್ಷಾಂತರ ರೈತರು ಜೀವನ ಸಾಗಿಸುತ್ತಿದ್ದಾರೆ. ಈಗ ಅಭಿವೃದ್ಧಿ, ಪೈಪೋಟಿ ಹೆಸರಿನಲ್ಲಿ ಇಂತಹ ಕ್ರಮಗಳನ್ನು ಕೈಗೊಂಡರೆ ರೈತರ ಜೀವನಕ್ಕೆ ಕೊಳ್ಳಿ ಇಟ್ಟ ಹಾಗೆ ಆಗುತ್ತದೆ. ಹೀಗಾಗಿ ಇಂತಹ ಯಾವುದೇ ಪ್ರಯತ್ನಗಳಿಗೂ ಅವಕಾಶವನ್ನು ಮಾಡಿಕೊಡಬಾರದು ಎಂದು ಶಾಸಕ ದಿನೇಶ್ ಗೂಳಿಗೌಡ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಗುಜರಾತ್ ಅಮುಲ್ ಮೂಲಕ ನಂದಿನಿ ಬ್ರ್ಯಾಂಡ್ ಹಾಳು ಮಾಡಲು ವ್ಯವಸ್ಥಿತ ಸಂಚು

■ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆಕ್ರೋಶ ■ ನಂದಿನಿ ಮುಗಿಸಲು ಅಮಿತ್ ಷಾ ನಡೆಸಿರುವ ಮೂರನೇ ಸಂಚು

ಬೆಂಗಳೂರು, ಏ.8(ಕೆಎಂಶಿ)–ಗುಜರಾತಿನ ಅಮುಲ್ ರಾಜ್ಯದ ಹಾಲು ಉತ್ಪಾದಕರ ಅನ್ನ ಕಸಿದುಕೊಳ್ಳುತ್ತಿದೆ, ನಂದಿನಿ ಬ್ರ್ಯಾಂಡ್ ಹಾಳುಗೆಡವಲು ವ್ಯವಸ್ಥಿತ ಸಂಚು ನಡೆಸಲಾಗುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, ಕರ್ನಾಟಕಕ್ಕೆ ಋಣಿಯಾಗಿರಬೇಕಾದ ಅಮುಲ್, ಕೆಎಂಎಫ್‌ಗೆ ಅನಾರೋಗ್ಯಕರ ಪೈಪೋಟಿ ಒಡ್ಡುವ ಮೂಲಕ ಸಹಕಾರ ವ್ಯವಸ್ಥೆಯನ್ನು ಹಾಳು ಮಾಡುತ್ತಿದೆ ಎಂದು ಕಿಡಿ ಕಾರಿದ್ದಾರೆ.

ಕನ್ನಡಿಗರ ಜೀವನಾಡಿ ನಂದಿನಿಯನ್ನು ಮುಗಿಸಲು ಈಗ 3ನೇ ಸಂಚು ನಡೆದಿದೆ. ಅಮುಲ್ ಜತೆ ನಂದಿನಿ ವಿಲೀನ ಮಾಡುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಮೊದಲ ಸಂಚು, ಮೊಸರು ಪ್ಯಾಕೆಟ್ ಮೇಲೆ ಹಿಂದಿಯ 'ದಹಿ' ಪದ ಮುದ್ರಣ ಎರಡನೇ ಸಂಚು. ಕನ್ನಡಿಗರ ತೀವ್ರ ವಿರೋಧದಿಂದ ಎರಡೂ ಸಂಚುಗಳು ವಿಫಲವಾಗಿವೆ. 3ನೇ ಸಂಚು ಸಫಲಗೊಳಿಸಲು ಅಮುಲ್ ಮೂಲಕ ಕೇಂದ್ರ ಸರಕಾರ ಹೊರಟಿದೆ ಎಂದು ಅವರು ಕಟುವಾಗಿ ಟೀಕಿಸಿದ್ದಾರೆ. ತನ್ನ ಏಕೈಕ ಪ್ರತಿಸ್ಪರ್ಧಿ ನಂದಿನಿಗೆ ಕರ್ನಾಟಕದಲ್ಲೇ ಅಡ್ಡಿ ಮಾಡಬೇಕೆನ್ನುವುದು ಅಮುಲ್ ದುರಾಲೋಚನೆ. "ಒಂದು ದೇಶ, ಒಂದು ಅಮುಲ್, ಒಂದೇ ಹಾಲು, ಒಂದೇ ಗುಜರಾತ್" ಎನ್ನುವುದು ಕೇಂದ್ರ ಸರಕಾರದ ಅಧಿಕೃತ ನೀತಿಯಂತಿದೆ. ಅದಕ್ಕೆ ಅಮುಲ್‌ಗೆ ಒತ್ತಾಸೆಯಾಗಿ ನಿಂತು ಕೆಎಂಎಫ್ ಕತ್ತು ಹಿಚುಕುತ್ತಿದೆ.ಈಗ ಅಮುಲ್ ಹಿಂಬಾಗಿಲ ಮೂಲಕ ಒಳನುಗ್ಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹೈನುಗಾರಿಕೆಯ ಮೂಲ ಉತ್ಪನ್ನ ಹಾಲನ್ನು, ತನ್ನ ಬ್ರ್ಯಾಂಡ್‌ನಲ್ಲಿಯೇ ಕರ್ನಾಟಕದಲ್ಲಿ ಮಾರಲು ಹೊರಟಿರುವ ಅಮುಲ್, ನಂದಿನಿಯನ್ನು ಆಪೋಶನ ತೆಗೆದುಕೊಳ್ಳುವುದು ಖಚಿತ. ವಿಲೀನಕ್ಕೆ, ಹಿಂದಿ ಹೇರಿಕೆಗೆ ಪ್ರಬಲ ಪ್ರತಿರೋಧ ಒಡ್ಡುತ್ತಿರುವ ಕನ್ನಡಿಗರು ಮತ್ತು ಕೆಎಂಎಫ್‌ನ ಕಥೆ ಮುಗಿಸಲೇಬೇಕು ಎಂದು ಅಮುಲ್ ಪಣ ತೊಟ್ಟಂತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಕೆಎಂಎಫ್ ಜತೆ ಅಮುಲ್ ಅನಗತ್ಯ ಸ್ಪರ್ಧೆ ನಡೆಸಿ ದಿನದಿಂದ ದಿನಕ್ಕೆ ನಂದಿನಿಯನ್ನು ತುಳಿಯುವ ಹುನ್ನಾರ ನಡೆಸುತ್ತಿದೆ, ಇದು ಸ್ಪಷ್ಟ, ಸಹಕಾರಿ ಕ್ಷೇತ್ರದ ಪ್ರಸಿದ್ಧ ಸೋದರ ಸಂಸ್ಥೆಗಳ ನಡುವೆ ಅನಾರೋಗ್ಯಕರ ಪೈಪೋಟಿ ಯಾರಿಗೂ ಹಿತವಲ್ಲ.



ಕೆಎಂಎಫ್ ರಾಜ್ಯದ ಸಾವಿರಾರು ಗ್ರಾಮಗಳ ಸಹಕಾರ ಸಂಘಗಳ ಮೂಲಕ ರೈತರಿಂದಲೇ ಹಾಲನ್ನು ನೇರವಾಗಿ ಖರೀದಿಸುತ್ತದೆ. ಬಿಜೆಪಿ ಡಬಲ್ ಎಂಜಿನ್ ಸರಕಾರ ನಮ್ಮ ರಾಜ್ಯದ ಹಾಲು ಉತ್ಪಾದಕರನ್ನು ಬೀದಿಗೆ ತಳ್ಳಿ ಗುಜರಾತಿಗಳ ಗುಲಾಮರನ್ನಾಗಿ ಮಾಡುವ ಹುನ್ನಾರ ನಡೆಸಿರುವುದು ಸ್ಪಷ್ಟ. ಇದುವರೆಗೂ ಇಷ್ಟೆಲ್ಲಾ ಆದರೂ ರಾಜ್ಯ ಬಿಜೆಪಿ ಸರಕಾರದ ದಿವ್ಯಮೌನ, ಕೆಎಂಎಫ್ ನಿಷ್ಕ್ರಿಯತೆ ಹಲವು ಅನುಮಾನಗಳಿಗೆ ಕಾರಣವಾಗಿದೆ ಇಂದು ಮಾಜಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಗುಜರಾತಿನಲ್ಲಿ ಎಂದೂ ಕೆಎಂಎಫ್ ಹಾಲು ಮಾರಿದ್ದಿಲ್ಲ. ಅದು ಅಮುಲ್‌ನ ಸ್ಥಳೀಯ ಮಾರುಕಟ್ಟೆ ಹಿತ, ಸಹಕಾರಿ ತತ್ವವನ್ನು ಗೌರವಿಸಿದೆ. ಹಾಲು ಸಮೃದ್ಧಿ ಇರುವ ಯಾವುದೇ ಮಹಾಮಂಡಳದ ಸ್ಥಳೀಯ ವ್ಯಾಪ್ತಿಯಲ್ಲಿ ಕೆಎಂಎಫ್ ತನ್ನ ಹಾಲನ್ನು ಮಾರಲ್ಲ. ಕರ್ನಾಟಕ ನೈಜ ಸಹಕಾರ ತತ್ತ್ವ ನಂಬಿದ್ದರೆ, ಗುಜರಾತ್ ಅಸಹಕಾರವನ್ನೇ ನಂಬಿದೆ.

ಕನ್ನಡಿಗರಿಗೆ ಅಮುಲ್ ಋಣಿ ಇರಬೇಕು. ಹೆಚ್.ಡಿ. ದೇವೇಗೌಡರು ಪ್ರಧಾನಿ ಆಗಿದ್ದಾಗ, ಹೆಚ್.ಡಿ.ರೇವಣ್ಣ ಅವರು ಕೆಎಂಎಫ್ ಅಧ್ಯಕ್ಷರಾಗಿದ್ದಾಗ ಯಲಹಂಕ ಮದರ್ ಡೈರಿಯಲ್ಲಿ ವಿಶೇಷ ಐಸ್‌ಕ್ರೀಮ್ ಘಟಕ ಸ್ಥಾಪಿಸಿ, ಈ ಘಟಕದಿಂದ ದಶಕಗಳಿಂದ ನಿತ್ಯವೂ ಕೆಎಂಎಫ್ ದೊಡ್ಡ ಪ್ರಮಾಣದಲ್ಲಿ ಅಮುಲ್ ಬ್ರ್ಯಾಂಡ್ ಐಸ್‌ಕ್ರೀಮ್ ತಯಾರಿಸಿ ಈಗಲೂ ಕೊಡುತ್ತಿದೆ ಎಂಬ ಮಾಹಿತಿ ನೀಡಿರುವ ಅವರು, ರಾಜ್ಯ ಸರಕಾರವು ಗುಜರಾತ್ ಹಾಲು ಮಹಾಮಂಡಳಿ ಅಮುಲ್‌ಗೆ ಬೆಂಗಳೂರಿನ ಕೋರಮಂಗಲದಲ್ಲಿ ಅತೀ ಕಡಿಮೆ ದರಕ್ಕೆ ಬೆಲೆ ಬಾಳುವ ಬೃಹತ್ ಜಾಗ ನೀಡಿದೆ. ಇಷ್ಟು ಔದಾರ್ಯ ತೋರಿದ ಕರ್ನಾಟಕ ಹಾಲು ಉತ್ಪಾದಕರು ಮತ್ತು ಕೆಎಂಎಫ್‌ಗೆ ದೊಡ್ಡ ಖೆಡ್ಡಾ ತೋಡಲು ಅಮುಲ್ ಹೊರಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕನ್ನಡಿಗರಾದ ನಾವು ತಕ್ಷಣ ಎಚ್ಚೆತ್ತು ನಂದಿನಿಯನ್ನೇ ಅವಲಂಬಿಸಿರುವ ರಾಜ್ಯದ ರೈತರ ಹಿತವನ್ನು ಆದ್ಯತೆಯಲ್ಲಿ ರಕ್ಷಿಸಿ, ಉಳಿಸಿಕೊಳ್ಳಬೇಕು. ನಮ್ಮ ಜನತೆ–ಗ್ರಾಹಕರು ನಂದಿನಿ ಉತ್ಪನ್ನಗಳನ್ನಷ್ಟೇ ಆದ್ಯತೆಯ ಮೇರೆಗೆ ಬಳಸಿ ರಾಜ್ಯದ ರೈತರ ಬದುಕನ್ನು ಕಾಪಾಡಬೇಕು. ಇಲ್ಲಿನ ಡಬಲ್ ಎಂಜಿನ್ ಬಿಜೆಪಿ ಸರಕಾರ ಈಗಲಾದರೂ ಎಚ್ಚೆತ್ತು ತಕ್ಷಣ ರಾಜ್ಯದಲ್ಲಿ ಅಮುಲ್‌ನ ಪ್ಯಾಕೆಟ್ ಹಾಲಿನ ಮಾರಾಟಕ್ಕೆ ತಡೆ ಒಡ್ಡಬೇಕು. ಕೇಂದ್ರದ ಒತ್ತಾಸೆಯಿಂದ ಅಮುಲ್ ಕದ್ದುಮುಚ್ಚಿ ಹಿಂಬಾಗಿಲ ಮೂಲಕ ಬರುತ್ತಿದೆ. ಕೆಎಂಎಫ್ ಮತ್ತು ರೈತರ ಕುತ್ತಿಗೆಗೆ ಕುಣಿಕೆ ಬಿಗಿಯುತ್ತಿರುವ ಅಮುಲ್ ವಿರುದ್ಧ ಕನ್ನಡಿಗರು ಸಿಡಿದೇಳಬೇಕು ಎಂದಿದ್ದಾರೆ.

ಬಿಜೆಪಿ ಶಾಸಕ ಓಲೇಕಾರ್ ವಿರುದ್ಧದ ದೋಷಿ ಆದೇಶಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಕರ್ನಾಟಕದಲ್ಲಿ ನಕಲಿ ಬಿಲ್ ಪ್ರಕರಣದಲ್ಲಿ ದೋಷಿಯಾಗಿ 2 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿರುವ ಹಾವೇರಿ ಕ್ಷೇತ್ರದ ಬಿಜೆಪಿ ಶಾಸಕ ನೆಹರು ಸಿ. ಓಲೇಕಾರ್‌ಗೆ ಹೈಕೋರ್ಟ್ ಬಿಗ್ ರಿಲೀಫ್ ನೀಡಿದೆ.

ಓಲೇಕಾರ್ ಅವರನ್ನು ದೋಷಿ ಎಂದು ತೀರ್ಮಾನಿಸಿದ್ದ ವಿಚಾರಣಾಧೀನ ಕೋರ್ಟ್ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ. ಕೆಲ ದಿನಗಳ ಹಿಂದಷ್ಟೇ ಇದೇ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯ ವಿಧಿಸಿದ್ದ ಎರಡು ವರ್ಷ ಶಿಕ್ಷೆಯನ್ನು, ಹೈಕೋರ್ಟ್ ಅಮಾನತ್ತಿನಲ್ಲಿರಿಸಿತ್ತು. ದೋಷಿ ಮತ್ತು ಶಿಕ್ಷೆ ಆದೇಶಗಳೆರಡಕ್ಕೂ ತಡೆಯಾಗಿರುವುದರಿಂದ ಓಲೇಕಾರ್ ಅವರು ಹಾಲಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಹಾದಿ ಸುಗಮವಾಗಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ವಿಧಿಸಿರುವ ಎರಡು ವರ್ಷಗಳ ಶಿಕ್ಷೆ ಆದೇಶಕ್ಕೆ ತಡೆ ನೀಡಬೇಕು ಎಂದು ಕೋರಿ ಓಲೇಕಾರ್ ಅವರನ್ನು ಸಲ್ಲಿಸಿದ್ದ ಮಧ್ಯಂತರ ವಿಚಾರಣೆ ನಡೆಸಿ, ಮಾರ್ಚ್ 31ರಂದು ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಕೆ ನಟರಾಜನ್ ಅವರ ನೇತೃತ್ವದ ಏಕ ಸದಸ್ಯ ಪೀಠವು ಇಂದು ಪ್ರಕಟಿಸಿತು. ಹಾವೇರಿ ನಗರಸಭೆ ಕಾಮಗಾರಿಯಲ್ಲಿ ನಕಲಿ ಬಿಲ್ ಸೃಷ್ಟಿಸಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ಹಣ ನಷ್ಟ ಉಂಟುಮಾಡಿದ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಓಲೇಕಾರ್, ಅವರ ಇಬ್ಬರು ಪುತ್ರರು ಮತ್ತು ಅಧಿಕಾರಿಗಳನ್ನು ದೋಷಿಗಳು ಎಂದು ಪರಿಗಣಿಸಿ ತಲಾ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿತ್ತು.



ವಿಧಾನಸಭಾ ಚುನಾವಣೆ–2023







ಗಡಿನಾಡು ಚಾಮರಾಜನಗರದಲ್ಲಿ ಕಾಂಗ್ರೆಸ್ ನಾಗಾಲೋಟಕ್ಕೆ ಬಿಜೆಪಿ ಬ್ರೇಕ್ ಹಾಕುವುದೆ...

■ ಮೋಹನ್ ಕಾಯಕ

ಜಾನಪದ ತವರೂರು, ಗಡುನಾಡು ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಚುನಾವಣಾ ಸೆಣಸಾಟ ರಂಗೇರುತ್ತಿದ್ದು, ಅಖಾಡದಲ್ಲಿ ಯಾರ ಕೊರಳಿಗೆ ವಿಜಯದ ಹಾರ ಬೀಳಲಿದೆ ಎಂಬುದು ಕುತೂಹಲ ಕೆರಳಿಸಿದೆ. ಕಸಬಾ, ಹರದನಹಳ್ಳಿ, ಚಂದಕವಾಡಿ, ಹರವೆ ಹೋಬಳಿ ಒಳಗೊಂಡಿರುವ ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಇದುವರೆಗೆ 15 ಚುನಾವಣೆಗಳು ನಡೆದಿದ್ದು, ಕಾಂಗ್ರೆಸ್ ಅಭ್ಯರ್ಥಿಗಳು 8 ಬಾರಿ ಗೆಲ್ಲುವ ಮೂಲಕ ಪ್ರಾಬಲ್ಯ ಸಾಧಿಸಿದ್ದಾರೆ. ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಪಕ್ಷೇತರ ಹಾಗೂ ತಮ್ಮದೆ ಪಕ್ಷದಿಂದ ಮೂರು ಬಾರಿ ಇಲ್ಲಿಂದ ಆಯ್ಕೆಯಾಗಿರುವುದು ವಿಶೇಷವಾಗಿದೆ.

1952ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಕಿಸಾನ್ ಮಜ್ದೂರ್ ಪ್ರಜಾಪಾರ್ಟಿಯ ಯು.ಎಂ.ಮಾದಪ್ಪ ಗೆದ್ದರೆ, ಪಕ್ಷೇತರ ಅಭ್ಯರ್ಥಿಯಾಗಿದ್ದ ಎಂ.ಸಿ.ಬಸಪ್ಪ, ಕಾಂಗ್ರೆಸ್‌ನ ಎಸ್.ಪುಟ್ಟನಂಜಪ್ಪ ಪ್ರಬಲ ಪೈಪೋಟಿ ನೀಡಿದ್ದರು. 1957ರಲ್ಲಿ ದ್ವಿಸದಸ್ಯ ಕ್ಷೇತ್ರವಾದಾಗ ಪ್ರಜಾ ಸೋಷಲಿಸ್ಟ್ ಪಾರ್ಟಿಯ ಯು.ಎಂ.ಮಾದಪ್ಪ, ಕಾಂಗ್ರೆಸ್‌ನ ಬಿ. ರಾಚಯ್ಯ ಗೆಲುವು ಸಾಧಿಸಿದರು.

1962ರಲ್ಲಿ ಮತ್ತೆ ಏಕ ಸದಸ್ಯ ಕ್ಷೇತ್ರವಾಗಿ ಬದಲಾದಾಗ ಕಾಂಗ್ರೆಸ್‌ನ ಎಂ.ಪಿ.ಬಸಪ್ಪ ಗೆದ್ದರೆ, ಬಿಎಸ್ಪಿಯಿಂದ ಸ್ಪರ್ಧೆಗಿಳಿದ ಯು.ಎಂ.ಮಾದಪ್ಪ ಸೋಲು ಅನುಭವಿಸಿದರು. 1967ರಲ್ಲಿ ಪಕ್ಷೇತರ ಅಭ್ಯರ್ಥಿ ಎಸ್.ಪುಟ್ಟಸ್ವಾಮಿ, ಕಾಂಗ್ರೆಸ್‌ನ ಎಂ.ಸಿ. ಬಸಪ್ಪ ವಿರುದ್ಧ ಜಯಗಳಿಸಿ, 1972ರಲ್ಲಿ ಕಾಂಗ್ರೆಸ್ ಸೇರಿ ಮತ್ತೊಮ್ಮೆ ವಿಧಾನಸಭೆಗೆ ಆಯ್ಕೆಯಾದರು. 1978ರಲ್ಲಿ ಕಾಂಗ್ರೆಸ್ ತೊರೆದು ಜನತಾಪಕ್ಷದಿಂದ ಅಖಾಡಕ್ಕಿಳಿದ ಎಂ.ಸಿ.ಬಸಪ್ಪ, ಕಾಂಗ್ರೆಸ್ ಎಸ್.ಪುಟ್ಟಸ್ವಾಮಿ ವಿರುದ್ಧ ಜಯ ಗಳಿಸುವ ಮೂಲಕ ಸೋಲಿನ ಸೇಡು ತೀರಿಸಿಕೊಂಡರು. ಆದರೆ 1983ರಲ್ಲಿ ಕಾಂಗ್ರೆಸ್‌ನ ಎಸ್.ಪುಟ್ಟಸ್ವಾಮಿ ಮತ್ತೆ ಆಯ್ಕೆಯಾಗುವ ಮೂಲಕ ಪ್ರತ್ಯುತ್ತರ ನೀಡಿದರು. ಹಾಗೆಯೇ 1985ರಲ್ಲಿಯೂ ಗೆದ್ದು ನಾಲ್ಕನೇ ಬಾರಿ ವಿಧಾನಸಭೆ ಪ್ರವೇಶ ಪಡೆದರು.

ಮೂರನೇ ಪ್ರಯತ್ನದಲ್ಲಿ ವಾಟಾಳ್ ಗೆಲುವು: 2 ಬಾರಿ ಪಕ್ಷೇತರ ಅಭ್ಯರ್ಥಿಯಾಗಿ ಸೋಲು ಅನುಭವಿಸಿದ್ದ ವಾಟಾಳ್ ನಾಗರಾಜ್ ಮೂರನೇ ಪ್ರಯತ್ನದಲ್ಲಿ ಅಂದರೆ 1989ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಚುನಾಯಿತರಾಗುವ ಮೂಲಕ ಮೊದಲ ಬಾರಿಗೆ ವಿಧಾನಸಭೆ ಪ್ರವೇಶ ಮಾಡಿದರು. ಹಾಗೆಯೇ 1994ರಲ್ಲಿಯೂ ಜಯಗಳಿಸುವ ಮೂಲಕ ಸತತ ಎರಡನೇ ಬಾರಿ ಆಯ್ಕೆಯಾದರು. 1999ರಲ್ಲಿ ಬಿಜೆಪಿ ಅಭ್ಯರ್ಥಿಯಾದ ಸಿ.ಗುರುಸ್ವಾಮಿ ಗೆದ್ದರು. ಮತ್ತೊಮ್ಮೆ 2004ರಲ್ಲಿ ತಮ್ಮದೇ ವಾಟಾಳ್ ಪಕ್ಷದಿಂದ ಸ್ಪರ್ಧಿಸಿದ ವಾಟಾಳ್ ನಾಗರಾಜ್ ಮೂರನೇ ಬಾರಿಗೆ ಶಾಸಕರಾಗಿ ಆಯ್ಕೆಯಾದರು.

ಕಾಂಗ್ರೆಸ್ ಹ್ಯಾಟ್ರಿಕ್ ಜಯ: 2008ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದ ಉಪ್ಪಾರ ಸಮುದಾಯದ ಸಿ.ಪುಟ್ಟರಂಗ ಶೆಟ್ಟಿ ಮೊದಲ ಬಾರಿಗೆ ಆಯ್ಕೆಯಾದರು. 2013 ಹಾಗೂ 2018ರ ಚುನಾವಣೆಯಲ್ಲೂ ಆಯ್ಕೆಯಾಗುವ ಮೂಲಕ ಹ್ಯಾಟ್ರಿಕ್ ಜಯ ಸಾಧಿಸಿದರು. ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ಸೇರಿದಂತೆ ಬಿಜೆಪಿ, ಜೆಡಿಎಸ್ ಹಾಗೂ ಪಕ್ಷೇತರ ಅಭ್ಯರ್ಥಿಗಳು ಗೆಲುವಿಗಾಗಿ ಸೆಣಸಿದರಾದರೂ ಜಯ ಪಡೆಯುವಲ್ಲಿ ಸಫಲರಾಗಲಿಲ್ಲ.

ವರ್ಷ	ಗೆದ್ದವರು	ಪಕ್ಷ
1952	ಯು.ಎಂ.ಮಾದಪ್ಪ	ಕೆಎಂಪಿಪಿ
1957	(ದ್ವಿಸದಸ್ಯ) ಯು.ಎಂ.ಮಾದಪ್ಪ	ಪಿಎಸ್ಪಿ
	ಬಿ.ರಾಚಯ್ಯ	ಕಾಂಗ್ರೆಸ್
1962	ಎಂ.ಸಿ.ಬಸಪ್ಪ	ಕಾಂಗ್ರೆಸ್
1967	ಎಸ್.ಪುಟ್ಟಸ್ವಾಮಿ	ಪಕ್ಷೇತರ
1972	ಎಸ್.ಪುಟ್ಟಸ್ವಾಮಿ	ಕಾಂಗ್ರೆಸ್
1978	ಎಂ.ಸಿ. ಬಸಪ್ಪ	ಜನತಾಪಕ್ಷ
1983	ಎಸ್.ಪುಟ್ಟಸ್ವಾಮಿ	ಕಾಂಗ್ರೆಸ್
1985	ಎಸ್.ಪುಟ್ಟಸ್ವಾಮಿ	ಕಾಂಗ್ರೆಸ್
1989	ವಾಟಾಳ್ ನಾಗರಾಜ್	ವಾಟಾಳ್ ಪಕ್ಷ
1994	ವಾಟಾಳ್ ನಾಗರಾಜ್	ವಾಟಾಳ್ ಪಕ್ಷ
1999	ಸಿ.ಗುರುಸ್ವಾಮಿ	ಬಿಜೆಪಿ
2004	ವಾಟಾಳ್ ನಾಗರಾಜ್	ವಾಟಾಳ್ ಪಕ್ಷ
2008	ಸಿ.ಪುಟ್ಟರಂಗಶೆಟ್ಟಿ	ಕಾಂಗ್ರೆಸ್
2013	ಸಿ.ಪುಟ್ಟರಂಗಶೆಟ್ಟಿ	ಕಾಂಗ್ರೆಸ್
2018	ಸಿ.ಪುಟ್ಟರಂಗಶೆಟ್ಟಿ	ಕಾಂಗ್ರೆಸ್



ವೀರಶೈವ ಲಿಂಗಾಯಿತರ ಪ್ರಾಬಲ್ಯ: 1952ರಿಂದ 2004 ರವರೆಗೆ ವೀರಶೈವ ಲಿಂಗಾಯಿತ ಸಮುದಾಯದ ಅಭ್ಯರ್ಥಿಗಳೇ ಜಯಗಳಿಸಿದ್ದಾರೆ. ಬೇರೆ ಬೇರೆ ಸಮುದಾಯ ಅಭ್ಯರ್ಥಿಗಳು ಪೈಪೋಟಿ ನಡೆಸಿದರೂ ಅಂತಿಮವಾಗಿ ಗೆಲುವು ವೀರಶೈವ ಸಮುದಾಯದ ಅಭ್ಯರ್ಥಿ ಪಾಲಾಗುತ್ತಿತ್ತು. ಕಾಂಗ್ರೆಸ್ ಉಪ್ಪಾರ ಸಮುದಾಯದ ಜಿ.ಎಂ.ಗಾಡ್ಕರ್ ಅವರಿಗೆ ಟಿಕೆಟ್ ಕೊಟ್ಟು ಹೊಸ ಸಮೀಕರಣ ಬರೆಯಲು ಯತ್ನಿಸಿದರೂ ಪ್ರಯೋಜನವಾಗಲಿಲ್ಲ.

2008ರ ಚುನಾವಣೆ ವೇಳೆಗೆ ಚಾಮರಾಜನಗರ ಕ್ಷೇತ್ರ ಪುನರ್‌ವಿಂಗಡಣೆಯಾದಾಗ ಕೆಲವು ಹಳ್ಳಿಗಳನ್ನು ಗುಂಡ್ಲುಪೇಟೆಗೆ ಸೇರಿಸಲಾಯಿತು. ರದ್ದಾದ ಸಂತೇಮರಹಳ್ಳಿ ಕ್ಷೇತ್ರದ ಚಂದಕವಾಡಿ ಹೋಬಳಿಯನ್ನು ಚಾಮರಾಜನಗರಕ್ಕೆ ಸೇರಿಸಲಾಯಿತು. ಇದರಿಂದ ಜಾತಿ ಸಮೀಕರಣ ಬದಲಾಯಿತು. ಅಲ್ಲದೇ ವೀರಶೈವ ಲಿಂಗಾಯಿತ ಮತಗಳಲ್ಲಿಯೂ ವಿಭಜನೆ ಆಯಿತು. ಇದರಿಂದ 2008ರಿಂದ 2018ರ ವರೆಗೆ ಹ್ಯಾಟ್ರಿಕ್ ಗೆಲುವು ಪಡೆದಿರುವ ಸಿ.ಪುಟ್ಟರಂಗಶೆಟ್ಟಿ ಉಪ್ಪಾರ ಸಮುದಾಯದವರಾಗಿದ್ದಾರೆ.

2018ರ ಬಲಾಬಲ: 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಬಲ ಪೈಪೋಟಿ ನೀಡಿದ್ದ ಬಿಜೆಪಿ ಅಭ್ಯರ್ಥಿ ಕೆ.ಆರ್.ಮಲ್ಲಿಕಾರ್ಜುನಪ್ಪ 4,913 ಮತಗಳಿಂದ ಕಾಂಗ್ರೆಸ್‌ನ ಸಿ.ಪುಟ್ಟರಂಗಶೆಟ್ಟಿ ವಿರುದ್ಧ ಪರಾಭವಗೊಂಡಿದ್ದರು. ಸಿ.ಪುಟ್ಟರಂಗಶೆಟ್ಟಿ 75,963 ಮತಗಳನ್ನು ಪಡೆದು ಜಯಗಳಿಸಿದರೆ, ಬಿಜೆಪಿಯ ಕೆ.ಆರ್.ಮಲ್ಲಿಕಾರ್ಜುನಪ್ಪ 71,050 ಮತ ಪಡೆದರು. ಹಾಗೆಯೇ ಒಮ್ಮೆಯಷ್ಟೇ 1999ರಲ್ಲಿ ಬಿಜೆಪಿ ಅಭ್ಯರ್ಥಿಯಾದ ಸಿ.ಗುರುಸ್ವಾಮಿ ಗೆದ್ದಿದ್ದು, ಮತ್ತೊಂದು ಗೆಲುವಿಗಾಗಿ ಪ್ರಯತ್ನಿಸುತ್ತಿದೆ. ಹಾಗೆಯೇ 4 ಬಾರಿ ಶಾಸಕರಾಗಿದ್ದ ಎಸ್. ಪುಟ್ಟಸ್ವಾಮಿ ಪುತ್ರಿ ಡಾ.ಬಿ.ಪಿ. ಮಂಜುಳ ಕಾಂಗ್ರೆಸ್ ಅಭ್ಯರ್ಥಿಯಾಗಿ ಒಮ್ಮೆ ಸೋತರು. 2 ಬಾರಿ ಗೆದ್ದಿದ್ದ ಎಂ.ಸಿ. ಬಸಪ್ಪ ಅವರ ಅಳಿಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಸ್ಪರ್ಧಿಸಿದ ಎರಡೂ ಬಾರಿಯೂ ಸೋಲು ಅನುಭವಿಸಿದರು. ಈಗಾಗಲೇ ಕಾಂಗ್ರೆಸ್ ಅಭ್ಯರ್ಥಿ ಪುಟ್ಟರಂಗಶೆಟ್ಟಿ ಅವರ ಹೆಸರು ಮೊದಲ ಪಟ್ಟಿಯಲ್ಲಿ ಪ್ರಕಟವಾಗಿದೆ. ಇನ್ನೂ ಬಿಜೆಪಿ ಅಭ್ಯರ್ಥಿ ನಿರ್ಧರಿಸಿಲ್ಲ. ಜೆಡಿಎಸ್ ಸಹ ತನ್ನ ಅಭ್ಯರ್ಥಿ ಬಗ್ಗೆ ಲೆಕ್ಕಾಚಾರದಲ್ಲಿದೆ.

ಮತದಾರರ ವಿವರ...	
ಪುರುಷರು	– 1,00,633
ಮಹಿಳೆಯರು	– 1,04,727
ಇತರೆ	– 16
ಒಟ್ಟು	– 2,08,943
ಮತಗಟ್ಟೆ ಸಂಖ್ಯೆ	– 239

ಆಕಾಂಕ್ಷಿಗಳು

ಕಾಂಗ್ರೆಸ್ ಸಿ.ಪುಟ್ಟರಂಗಶೆಟ್ಟಿ

ಬಿಜೆಪಿ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಎಂ.ರುದ್ರೇಶ್

ಜೆಡಿಎಸ್ ಸೈಯದ್ ಅಕ್ರಂ, ರೇವಣ್ಣ

ಹೈಕೋರ್ಟ್ ಮೊರೆ ಹೋದ ಸಿಎನ್‌ಸಿ

ಕೊಡವರ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಯೋಗ ರಚನೆ ಮಾಡಲು ನಿರ್ದೇಶನ ನೀಡುವಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ

- ಏ.17ಕ್ಕೆ ವಿಚಾರಣೆ ಮುಂದೂಡಿದ ಕೋರ್ಟ್
- ವಕೀಲ ಸತ್ಯ ಸಬರ್ವಾಲ್ ಸಿಎಸ್‌ಸಿ ಪರ ವಾದ
- ಕೇಂದ್ರದ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ನೇತೃತ್ವ



ಮಡಿಕೇರಿ, ಏ.8– ಕರ್ನಾಟಕ ರಾಜ್ಯದ ಭಾಗವಾಗಿರುವ ಕೊಡಗು ಜಿಲ್ಲೆಗೆ ಸಂವಿಧಾನಾತ್ಮಕವಾಗಿ ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ, ಸ್ವಯಂ ಆಡಳಿತ, ಕೊಡವರನ್ನು ಎಸ್‌ಟಿ ಪಟ್ಟಿಗೆ ಸೇರಿಸುವುದು ಮತ್ತು ಕೊಡವ ನ್ಯಾಷನಲ್ ಕೌನ್ಸಿಲ್‌ನ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಆಯೋಗವೊಂದನ್ನು ರಚನೆ ಮಾಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಕರ್ನಾಟಕ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಲಾಗಿದೆ.

ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಮಾಜಿ ಕೇಂದ್ರ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಅವರು ವಕೀಲ ಸತ್ಯ ಸಬರ್ವಾಲ್ ಅವರ ಮೂಲಕ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವಾಲೆ ಅವರ ಪೀಠದ ಮುಂದೆ ಸಲ್ಲಿಸಿರುವ ರಿಟ್ ಅರ್ಜಿಯಲ್ಲಿ ಕೊಡವರ ಸ್ಥಿತಿಗತಿಯ ಕುರಿತು ವಿವರಿಸಲಾಗಿದೆ.

ಅರ್ಜಿ ಸ್ವೀಕರಿಸಿದ ನ್ಯಾಯಪೀಠ ಏ.17ಕ್ಕೆ ವಿಚಾರಣೆ ಮುಂದೂಡಿದೆ. ಪ್ರಕರಣದಲ್ಲಿ ರಾಜ್ಯ ಸರ್ಕಾರವನ್ನು ಪ್ರತಿನಿಧಿಸಲ್ಪಡುವ ರಾಜ್ಯ ಕಾನೂನು ಇಲಾಖೆ ಕಾರ್ಯದರ್ಶಿ, ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಲ್ಪಡುವ ಕೇಂದ್ರ ಕಾನೂನು ಸಚಿವಾಲಯದ ಕಾರ್ಯದರ್ಶಿ, ಕೇಂದ್ರ ಗೃಹ ಕಾರ್ಯದರ್ಶಿ ಹಾಗೂ ಕೊಡವ ನ್ಯಾಷನಲ್ ಕೌನ್ಸಿಲ್ ಅನ್ನು ಪ್ರತಿನಿಧಿಸಲ್ಪಡುವ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರನ್ನು ಪ್ರತಿವಾದಿಗಳನ್ನಾಗಿ ಹೆಸರಿಸಲಾಗಿದೆ.

ರಾಜ್ಯ ಮರು ಸಂಘಟನೆ ಕಾಯಿದೆ ಜಾರಿಗೆ ಬರುವ ಮೊದಲು ಕೊಡವ ಜನಾಂಗವು 1956ರವರೆಗೆ ತನ್ನದೇ ಆದ ಸಣ್ಣ ರಾಜ್ಯವನ್ನು ಹೊಂದಿತ್ತು. ಕರ್ನಾಟಕದೊಂದಿಗೆ ವಿಲೀನವಾದ ನಂತರ ಈ ಜನಾಂಗದ ಬೇಡಿಕೆಗಳನ್ನು ಆಡಳಿತ ವ್ಯವಸ್ಥೆ ನಿರ್ಲಕ್ಷಿಸುತ್ತಾ ಬಂದಿದೆ. ಭಾರತೀಯ ಸಂವಿಧಾನದ 244ನೇ ವಿಧಿಯ ಪ್ರಕಾರ 6ನೇ ವೇಳಾಪಟ್ಟಿಯನ್ನು ಜಾರಿಗೊಳಿಸಲಾಯಿತು. ಭಾರತದ ಸಂವಿಧಾನದ 6ನೇ ಶೆಡ್ಯೂಲ್ ಆಯಾ ರಾಜ್ಯಗಳಲ್ಲಿ ಸ್ವಾಯತ್ತತೆಯನ್ನು ನೀಡಲಾಗಿರುವ ಸ್ವಾಯುತ್ತ ಆಡಳಿತ ವಿಭಾಗಗಳ ರಚನೆಗೆ ಅವಕಾಶ ನೀಡುತ್ತದೆ.

ಇದೇ ಮಾದರಿಯಲ್ಲಿ ಕೊಡವ ಸಮುದಾಯದ ಇತಿಹಾಸ ಮತ್ತು ಸಂಸ್ಕೃತಿಯನ್ನು ರಕ್ಷಿಸಲು, ಕೊಡವ ನ್ಯಾಷನಲ್ ಕೌನ್ಸಿಲ್‌ನ ಆಕಾಂಕ್ಷೆಗಳು ಹಾಗೂ ನ್ಯಾಯ ಸಮ್ಮತ ಬೇಡಿಕೆಗಳನ್ನು ಪರಿಶೀಲಿಸಲು ಆಯೋಗವನ್ನು ರೂಪಿಸಲು ನಿರ್ದೇಶನ ಮಾಡಬೇಕೆಂದು ಮನವಿಯಲ್ಲಿ ತಿಳಿಸಲಾಗಿದೆ.

ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿರುವ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ಸಂವಿಧಾನದ ವಿಧಿಯಡಿ ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಗಾಗಿ ಆಯೋಗ ರಚನೆ ಮಾಡಬೇಕು ಅಥವಾ ಕೂರ್ಗ್‌ನ 1956ರ ಹಿಂದಿನ ಸ್ಥಿತಿಯನ್ನು ಮರುಸ್ಥಾಪಿಸಿ 'ಸಿ' ರಾಜ್ಯದಿಂದ ಸಾಂವಿಧಾನಿಕವಾಗಿ ರೂಪಾಂತರಗೊಂಡ ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು.

ಮತ್ತೆ ಹಿಂದಿನ ಸ್ಥಿತಿಯನ್ನು ಮರುಸ್ಥಾಪಿಸಲು ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯ ಅಗತ್ಯವಿದ್ದು, ಆ ನಿಟ್ಟಿನಲ್ಲಿ ಕಾನೂನು ಹೋರಾಟ ನಡೆಯುತ್ತಿದೆ. ನಮ್ಮ ಪರವಾಗಿ ನ್ಯಾಯಾಲಯದಲ್ಲಿ ವಾದ ಮಂಡಿಸುತ್ತಿರುವ ಡಾ.ಸುಬ್ರಮಣಿಯನ್ ಸ್ವಾಮಿ ಅವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ನಾಚಪ್ಪ ಹೇಳಿದರು.

ಶ್ರೀ ಕಂಚಿಕಾಮಾಕ್ಷಿ ದೇವಾಲಯದ ಪುನರ್ ಪ್ರತಿಷ್ಠಾಪನಾ ವಾರ್ಷಿಕೋತ್ಸವ

ಮಡಿಕೇರಿ,ಏ.8– ನಗರದ ನಾಲ್ಕು ಶಕ್ತಿ ದೇವತೆಗಳಲ್ಲೊಂದಾದ ಶ್ರೀ ಕಂಚಿಕಾಮಾಕ್ಷಿಯಮ್ಮ ದೇವಾಲಯದ 16ನೇ ಪುನರ್ ಪ್ರತಿಷ್ಠಾಪನಾ ವಾರ್ಷಿಕೋತ್ಸವವು ಏ.21 ಮತ್ತು 22ರಂದು ನಡೆಯಲಿದೆ.

ಕೇರಳದ ಪಯ್ಯನೂರ್‌ನ ಶ್ರೀ ಈಶ್ವರಿ ನಂಬೂದರಿ ಅವರ ನೇತೃತ್ವದಲ್ಲಿ ಎರಡು ದಿನಗಳ ಕಾಲ ವಿವಿಧಧಾರ್ಮಿಕ ವಿಧಿ ವಿಧಾನಗಳು ಜರುಗಲಿದ್ದು, ಏ.21ರಂದು ಸಂಜೆ 6 ಗಂಟೆಗೆ ಆಚಾರ್ಯರ ಆಗಮನ, ದೇವಾಲಯದಲ್ಲಿ ಪುಣ್ಯಾಹ ಶುದ್ಧಿ, ದೇವಿ ಪೂಜೆ, ಸುದರ್ಶನ ಹೋಮ ಮತ್ತು ಪ್ರಸಾದ ವಿತರಣೆ ನಡೆಯಲಿದೆ ಏ.22ರಂದು ಬೆಳಗ್ಗೆ 7 ಗಂಟೆಗೆ ಮಹಾ ಗಣಪತಿ ಹೋಮ, ಮಹಾ ಮೃತ್ಯುಂಜಯ ಹೋಮ, ಕಳಸ ಪೂಜೆ, ದೇವಿಗೆ ಅಭಿಷೇಕ, ಅಲಂಕಾರ ಪೂಜೆ ಹಾಗೂ ಮಹಾ ಪೂಜೆ ನೆರವೇರಲಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ದೇವಾಲಯದ ಆಡಳಿತ ಮಂಡಳಿ ಕೋರಿದೆ.

ಕರಿಮೆಣಸು ಕೆಲಸಕ್ಕೆ ಬಂದಿದ್ದ ಮಹಿಳೆ ನೇಣಿಗೆ ಶರಣು

ಮಡಿಕೇರಿ,ಏ.8– ಕರಿಮೆಣಸು ಕೆಲಸಕ್ಕಾಗಿ ತಮಿಳುನಾಡಿನಿಂದ ಜಿಲ್ಲೆಗೆ ಬಂದಿದ್ದ ಕಾರ್ಮಿಕ ಮಹಿಳೆಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸುಂಟಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮೂಲತಃ ತಮಿಳುನಾಡು ತಿರುನೆಲ್ವಿ ಜಿಲ್ಲೆಯ ಗುಣಶೇಖರ್ ಎಂಬುವರ ಪುತ್ರಿ ಶಾಲಿನಿ(21) ಎಂಬಾಕೆಯನ್ನು ಸಂಜೀವ್ ಎಂಬಾತನೊಂದಿಗೆ ಎರಡು ವರ್ಷಗಳ ಹಿಂದೆ ವಿಹಾಹ ಮಾಡಿಕೊಡಲಾಗಿತ್ತು.



ಕಳೆದ 2 ತಿಂಗಳ ಹಿಂದೆ ಈ ದಂಪತಿ ಕರಿಮೆಣಸು ಕೆಲಸಕ್ಕೆಂದು ಮತ್ತಿಕಾಡುವಿನ ಚೌಡಿಕಾಡು ತೋಟದಲ್ಲಿ ಬಂದು ಲೈನ್ ಮನೆಯಲ್ಲಿ ನೆಲೆಸಿದ್ದರು. ಏ.4ರಂದು ತಮಿಳುನಾಡಿನಲ್ಲಿದ್ದ ತನ್ನ ಮಾವನಿಗೆ ಕರೆ ಮಾಡಿರುವ ಸಂಜೀವ್, ಸೋಮವಾರ ಬೆಳಗ್ಗೆಯಿಂದ ಶಾಲಿನಿ ಕಾಣೆಯಾಗಿದ್ದಾಳೆ ಎಂದು ವಿಷಯ ತಿಳಿಸಿದ್ದನಲ್ಲದೆ ಸುಂಟಿಕೊಪ್ಪ ಪೊಲೀಸ್ ಠಾಣೆಗೂ ದೂರು ನೀಡಿದ್ದ. ವಿಷಯ ಅರಿತು ತಮಿಳುನಾಡಿನಿಂದ ಬಂದ ಶಾಲಿನಿಯ ತಂದೆ ಗುಣಶೇಖರ್ ಅವರು ಮಗಳು ಕಾಣೆಯಾಗಿರುವ ವಿಚಾರದಲ್ಲಿ ಅಳಿಯನ ಮೇಲೆ ಸಂಶಯ ವ್ಯಕ್ತಪಡಿಸಿ ಏ.6ರಂದು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಶೋಧ ಕಾರ್ಯ ಕೈಗೊಂಡಾಗ ಪಕ್ಕದ ತೋಟವೊಂದರ ಮರದಲ್ಲಿ ಶಾಲಿನಿಯ ಮೃತ ದೇಹ ವೇಲ್‌ನಿಂದ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಮೃತದೇಹ ಕೊಳೆತು ಹೋಗಿದ್ದು ಏ.2ರ ರಾತ್ರಿ ಶಾಲಿನಿ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಶಂಕಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಸುಂಟಿಕೊಪ್ಪ ಪೊಲೀಸರು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಶಾಲಿನಿಯ ಮೃತ ದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿದರು.

ಎಸ್‌ಡಿಪಿಐ ಅಭ್ಯರ್ಥಿಗೆ ನೋಟೀಸ್ ಜಾರಿ

ಮಡಿಕೇರಿ,ಏ.8– ಎಸ್‌ಡಿಪಿಐ ಪಕ್ಷದ ಮಡಿಕೇರಿ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಅಮೀನ್ ಮೊಯ್ಸಿನ್ ಅವರಿಗೆ ಚುನಾವಣೆಯ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದ ಮೇಲೆ ನೋಟೀಸ್ ನೀಡಲಾಗಿದೆ. ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಸಂದರ್ಭ ಪತ್ರಿಕೆ, ಮಾಧ್ಯಮ, ಸಾಮಾಜಿಕ ಜಾಲತಾಣ ಹಾಗೂ ಇತರ ಮೂಲಗಳಲ್ಲಿ ಪಕ್ಷದ ಚಿಹ್ನೆ ಒಳಗೊಂಡು ಪ್ರಚಾರ ನಡೆಸಬೇಕಿದ್ದಲ್ಲಿ ಎಂ.ಸಿ.ಎಂ.ಸಿ ಕಮಿಟಿಯ ಪೂರ್ವ ಅನುಮತಿ ಪಡೆಯಬೇಕಿದೆ.

ಆದರೆ ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್‌ನಲ್ಲಿ ನೀವು ರಾಜಕೀಯ ಪ್ರೇರಿತ ಹೇಳಿಕೆಯನ್ನು ಹಂಚಿಕೊಂಡಿರುವುದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ. ಆದ್ದರಿಂದ ನೀತಿ ಸಂಹಿತೆ ಉಲ್ಲಂಘಿಸಿರುವ ಬಗ್ಗೆ ಪ್ರಜಾ ಪ್ರತಿನಿಧಿ ಕಾಯ್ದೆ 1951ರ ರೀತ್ಯ ನಿಮ್ಮ ಮೇಲೆ ಏಕೆ ಮುಂದಿನ ಕಾನೂನು ಕ್ರಮ ಜರುಗಿಸಬಾರದು ಎಂಬುದಕ್ಕೆ ನೋಟೀಸ್ ತಲುಪಿದ 24 ಗಂಟೆಯ ಒಳಗೆ ಖುದ್ದು ಲಿಖಿತ ಸಮಜಾಯಿಷಿಕೆ ನೀಡುವಂತೆ ಮಡಿಕೇರಿ ವಿಧಾನ ಸಭಾ ಕ್ಷೇತ್ರದ ಚುನಾವಣಾಧಿಕಾರಿ ಮತ್ತು ಉಪ ವಿಭಾಗಾಧಿಕಾರಿಗಳು ಅಮೀನ್ ಮೊಯ್ಸಿನ್ ಅವರಿಗೆ ಸೂಚಿಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಕಕ್ಕಬ್ಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ

ಮಳೆಗಾಗಿ ಪ್ರಾರ್ಥಿಸಿ ಪರ್ಜನ್ಯ ಹೋಮ



ನಾಪೋಕ್ಲು, ಏ.8– ಸಮೀಪದ ಕಕ್ಕಬ್ಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ಭಕ್ತ ಜನ ಸಂಘದ ವತಿಯಿಂದ ಶುಕ್ರವಾರ ಮಳೆಗಾಗಿ ಪರ್ಜನ್ಯ ಹೋಮ ನಡೆಸಲಾಯಿತು.

ಈ ಸಂದರ್ಭದಲ್ಲಿ ಅಖಿಲ ಕೊಡವ ಸಮಾಜದ ಅಧ್ಯಕ್ಷರೂ ದೇವತಕ್ಕರೂ ಆಗಿರುವ ಪರದಂಡ ಸುಮನ್ ಸುಬ್ರಮಣಿ ಮಾತನಾಡಿ, ಜಿಲ್ಲೆಯ ಜನರ ಶಾಂತಿ ಮತ್ತು ಸುಭಿಕ್ಷೆಗಾಗಿ ಪಾಡಿ ಶ್ರೀ ಇಗ್ಗುತ್ತಪ್ಪ ಸನ್ನಿಧಿಯಲ್ಲಿ ಪರ್ಜನ್ಯ ಹೋಮ ನೆರವೇರಿಸಲಾಗಿದೆ. ಜಿಲ್ಲೆಯ ಎಲ್ಲೆಡೆ ಮಳೆಯಾಗಬೇಕು. ಸಮೃದ್ಧಿ ನೆಲಸಬೇಕು ಎಂಬ ಆಕಾಂಕ್ಷೆಯೊಂದಿಗೆ ತಕ್ಕ ಮುಖ್ಯಸ್ಥರು ಒಟ್ಟಾಗಿ ದೇವನೆಲೆಯಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇವೆ. ಸಂಕಲ್ಪ ಕೈಗೊಂಡಂದಿನಿಂದ ಅಲ್ಲಲ್ಲಿ ಮಳೆ ಬರಲು ಆರಂಭಿಸಿದೆ ಇಂದು ಕೂಡ ಮಳೆ ಆಗಿದೆ ಎಂದರು.

ಪುತ್ತೂರಿನ ತಂತ್ರಿ ಗಿರೀಶ್ ಭಟ್ ನೇತೃತ್ವದಲ್ಲಿ ಮುಖ್ಯ ಅರ್ಚಕ ಕುಶಭಟ್, ಶ್ರೀಕಾಂತ್ ಹಾಗೂ ಶ್ರೀನಿವಾಸ್ ಪರ್ಜನ್ಯ ಹೋಮ ಹಾಗೂ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಭಕ್ತ ಜನ ಸಂಘದ ಅಧ್ಯಕ್ಷ ಕಾಂಡಂಡ ಜೋಯಪ್ಪ, ಕಲಿಯಂಡ ಹ್ಯಾರಿ ಮಂದಣ್ಣ, ಪರದಂಡ ಡಾಲಿ, ಪ್ರಹ್ಲಾದ, ವಿಠಲ, ಸದಾ ನಾಣಯ್ಯ, ಜೋಯಪ್ಪ, ಶಂಭು ನಂಜಪ್ಪ, ಪಾಡಂಡ ನರೇಶ್, ಕೇಟೋಳಿರ ಕುಟ್ಟಪ್ಪ, ಕಣಿಯರ ನಾಣಯ್ಯ, ಕಲಿಯಂಡ ರಾಜ, ಕೋಡಿಮಣಿಯಂಡ ಸುರೇಶ್, ಕಂಬೇಯಂಡ ಪೊನ್ನು, ಕಾಟುಮಣಿಯಂಡ ತಮ್ಮಯ್ಯ, ಪರದಂಡ ಬೋಪಣ್ಣ, ಪಾರುಪತ್ತೆಗಾರ ಪರದಂಡ ಪ್ರಿನ್ಸ್ ತಮ್ಮಪ್ಪ ರೋಷನ್, ಸಾಬು, ಅವಿನ್ ಇನ್ನಿತರರು ಇದ್ದರು.

ಬಂಟರ ಸಮುದಾಯದ ಸಮಸ್ಯೆ ನಿವಾರಣೆಗೆ ಕ್ರಮ

ಜನಾಂಗದ ದಿಕ್ಕು ತಪ್ಪಿಸುತ್ತಿರುವ ಪಟ್ಟಭದ್ರ ಹಿತಾಶಕ್ತಿಗಳ ಬಗ್ಗೆ ಆಕ್ರೋಶ



ವಿರಾಜಪೇಟೆ ಏ.8– ಬಂಟರ ಸಮುದಾಯದ ಕಟ್ಟ ಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ, ಸಮಸ್ಯೆ ನಿವಾರಣೆಗೆ ಜಿಲ್ಲಾ ಬಂಟರ ಸಂಘ ಮುಂದಾಗಿದೆ ಎಂದು ಕೊಡಗು ಜಿಲ್ಲಾ ಬಂಟರ ಸಂಘದ ಅಧ್ಯಕ್ಷ ವಕೀಲ ಬಿ.ರತ್ನಾಕರ ಶೆಟ್ಟಿ ತಿಳಿಸಿದ್ದಾರೆ.

ಕೊಡಗು ಜಿಲ್ಲಾ ಬಂಟರ ಸಂಘದ ವತಿಯಿಂದ ವಿರಾಜಪೇಟೆ ನಗರದ ಹೊರವಲಯದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಸಂಘದ ಕಾರ್ಯಕಾರಿಣಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಬಂಟರ ಸಮೂದಾಯದಲ್ಲಿ ಸಮಸ್ಯೆಗಳೇನೆ ಇದ್ದರೂ ಅದನ್ನು ಬಗೆಹರಿಸಿಕೊಂಡು ಸಮೂದಾಯದ ಬಡ ಕುಟುಂಬಗಳಿಗೆ ಮೂಲ ಭೂತ ಸೌಲಭ್ಯಗಳು ದೊರಕಿಸುವಂತಹ ಕಾರ್ಯವನ್ನು ಬಂಟರ ಸಂಘ ಮಾಡಲಿದೆ ಎಂದರು.

ಕೆಲವು ಪಟ್ಟಪದ್ದ ಹಿತಾಶಕ್ತಿ ವ್ಯಕ್ತಿಗಳು ತಾನು ತನ್ನದು ಎಂಬ ಸಂಘಟನೆಯನ್ನು ಹುಟ್ಟುಹಾಕಿ ಇಂದು ಜನಾಂಗದವರ ದಿಕ್ಕು ತಪ್ಪಿಸುವಂತ ಕೆಲಸ ಮಡುತ್ತಿರುವುದು ದುರಾದೃಷ್ಟಕರ ಎಂದು ಆರೋಪಿಸಿದ ರತ್ನಾಕರ ಶೆಟ್ಟಿ ಅಮು ಬಂಟರ ಸಂಘಟನೆ ಜನಾಂಗದ ಶ್ರೇಂಯೋಭಿವೃದ್ಧಿಗಾಗಿ ಶ್ರಮಿಸುತ್ತದೆ. ವಿಧಾನಸಭಾ ಚುನಾವಣೆ ನಂತರ ಜನಾಂಗದ ಬಾಂದವರಿಗಾಗಿ ಹಲವು ಯೋಜನೆಗಳನ್ನು ಹಾಕಿಕೊಂಡಿದ್ದು ಮುಂಬರುವ ದಿನಗಳಲ್ಲಿ ಯೋಜನೆಗಳು ಕಾರ್ಯಗತವಾಗಲಿದೆ ಎಂದರು.

ಬಂಟರ ಸಮೂದಾಯಕ್ಕೆ ಭವನ ನಿರ್ಮಾಣಕ್ಕೆಂದು ಧಾನಿಗಳು ನೀಡಿರುವ ಸ್ಥಳವನ್ನು ಬಂಟರ ಭವನ ಟ್ರಸ್ಟ್ ಹೆಸರಿನಲ್ಲಿ ದುರ್ಬಳಕೆ ಮಾಡಿ ಕೊಂಡಿರುವುದು ಬಾಂದವರಿಗೆ ಮಾಡಿರುವ ಅಪಮಾನವಾಗಿದೆ, ಜನಾಂಗದ ಎಲ್ಲಾ ಕಾರ್ಯಕ್ರಮಗಳನ್ನು ಒಂದೇ ಸೂರಿನಡಿಯಲ್ಲಿ ನಡೆಯುವಂತಾಗಲು ಜಿಲ್ಲೆಯ ಇತರ ಭಾಗದಲ್ಲಿರುವ ಜನಾಂಗ ಬಾಂದವರನ್ನು ಗುರುತಿಸುವ ಮೂಲಕ ಸಂಘಟಿಸಿ ಬಂಟರ ಸಮೂದಾಯವನ್ನು ಅಭಿವೃದ್ಧಿಯತ್ತ ಕೊಂಡ್ಯೊಯುವುದಾಗಿ ಹೇಳಿದರು.

ಕೊಡಗು ಜಿಲ್ಲಾ ಬಂಟರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಸಿ.ಶಭರಿಶ್ ಶೆಟ್ಟಿ, ಬಂಟರ ಸಂಘದ ಜಿಲ್ಲಾ ಗೌರವ ಅಧ್ಯಕ್ಷ ಕೆ.ಆರ್.ಬಾಲಕೃಷ್ಣ ರೈ ಮಾತನಾಡಿ, ಈ ಹಿಂದೆ ಹತ್ತು ಜನರು ಸೇರಿ ಬಂಟರ ಭವನ ಟ್ರಸ್ಟ್ ಮಾಡಿರುವುದು ಸರಿಯಲ್ಲ, ಬಂಟರ ಸಂಘವನ್ನು ವಿಭಜನೆ ಮಡುವಂತ ಕೆಲಸ ಆಗಬಾರದು. ಬಂಟರ ಬಾಂದವರನ್ನು ಒಂದೇ ಸೂರಿನಡಿ ಸೇರಿಸುವಂತ ಕಾರ್ಯವನ್ನು ಜಿಲ್ಲಾ ಸಂಘದ ವತಿಯಿಂದ ನಡೆಯುತ್ತಿದೆ ಎಂದರು. ಸಭೆಯಲ್ಲಿ ಜಿಲ್ಲಾ ಬಂಟರ ಸಂಘದ ನಿಕಟಪೂರ್ವ ಅಧ್ಯಕ್ಷ ಬಿ.ಡಿ.ನಾರಾಯಣ ರೈ, ತಾಲೂಕು ಅಧ್ಯಕ್ಷ ಭರತ್‌ರಾಂ ರೈ, ಜಿಲ್ಲಾ ಸಮಿತಿಯ ಶಶಾಂಕ್ ರೈ ಮತ್ತಿತರರಿದ್ದರು.



ಹೆಗ್ಗವಾಡಿಯಲ್ಲಿ ವೀಣಾ ಧ್ರುವನಾರಾಯಣ್ ಅಂತ್ಯಕ್ರಿಯೆ

ಚಾಮರಾಜನಗರ, ಏ.8– ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಬೆಳಗ್ಗೆ ನಿಧನರಾದ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ದಿ.ಆರ್. ಧ್ರುವನಾರಾಯಣ್ ಅವರ ಪತ್ನಿ ವೀಣಾ ಧ್ರುವನಾರಾಯಣ್ ಅವರ ಅಂತ್ಯಕ್ರಿಯೆ ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ಶನಿವಾರ ನಡೆಯಿತು.

ಹೆಗ್ಗವಾಡಿಯ ಧ್ರುವನಾರಾಯಣ್ ಅವರ ತೋಟದಲ್ಲಿ ಧ್ರುವನಾರಾಯಣ್ ಅವರ ಸಮಾಧಿಯ ಬಲಭಾಗದಲ್ಲಿ ವೀಣಾ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು. ಪುತ್ರರಾದ ದರ್ಶನ್ ಮತ್ತು ಧೀರನ್ ಅವರು ಅಂತ್ಯಕ್ರಿಯೆ ವಿಧಿ – ವಿಧಾನಗಳನ್ನು ನೆರವೇರಿಸಿದರು.

ವೀಣಾ ಧ್ರುವನಾರಾಯಣ್ ಅವರ ದೇಹವನ್ನು ಮೈಸೂರಿನ ಸ್ವಗೃಹದಿಂದ ತಾಲೂಕಿನ ಹೆಗ್ಗವಾಡಿ ಗ್ರಾಮಕ್ಕೆ ಶುಕ್ರವಾರ ಸಂಜೆ ತರಲಾಗಿತ್ತು. ಶನಿವಾರ ಬೆಳಗ್ಗೆವರೆಗೆ ಹೆಗ್ಗವಾಡಿಯಲ್ಲಿರುವ ಧ್ರುವನಾರಾಯಣ್ ಅವರ ನಿವಾಸದಲ್ಲಿ ಮೃತದೇಹವನ್ನು ಇರಿಸಲಾಗಿತ್ತು. ಸಂಬಂಧಿಕರು, ಗ್ರಾಮಸ್ಥರು, ಹಿತೈಷಿಗಳು, ಧ್ರುವನಾರಾಯಣ್ ಅವರ ಬೆಂಬಲಿಗರು, ರಾಜಕಾರಣಿಗಳು, ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ಅಂತಿಮ ನಮನ ಸಲ್ಲಿಸಿದರು. ನಂತರ ಗ್ರಾಮದಲ್ಲಿ ಮೆರವಣಿಗೆ ನಡೆಸಿ, ತೋಟದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ಧ್ರುವನಾರಾಯಣ್ ಅವರು ಮೃತಪಟ್ಟ 28 ದಿನಗಳಲ್ಲಿ ಅವರ ಪತ್ನಿ ವೀಣಾ ಅವರು ಮೃತಪಟ್ಟಿದ್ದರಿಂದ ಅವರ ಮಕ್ಕಳು, ಸಂಬಂಧಿಕರು, ಹಿತೈಷಿಗಳು, ಸಾರ್ವಜನಿಕರು, ರಾಜಕಾರಣಿಗಳು ಮರುಕ ವ್ಯಕ್ತಪಡಿಸಿದರು. ಮೈಸೂರು ವಿಭಾಗದ ಕಾಂಗ್ರೆಸ್ ಉಸ್ತುವಾರಿ ರೋಜಿಜಾನ್, ಸಂಸದ ಡಿ.ಕೆ. ಸುರೇಶ್, ಮಾಜಿ ಸಂಸದ ಚಂದ್ರಪ್ಪ, ಶಿವಣ್ಣ ಸಿದ್ದರಾಜು, ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ಪುಟ್ಟರಂಗಶೆಟ್ಟಿ, ಅನಿಲ್ ಚಿಕ್ಕಮಾಧು, ಎನ್. ಮಹೇಶ್, ಮಾಜಿ ಶಾಸಕರಾದ ಎಆರ್. ಕೃಷ್ಣಮೂರ್ತಿ, ಜಿಎನ್. ನಂಜುಂಡಸ್ವಾಮಿ, ಎಸ್. ಜಯಣ್ಣ, ಎಸ್.ಬಾಲರಾಜು, ಕಳಲೆ ಕೇಶವಮೂರ್ತಿ, ಮುಖಂಡರಾದ ಪುಷ್ಪ ಅಮರನಾಥ್, ಪುಟ್ಟಸ್ವಾಮಿ, ಹ.ರಾ. ಮಹೇಶ್, ರಘುನಂದನ್, ಪಿ. ಮರಿಸ್ವಾಮಿ, ಕೆರಹಳ್ಳಿ ನವೀನ್, ಎಸ್.ಸಿ. ಬಸವರಾಜು, ಡಾ.ವಿಜಯಕುಮಾರ್, ದೊಡ್ಡರಾಯಪೇಟೆ ಅರುಣ್, ಕಾಗಲವಾಡಿ ಚಂದ್ರು, ಕೆ.ಪಿ. ಸದಾಶಿವಮೂರ್ತಿ, ಚಿಕ್ಕಮಹದೇವ್, ಬಿ.ಕೆ. ರವಿಕುಮಾರ್ ಇದ್ದರು.

ತಡವಾಗಿ ಬಂದ ಶಾಸಕ ಪುಟ್ಟರಂಗಶೆಟ್ಟಿಗೆ ತರಾಟೆ

ಚಾಮರಾಜನಗರ, ಏ.8– ಮಾಜಿ ಸಂಸದ ಆರ್. ಧ್ರುವನಾರಾಯಣ್ ಅವರ ಪತ್ನಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ತಡವಾಗಿ ಬಂದ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರನ್ನು ಅವರ ಬೆಂಬಲಿಗರು ತರಾಟೆಗೆ ತೆಗೆದುಕೊಂಡ ಘಟನೆ ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ಸಂಭವಿಸಿದೆ.

ಮಧ್ಯಾಹ್ನ 12.30ರ ಸಮಯಕ್ಕೆ ಹೆಗ್ಗವಾಡಿಗೆ ಪುಟ್ಟರಂಗಶೆಟ್ಟಿ ಆಗಮಿಸಿದರು. ಈ ವೇಳೆ ಅವರನ್ನು ಸುತ್ತುವರಿದ ಧ್ರುವನಾರಾಯಣ್ ಅವರ ಬೆಂಬಲಿಗರು ಹಾಗೂ ಗ್ರಾಮಸ್ಥರು ಶಾಸಕರನ್ನು ತರಾಟೆಗೆ ತೆಗೆದುಕೊಂಡರು ಎನ್ನಲಾಗಿದೆ.

ಇಷ್ಟು ತಡವಾಗಿ ಆಗಮಿಸಿದ್ದೀರಿ. ನಿಮ್ಮನ್ನು ಇಷ್ಟು ಮಟ್ಟಕ್ಕೆ ಬೆಳೆಸಿದ ಧ್ರುವ ನಾರಾಯಣ್ ಅವರ 11ನೇ ದಿನದ ಕಾರ್ಯದಲ್ಲೂ ನೀವು ಭಾಗವಹಿಸಲಿಲ್ಲ. ಇಂದು ಅವರ ಪತ್ನಿ ಮೃತಪಟ್ಟಿದ್ದರೂ ನೀವು (ಪುಟ್ಟರಂಗಶೆಟ್ಟಿ) ಚುನಾವಣಾ ಪ್ರಚಾರ ಕಾರ್ಯ ನಡೆಸಿ ವಿಳಂಬವಾಗಿ ಬಂದಿದ್ದೀರಿ. ನಿಮಗೆ ಧ್ರುವನಾರಾಯಣ್ ಹಾಗೂ ಅವರ ಕುಟುಂಬಕ್ಕಿಂತ ಚುನಾವಣಾ ಪ್ರಚಾರವೇ ಹೆಚ್ಚಾಯಿತೇ? ಎಂದು ತರಾಟೆಗೆ ತೆಗೆದುಕೊಂಡರು ಎನ್ನಲಾಗಿದೆ. ಈ ವೇಳೆ ಶಾಸಕರು ಶುಕ್ರವಾರ ಮೈಸೂರಿನ ಧ್ರುವನಾರಾಯಣ್ ಅವರ ಮನೆಗೆ ತೆರಳಿ ಅಂತಿಮ ದರ್ಶನ ಪಡೆದಿದ್ದೆ. ಅವರ 11ನೇ ದಿನದ ಕಾರ್ಯದ ದಿನ ಬೆಳಗ್ಗೆಯೇ ಭೇಟಿ ನೀಡಿದ್ದೆ ಎಂದು ಸಮಜಾಯಿಷಿ ನೀಡಿದರು ಎನ್ನಲಾಗಿದೆ. ಇದಕ್ಕೆ ಅಲ್ಲಿದ್ದ ಮುಖಂಡರು ಧ್ರುವನಾರಾಯಣ ಅವರ ಬೆಂಬಲಿಗರನ್ನು ಸಮಾಧಾನಪಡಿಸಿದರು ಎಂದು ತಿಳಿದುಬಂದಿದೆ.

ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ



ಚಾಮರಾಜನಗರ, ಏ.8– ರಾಜ್ಯ ಬಿಜೆಪಿ ಸರ್ಕಾರ ಒಳ ಮೀಸಲಾತಿ ಘೋಷಣೆ ಮಾಡಿರುವುದು ಎಲ್ಲವರ್ಗದ ಸಮುದಾಯಗಳಿಗೂ ಅನುಕೂಲವಾಗಿದೆ. ಆಗಾಗಿ ಬಿಜೆಪಿ ಬೆಂಬಲಿಸಬೇಕು ಎಂದು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ, ಮಾಜಿ ಸಚಿವರೂ ಹಾಗೂ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಚುನಾವಣಾ ಉಸ್ತುವಾರಿ ಕೋಟೆ ಎಂ.ಶಿವಣ್ಣ ಮನವಿ ಮಾಡಿದರು.

ನಗರದ ಮೇಘಾ ಕಾಂಪ್ಲೆಕ್ಸ್‌ನಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ನಗರ ಘಟಕದ ಬಿಜೆಪಿ ಮಹಾಶಕ್ತಿ ಕೇಂದ್ರಗಳ ಸಭೆಯಲ್ಲಿ ಅವರು ಮಾತನಾಡಿದರು. ರಾಜ್ಯದ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು ಪರಿಶಿಷ್ಟ ಬಹುದಿನಗಳ ಬೇಡಿಕೆಯಾದ ಮೀಸಲಾತಿ ಹೆಚ್ಚಳ ಮಾಡಿದರು. ಪರಿಶಿಷ್ಟ ಜಾತಿಗಿದ್ದ ಶೇ.15 ರಿಂದ ಶೇ.17 ರಷ್ಟಕ್ಕೆ ಹೆಚ್ಚಳ ಪರಿಶಿಷ್ಟ ಪಂಗಡಕ್ಕಿದ್ದ ಶೇ.3ರಿಂದ ಶೇ.7 ರಷ್ಟಕ್ಕೆ ಹೆಚ್ಚು ಮಾಡಿದ್ದು, ಇತ್ತೀಚಿಗೆ ಪರಿಶಿಷ್ಟರ ಒಳ ಮೀಸಲಾತಿ ಜಾರಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದು, ಇದು ಎಲ್ಲ ಸಮುದಾಯಗಳಿಗೂ ಅನೂಕೂಲವಾಗಲಿದೆ ಎಂದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 15 ವರ್ಷದಿಂದ ಬಿಜೆಪಿ ಶಾಸಕರು ಇಲ್ಲದೆ ಪಕ್ಷದ ಕಾರ್ಯಕರ್ತರು ತೊಂದರೆ ಅನುಭವಿಸುವಂತಾಗಿದೆ ಈ ಬಾರಿಯ ಚುನಾವಣೆಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಒಗ್ಗಟ್ಟಿನಿಂದ ಶ್ರಮಿಸಿ ಪಕ್ಷದ ಶಾಸಕರನ್ನು ಆಯ್ಕೆ ಮಾಡಿದರೆ ಕ್ಷೇತ್ರದ ಅಭಿವೃದ್ಧಿಯಾಗುವುದರ ಜೊತೆಗೆ ಕಾರ್ಯಕರ್ತರಿಗೂ ಅನುಕೂಲವಾಗುತ್ತದೆ ಎಂದರು.

ದೇಶದಲ್ಲಿ ಪ್ರಧಾನಿ ನರೇಂದ್ರಮೋದಿಯವರು, ರಾಜ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಉತ್ತಮ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಇದರಿಂದ ರಾಜ್ಯ, ದೇಶ ಬಲಿಷ್ಠವಾಗಿದೆ. ಕ್ಷೇತ್ರದಲ್ಲಿ ಯಾರೇ ಅಭ್ಯರ್ಥಿಯಾಗಲಿ ಒಗ್ಗಟ್ಟಿನಿಂದ ಶ್ರಮಿಸಿ ಪಕ್ಷದ ಅಭ್ಯರ್ಥಿ ಗೆಲ್ಲಿಸಿಕೊಡುವ ಮೂಲಕ ಮುಖ್ಯಮಂತ್ರಿಗಳು, ಪ್ರಧಾನಮಂತ್ರಿಗಳ ಕೈ ಬಲಪಡಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರು, ಬಿಜೆಪಿ ನಿಕಟ ಪೂರ್ವ ಅಧ್ಯಕ್ಷ ಆರ್.ಸುಂದರ್, ಪ್ರೊ.ಕೆ. ಮಲ್ಲಿಕಾರ್ಜುನಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ಡಾ.ಎ.ಆರ್.ಬಾಬು, ನಗರ ಮಂಡಲ ಅಧ್ಯಕ್ಷ ರಾಜು, ನರಸಭಾ ಮಾಜಿ ಅಧ್ಯಕ್ಷರಾದ ಸುರೇಶ್ ನಾಯಕ, ಮಹದೇವನಾಯಕ, ನಾಮನಿರ್ದೇಶನ ಸದಸ್ಯ ಸುದರ್ಶನ್ ಆಳ್ವಾ, ರಾಮಸಮುದ್ರ ಶಿವಣ್ಣ, ಜಿಲ್ಲಾ ಮಾಧ್ಯಮ ಸಂಚಾಲಕ್ ಎನ್.ಮಂಜುನಾಥ್ ಹಾಗೂ ಮಹಾಶಕ್ತಿ ಕೇಂದ್ರದ ಅಧ್ಯಕ್ಷರು, ಪದಾಧಿಕಾರಿಗಳು, ಶಕ್ತಿಕೇಂದ್ರದ ಅಧ್ಯಕ್ಷರು, ಪದಾಧಿಕಾರಿಗಳು, ನಗರಸಭಾ ಸದಸ್ಯರು, ಇತರರು ಭಾಗವಹಿಸಿದ್ದರು.

ಕರ್ನಾಟಕದ ಎಲ್ಲಾ ಪಕ್ಷಗಳು ಭ್ರಷ್ಟಾಚಾರಕ್ಕೆ ಕೈ ಹಾಕಿವೆ



ಚಾಮರಾಜನಗರ, ಏ.8– ಕರ್ನಾಟಕದ ಎಲ್ಲಾ ರಾಜಕೀಯ ಪಕ್ಷಗಳು ಭ್ರಷ್ಟಾಚಾರಕ್ಕೆ ಕೈ ಹಾಕಿವೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಭ್ಯರ್ಥಿ ವಾಟಾಳ್ ನಾಗರಾಜ್ ಆರೋಪಿಸಿದ್ದಾರೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಹೊನ್ನಹಳ್ಳಿ ಗ್ರಾಮದಲ್ಲಿ ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಕರ್ನಾಟಕದ ಎಲ್ಲಾ ಪಕ್ಷಗಳು ಭ್ರಷ್ಟಾಚಾರಕ್ಕೆ ಕೈ ಹಾಕಿದ್ದು, ಅಭ್ಯರ್ಥಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆಯಿಂದ ಚುನಾವಣೆ ಮುಗಿಯುವವರೆಗೂ ಭ್ರಷ್ಟಾಚಾರ ನಡೆಯುತ್ತಿದೆ. ಇದು ನಿಲ್ಲಬೇಕು ಎಂದರು.

ಈ ನಾಡಿನ ಅಭ್ಯುದಯ ಆಗ ಬೇಕಾದರೆ ಚುನಾವಣೆ ಪ್ರಾಮಾಣಿಕವಾಗಿ ನಡೆಯಬೇಕು. ಚುನಾವಣೆ ವ್ಯಾಪಾರವಲ್ಲ. ದೇಶದ ಜನರಿಗೆ ಪ್ರಜಾತಂತ್ರ ವ್ಯವಸ್ಥೆಯೇ ಚುನಾವಣೆಯಾಗಿದೆ. ಚುನಾವಣೆ ಅಕ್ರಮ ಆಗಬಾರದು. ಪರಿಶುದ್ಧವಾದ ಚುನಾವಣೆಯಾಗಬೇಕು ಎಂದರು. ಪ್ರಜಾತಂತ್ರ ವ್ಯವಸ್ಥೆ ಉಳಿಯಬೇಕಾದರೆ ಚುನಾವಣೆ ಪವಿತ್ರವಾಗಿರಬೇಕು. ಮತದಾರರ ಮತವನ್ನು ಪವಿತ್ರ ಮತ ಎಂದು ಕರೆಯುವುದು. ಪವಿತ್ರ ಮತವನ್ನು ಅಪವ್ಯಯ, ಅಪಪವಿತ್ರ ಮಾಡಬಾರದು. ಚುನಾವಣೆ ಯಾವಾಗಲೂ ಜಾತಿ, ಹಣ ಇದರ ಮೇಲೆ ನಿಲ್ಲಬಾರದು. ಯಾವುದೇ ಕಾರಣಕ್ಕೂ ಹಣ, ಜಾತಿ ಬರದಂತೆ ನೋಡಬೇಕು, ಹಣದಿಂದ ಮತವನ್ನು ಮಾರಿಕೊಳ್ಳುವುದು ಅಕ್ಷಮ್ಯ ಅಪರಾಧ ಚುನಾವಣೆಯಲ್ಲಿ ಯಾವುದೇ ಭ್ರಷ್ಟಾಚಾರ ಆಗದಂತೆ ಚುನಾವಣಾ ಆಯೋಗ ನಿಗಾವಹಿಸಬೇಕು ಎಂದು ವಾಟಾಳ್ ನಾಗರಾಜ್ ಆಗ್ರಹಿಸಿದರು.

ಚಾಮರಾಜನಗರ ಕ್ಷೇತ್ರದ ಅಭಿವೃದ್ಧಿಗಾಗಿ ಈ ಬಾರಿ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸುವಂತೆ ಜನತೆಯಲ್ಲಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ವರದನಾಯಕ, ಪಾರ್ಥಸಾರಥಿ, ಶಿವಲಿಂಗಮೂರ್ತಿ, ಬಸಪ್ಪನಪಾಳ್ಯ ಕುಮಾರ್, ಹುಂಡಿ ಬಸವಣ್ಣ, ಮಹೇಶ್, ಮಹೇಂದ್ರ ಇತರರು ಭಾಗವಹಿಸಿದ್ದರು.

ಬಾಬೂಜಿ, ಅಂಬೇಡ್ಕರ್ ಅವರು ಎರಡು ಕಣ್ಣುಗಳಿದ್ದಂತೆ

ಚಾಮರಾಜನಗರ, ಏ.8– ಹಸಿರುಕ್ರಾಂತಿಯ ಹರಿಕಾರ, ಭಾರತದ ಉಪಪ್ರಧಾನಿ ಡಾ. ಬಾಬುಜಗಜೀಗನರಾಂ ಹಾಗೂ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶದ ಎರಡು ಕಣ್ಣುಗಳಿದ್ದಂತೆ ಎಂದು ಪುರಸಭಾ ಮಾಜಿ ಅಧ್ಯಕ್ಷ ಆರ್.ಎಂ.ಕಾಂತರಾಜ್ ಬಣ್ಣಿಸಿದರು.

ನಗರದ 15ನೇ ವಾರ್ಡ್‌ನಲ್ಲಿ ಡಾ. ಬಾಬು ಜಗಜೀವನರಾಂ ಯುವಕರ ಕಲಾ ಸಂಘದ ವತಿಯಿಂದ ನಡೆದ ಡಾ. ಬಾಬುಜಗಜೀವನ ರಾಂರವರ 116ನೇ ಜಯಂತಿ ಕಾರ್ಯಕ್ರಮದಲ್ಲಿ ಬಾಬೂಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಡಾ. ಬಾಬುಜಗಜೀವನರಾಂ ಅವರು ದಕ್ಷ ಆಡಳಿತಗಾರರಾಗಿ ಆದರ್ಶಪ್ರಾಯರಾಗಿದ್ದಾರೆ. ಕೃಷಿ ಸಚಿವರಾಗಿ ಅವರು ಮಾಡಿದ ವಿನೂತನ ಅಮೋಘ ಸೇವೆಗೆ ದೇಶ ಅವರನ್ನು ಹಸಿರುಕ್ರಾಂತಿ ಹರಿಕಾರ ಎಂದು ಕರೆದಿದ್ದಾರೆ. ಅವರು ಶೋಷಿತ ಸಮುದಾಯದ ಏಳಿಗೆಗೆ ಶ್ರಮಿಸಿದ್ದಾರೆ ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡಾ. ಬಾಬುಜಗಜೀವನ ರಾಂ ಯುವಕರ ಕಲಾ ಸಂಘದ ಅಧ್ಯಕ್ಷ ಡ್ಯಾನ್ಸ್ ಬಸವರಾಜು, ಕರ್ನಾಟಕ ಸೇನಾಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಸವನಪುರ ರಾಜಶೇಖರ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಎಂ.ಶಿವಮೂರ್ತಿ, ಗಡಿನಾಡು ಕರವೇ ಅಧ್ಯಕ್ಷ ಚಾ.ರಾ.ಕುಮಾರ್, ಮರಪ್ಪ, ರಾಚಯ್ಯ, ಆರ್.ಕೆ.ಶಿವಕುಮಾರ್, ಚಾ.ಸಿ. ಸಿದ್ದರಾಜು ಇತರರು ಹಾಜರಿದ್ದರು.



ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮದ ಶ್ರೀ ಮಂಟೇಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಶುಕ್ರವಾರ ಶ್ರೀ ಮಂಟೇಸ್ವಾಮಿ ಕೊಂಡೋತ್ಸವ ನೆರವೇರಿತು.

ಒಂದನೇ ಪುಟದಿಂದ

ಶುರುವಾಯ್ತಾ 'ಮೈತ್ರಿ' ಮಾತುಕತೆ!?

ಜವಾಬ್ದಾರಿ ನೀಡಿದ ನಂತರ ಸ್ಥಳೀಯ ಮುಖಂಡರ ಸಹಕಾರದಿಂದ ಬಿಜೆಪಿಯನ್ನು ಕಟ್ಟಿಹಾಕಲು ಯಶಸ್ವಿಯಾಗಿದ್ದೇವೆ. ಅಷ್ಟೇ ಅಲ್ಲದೆ, ಸರ್ಕಾರದ ಭ್ರಷ್ಟಾಚಾರದ ವ್ಯವಸ್ಥೆಯನ್ನು ಎಳೆ ಎಳೆಯಾಗಿ ಜನರ ಮುಂದಿಟ್ಟಿದ್ದೇವೆ. ಚುನಾವಣೆಯಲ್ಲಿ ನಿಮ್ಮ ಪಕ್ಷಕ್ಕೆ ಎಲ್ಲಿ ಲಾಭವಿದೆ. ಮತ್ತಷ್ಟು ಲಾಭ ಪಡೆದುಕೊಳ್ಳಬಹುದು ಎಂಬ ಬಗ್ಗೆ ಟಿಪ್ಸ್ ನೀಡಿದ್ದಾರೆನ್ನಲಾಗಿದೆ. ಪಕ್ಷ ಎರಡು ಮತ್ತು ಮೂರನೇ ಬಾರಿ ಅಭ್ಯರ್ಥಿಗಳ ಆಯ್ಕೆಯ ಸಂದರ್ಭದಲ್ಲಿ ಕೆಲವೆಡೆ ನಿಮಗೆ ಲಾಭವಾಗುವ ರೀತಿಯಲ್ಲಿ ಅಭ್ಯರ್ಥಿಗಳ ಆಯ್ಕೆ ಆಗಲಿದೆ. ಬಿಜೆಪಿಯ ಸಂಖ್ಯೆಯನ್ನು ಕುಗ್ಗಿಸುವ ಉದ್ದೇಶದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಅವರು, ಚಾಣಾಕ್ಷತನದಿಂದ ಅಭ್ಯರ್ಥಿಗಳ ಆಯ್ಕೆ ಮಾಡುತ್ತಿದ್ದಾರೆ. ನೀವು ಮುಂದಿನ ದಿನಗಳಲ್ಲಿ ಕಾಣುತ್ತೀರಿ ಎಂಬೆಲ್ಲ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಕುನ್ನೋಳ್ ಕುಮಾರಸ್ವಾಮಿ ಮುಂದೆ ತೆರೆದಿಟ್ಟಿದ್ದಾರೆನ್ನಲಾಗಿದೆ. ಈ ಬೆಳವಣಿಗೆ ನಂತರವೇ ಕುಮಾರಸ್ವಾಮಿ, ಅಭ್ಯರ್ಥಿಗಳ ಎರಡನೆಯ ಪಟ್ಟಿ ಬಿಡುಗಡೆಗೆ ವಿಳಂಬ ಮಾಡುತ್ತಿದ್ದಾರೆ ಎನ್ನಲಾಗಿದೆ.

ಹಾಲಿ ಶಾಸಕರಿಗೆ ಟಿಕೆಟ್ ಕೈತಪ್ಪುವ ಸಾಧ್ಯತೆ

ಸಭೆ ಜರುಗಲಿದೆ. ಸಂಸದೀಯ ಮಂಡಳಿಯ ಸಭೆಗೂ ಮುನ್ನ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರ ದೆಹಲಿ ನಿವಾಸದಲ್ಲಿಂದು ಇಡೀ ದಿನ ಅಭ್ಯರ್ಥಿಗಳ ಆಯ್ಕೆ ಕಸರತ್ತು ನಡೆಯಿತು. ಈ ಸಭೆಯಲ್ಲೇ ಆರೋಗ್ಯ ಮತ್ತು ವಯೋ ಕಾರಣಗಳು, ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳದಿರುವುದು, ಕ್ಷೇತ್ರದಲ್ಲಿ ಜನತೆಯನ್ನು ವಿರೋಧ ಮಾಡಿಕೊಂಡಿರುವವರಿಗೆ ಟಿಕೆಟ್ ನೀಡದಿರಲು ತೀರ್ಮಾನಿಸಿದೆ.

ಇದರಲ್ಲಿ ಕೆಲವು ಪ್ರಭಾವಿಗಳಿಗೂ ಟಿಕೆಟ್ ನೀಡದಿರಲು ಸಭೆ ನಿರ್ಧರಿಸಿದೆ. ಚುನಾವಣಾ ಪೂರ್ವ ಸಮೀಕ್ಷೆ ಸಂಘ ಪರಿವಾರ ಹಾಗೂ ಗೃಹ ಸಚಿವ ಅಮಿತ್ ಷಾ ಸಂಗ್ರಹಿಸಿರುವ ವರದಿ ಆಧರಿಸಿ, ಪಕ್ಷ ಈ ತೀರ್ಮಾನಕ್ಕೆ ಬರುತ್ತಿದೆ. ಅಷ್ಟೇ ಅಲ್ಲ, ಕೆಲವು ಹೊಸ ಮುಖಗಳಿಗೆ ಈ ಬಾರಿ ಶೇಕಡ 40 ರಷ್ಟು ಪಕ್ಷ ಅವಕಾಶ ಕಲ್ಪಿಸುತ್ತಿದೆ. ನಡ್ಡಾ ಅವರ ಅಧ್ಯಕ್ಷತೆಯಲ್ಲಿ ಬಹುತೇಕ ಅಭ್ಯರ್ಥಿಗಳ ಅಂತಿಮ ಆಯ್ಕೆಯಾಗಿದ್ದು, ನಾಳೆ ಸಂಜೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಸಮ್ಮುಖದಲ್ಲಿ ನಡೆಯಲಿರುವ ಸಂಸದೀಯ ಮಂಡಳಿ ಸಭೆಯಲ್ಲಿ ಪಟ್ಟಿಗೆ ಅನುಮೋದನೆ ಸಿಗಲಿದೆ. ಇಂದಿನ ಸಭೆಯಲ್ಲಿ ನಡ್ಡಾ ಅಲ್ಲದೆ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ರಾಜ್ಯ ಚುನಾವಣಾ ಉಸ್ತುವಾರಿ ವಹಿಸಿರುವ ಧರ್ಮೇಂದ್ರ ಪ್ರಧಾನ್, ಸಹ ಉಸ್ತುವಾರಿಯಾದ ಅಣ್ಣಾಮಲೈ, ಮನ್ಸೂಕ್ ಮಾಂಡವೀಯ, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಅರುಣ್‌ಸಿಂಗ್ ಭಾಗವಹಿಸಿದ್ದರು.

ಮೈಸೂರಲ್ಲಿ ಪ್ರಧಾನಿ ನರೇಂದ್ರ ಮೋದಿ

ಮೈಸೂರಿನ ಓವೆಲ್ ಮೈದಾನದ ಹೆಲಿಪ್ಯಾಡ್‌ಗೆ ಆಗಮಿಸುವ ಅವರು, ರಸ್ತೆ ಮೂಲಕ ಕಾರಿನಲ್ಲಿ ಕೆಎಸ್‌ಓಯು ಅತಿಥಿ ಗೃಹಕ್ಕೆ ತೆರಳಿ 20 ನಿಮಿಷಗಳ ಕಾಲ ವಿಶ್ರಾಂತಿ ಪಡೆದು ಬೆಳಗ್ಗೆ 11 ಗಂಟೆಗೆ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಆಯೋಜಿಸಿರುವ ಹುಲಿ ಯೋಜನೆ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ವಿಶೇಷ ಹುಲಿ ಯೋಜನಾ ವರದಿ ಬಿಡುಗಡೆ ಮಾಡುವರು.

ನಂತರ ಕಾರಿನಲ್ಲಿ ಮಧ್ಯಾಹ್ನ 12.20 ಗಂಟೆಗೆ ಓವೆಲ್ ಮೈದಾನಕ್ಕೆ ಹಿಂದಿರುಗುವ ಪ್ರಧಾನಿಗಳು, ಹೆಲಿಕಾಪ್ಟರ್‌ನಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ತೆರಳಿ ಅಲ್ಲಿಂದ ಮಧ್ಯಾಹ್ನ 12.35 ಗಂಟೆಗೆ ವಿಶೇಷ ವಿಮಾನದಲ್ಲಿ ನವದೆಹಲಿಗೆ ಪ್ರಯಾಣ ಬೆಳೆಸುವರು. ನರೇಂದ್ರ ಮೋದಿ ಅವರು ಸಾಗುವ ಮಾರ್ಗಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಿ, ಭಾರೀ ಭದ್ರತೆ ಮಾಡಲಾಗಿದೆ. ಎಡಿಜಿಪಿ ಅಲೋಕ್‌ಕುಮಾರ್, ದಕ್ಷಿಣ ವಲಯ ಐಜಿಪಿ ಮಧುಕರ್ ಪವಾರ್, ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಎಸ್ಪಿ ಸೀಮಾ ಲಾಟ್ಕರ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ವ್ಯಾಪಕ ಬಿಗಿ ಬಂದೋಬಸ್ತ್ ಮಾಡಲಾಗಿದ್ದು, ಭಾರೀ ಕಟ್ಟೆಚ್ಚರ ವಹಿಸಲಾಗಿದೆ.

ಪ್ರಧಾನಿ ಮೋದಿ ಸಫಾರಿ

ನಂತರ ವಿವಿಧ 12 ಹುಲಿ ಸಂರಕ್ಷಿತ ಪ್ರದೇಶಗಳ ನಿರ್ದೇಶಕರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಬಳಿಕ 9.45ಕ್ಕೆ ತೆಪ್ಪಕಾಡು ಆನೆ ಶಿಬಿರದ ಬಳಿ ನಿರ್ಮಿಸಿರುವ ಹೆಲಿಪ್ಯಾಡ್ ಮೂಲಕ ಮೈಸೂರಿಗೆ ಮರಳಲಿದ್ದಾರೆ. ಅಲ್ಲಿ ನಡೆಯಲಿರುವ ಹುಲಿ ಯೋಜನೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. 2022ರ ಹುಲಿ ಗಣತಿ ವರದಿಯನ್ನು ಅವರು ಸಮಾರಂಭದಲ್ಲಿ ಪ್ರಕಟಿಸಲಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬಂಡೀಪುರದಲ್ಲಿ ಸಫಾರಿ ಹೊರತು ಬೇರೆ ಯಾವುದೇ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

22 ಕಿ.ಮೀ. ಸಫಾರಿ: ಬೆಳಗ್ಗೆ 7.15ಕ್ಕೆ ಬಂಡೀಪುರ ತಲುಪಲಿರುವ ಪ್ರಧಾನಿಯವರು ಎರಡು ಗಂಟೆಗಳ ಕಾಲ ಅರಣ್ಯದಲ್ಲಿ 22 ಕಿಮೀ ಸಫಾರಿ ತೆರಳಲಿದ್ದಾರೆ. ಸಫಾರಿ ದಾರಿ ಮಧ್ಯೆ ಸಿಗುವ ಬೋಳು ಗುಡ್ಡಕ್ಕೂ ಭೇಟಿ ನೀಡಿ, ಸುತ್ತಲಿನ ಕಾಡಿನ ಸೌಂದರ್ಯವನ್ನು ವೀಕ್ಷಿಸಲಿದ್ದಾರೆ. ನಂತರ ಅರಣ್ಯದ ಕಚ್ಚಾ ರಸ್ತೆಯಲ್ಲೇ ಸಾಗಿ ಕೆಕ್ಕನಹಳ್ಳ ಚೆಕ್‌ಪೋಸ್ಟ್ ಬಳಿ ತಮ್ಮ ವಾಹನವನ್ನು ಏರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಗಿ ಬಂದೋಬಸ್ತ್: ಮೋದಿ ಅವರ ಭೇಟಿ ಹಿನ್ನೆಲೆಯಲ್ಲಿ ಅಧಿಕಾರಿಗಳು ಸಕಲ ಸಿದ್ಧತೆ ಮಾಡಿದ್ದಾರೆ. ಪ್ರಧಾನಿಯವರ ವಿಶೇಷ ಭದ್ರತಾ ಪಡೆಯ (ಎಸ್‌ಪಿಜಿ) ಸೂಚನೆಯಂತೆ ಎಲ್ಲ ವ್ಯವಸ್ಥೆಗಳನ್ನೂ ಜಿಲ್ಲಾಡಳಿತ ಮಾಡಿದೆ. ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ. ದಕ್ಷಿಣ ವಲಯ ಐಜಿಪಿ ಮಧುಕರ ಪವಾರ್ ಅವರ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ. ಸುಮಾರು 2 ಸಾವಿರ ಪೊಲೀಸರನ್ನು ನಿಯೋಜಿಸಲಾಗಿದೆ. ನರೇಂದ್ರ ಮೋದಿ ಅವರ ಸಮೀಪ ಭದ್ರತೆ ಕೈಗೊಳ್ಳುವ ಮತ್ತು ಅವರ ಸಮೀಪ ತೆರಳುವ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಕೋವಿಡ್ ಟೆಸ್ಟ್ ಮಾಡುವ ಮೂಲಕ ಮುಂಜಾಗ್ರತಾ ಕ್ರಮಕೈಗೊಳ್ಳಲಾಗಿದೆ. ಮೋದಿ ಮೇಲುಕಾಮನಹಳ್ಳಿಯಿಂದ ಕಾರಿನಲ್ಲಿ ಬಂಡೀಪುರಕ್ಕೆ ತೆರಳುವಾಗ ಯಾವುದೇ ಭದ್ರತಾ ಲೋಪ ಆಗಬಾರದೆಂದು ಎರಡು ಹಂತದಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ.

ಬದಲಿ ಮಾರ್ಗದ ವ್ಯವಸ್ಥೆ

ಬಂಡಿಪುರಕ್ಕೆ ಪ್ರಧಾನಿ ಭೇಟಿ ಹಿನ್ನೆಲೆ ಭದ್ರತಾ ದೃಷ್ಟಿಯಿಂದ ಶನಿವಾರ ಸಂಜೆ 4 ರಿಂದ ಭಾನುವಾರ ಮಧ್ಯಾಹ್ನ 12ರವರೆಗೆ ಹೆದ್ದಾರಿ ಸಂಚಾರ ಬಂದ್ ಮಾಡಲಾಗಿದೆ. ತಮಿಳುನಾಡಿನ ಊಟಿ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 181 ಬಂದ್ ಆಗಿದ್ದು, ಗುಂಡ್ಲುಪೇಟೆ ಮಾರ್ಗವಾಗಿ ತಮಿಳುನಾಡು, ಊಟಿ ಕಡೆಗೆ ಹೋಗುವವರು, ಮೂಲೆಹೊಳೆ ಚೆಕ್ ಪೋಸ್ಟ್ ಮೂಲಕ ಸುಲ್ತಾನ್ ಬತ್ತೇರಿಗೆ ತೆರಳಿ ಅಲ್ಲಿಂದ ಹೋಗಬಹುದು ಅಥವಾ ಚಾಮರಾಜನಗರದ ಮೂಲಕ ಸತ್ಯಮಂಗಲಕ್ಕೆ ತೆರಳಿ ಹೋಗಬಹುದು. ಸದ್ಯ ಗುಂಡ್ಲುಪೇಟೆಯಲ್ಲಿ ರಸ್ತೆಗೆ ಬ್ಯಾರಿಕೇಡ್ ಹಾಕಿ ರಸ್ತೆ ಬಂದ್ ಮಾಡಿದ ಪೊಲೀಸರು, ಸ್ಥಳೀಯ ಹಳ್ಳಿಗಳಿಗೆ ಹೋಗುವವರಿಗೆ ಮಾತ್ರ ಅವಕಾಶ ಮಾಡಿಕೊಡುತ್ತಿದ್ದಾರೆ.

ಸಂಚಾರಕ್ಕೆ ನಿರ್ಬಂಧ; ಬದಲಿ ಮಾರ್ಗ

ತಿ.ನರಸೀಪುರದಿಂದ ಬರುವ ವಾಹನಗಳು ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಬಲಕ್ಕೆ ತಿರುಗಿ ವಾಯುವಿಹಾರ ಮಾರ್ಗದಲ್ಲಿ ಮುಂದೆ ನಜರ್‌ಬಾದ್ ಕಡೆಗೆ ಚಲಿಸಬೇಕು ಎಂದು ಆಯುಕ್ತರು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ. ಏಪ್ರಿಲ್ 9ರಂದು ಭಾನುವಾರ ಬೆಳಗ್ಗೆ 6ರಿಂದ ಮಧ್ಯಾಹ್ನ 1 ಗಂಟೆವರೆಗೆ ಹುಣಸೂರು ರಸ್ತೆಯ ಹಿನಕಲ್ ಬಳಿ ಅಟಲ್ ಬಿಹಾರಿ ವಾಜಪೇಯಿ ಸರ್ಕಲ್‌ನಿಂದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದವರೆಗೆ, ಅಲ್ಲಿಂದ ಜೆಎಲ್‌ಬಿ ರಸ್ತೆಯ ರಾಮಸ್ವಾಮಿ ಸರ್ಕಲ್‌ವರೆಗೆ, ಹುಣಸೂರು ರಸ್ತೆಯ ಡಿಸಿ ಆಫೀಸ್ ಕಮಾನು ಗೇಟ್‌ನಿಂದ ಏಕಲವ್ಯ ವೃತ್ತದವರೆಗೆ, ಕೌಟಿಲ್ಯ ವೃತ್ತದಿಂದ ಮುಡಾ ಜಂಕ್ಷನ್‌ವರೆಗೆ ಹಾಗೂ ಹುಣಸೂರು ರಸ್ತೆಯ ಕೆಎಸ್‌ಓಯು ಘಟಿಕೋತ್ಸವ ಭವನದ ಮುಖ್ಯ ದ್ವಾರದಿಂದ ವೆಂಕಟರಮಣಯ್ಯ ಸರ್ಕಲ್‌ವರೆಗೆ ಭದ್ರತಾ ದೃಷ್ಟಿಯಿಂದ ಎಲ್ಲಾ ಮಾದರಿಯ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಹುಣಸೂರು ಕಡೆಯಿಂದ ಬರುವ ವಾಹನಗಳು ಹಿನಕಲ್ ಜಂಕ್ಷನ್ ಬಳಿ ಎಡ ಮತ್ತು ಬಲಕ್ಕೆ ತಿರುಗಿ ರಿಂಗ್ ರಸ್ತೆಯಲ್ಲಿ ಮುಂದೆ ಸಾಗಬೇಕು, ಕೆಆರ್‌ಎಸ್ ರಸ್ತೆಯಿಂದ ಬರುವ ವಾಹನಗಳು ದಾಸಪ್ಪ ಸರ್ಕಲ್ ಬಳಿ ಎಡಕ್ಕೆ ತಿರುಗಿ ರೈಲು ನಿಲ್ದಾಣ, ಇರ್ವಿನ್ ರಸ್ತೆಯಲ್ಲಿ ಮುಂದೆ ಸಾಗಬೇಕು. ಬೋಗಾದಿಯಿಂದ ಬರುವ ವಾಹನಗಳು ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ರಿಂಗ್ ರಸ್ತೆಯಲ್ಲಿ ಸಾಗಿ ಕಾಂತರಾಜ ಅರಸು ರಸ್ತೆಯಲ್ಲಿ ಮುಂದೆ ಹೋಗಬೇಕು. ಏಪ್ರಿಲ್ 9ರಂದು ಮುಂಜಾನೆ 3ರಿಂದ ಬೆಳಗ್ಗೆ 7 ಗಂಟೆವರೆಗೆ ನಂಜನಗೂಡಿನಿಂದ ಮೈಸೂರಿಗೆ ಬರುವ ಕೆಎಸ್‌ಆರ್‌ಟಿಸಿ ಬಸ್ಸುಗಳು ಕಡಕೊಳ, ಬ್ಯಾತಹಳ್ಳಿ, ದಡದಹಳ್ಳಿ, ರಮಾಬಾಯಿನಗರ ಜಂಕ್ಷನ್, ರಿಂಗ್ ರಸ್ತೆ, ಶ್ರೀರಾಂಪುರ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ಮಾನಂದವಾಡಿ ರಸ್ತೆಯಲ್ಲಿ ಸಾಗಿ ಶ್ರೀನಿವಾಸ ವೃತ್ತದಲ್ಲಿ ಎಡಕ್ಕೆ ತಿರುಗಿ ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಬಸವೇಶ್ವರ ವೃತ್ತ, ಗನ್‌ಹೌಸ್ ಜಂಕ್ಷನ್, ಹಾರ್ಡಿಂಜ್ ಸರ್ಕಲ್, ಬಿಎನ್ ರಸ್ತೆ ಮೂಲಕ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ತಲುಪುವುದು. ಗ್ರಾಮಾಂತರ ಬಸ್ ನಿಲ್ದಾಣದಿಂದ ನಂಜನಗೂಡು ಕಡೆಗೆ ಹೋಗುವ ಬಸ್ಸುಗಳು ಅದೇ ಮಾರ್ಗ ಸಂಚರಿಸಬೇಕೆಂದು ಆಯುಕ್ತರು ತಿಳಿಸಿದ್ದಾರೆ. ಅಂದು ಬೆಳಗ್ಗೆ 6ರಿಂದ ಮಧ್ಯಾಹ್ನ 1 ಗಂಟೆವರೆಗೆ ಮಡಿಕೇರಿ, ಹಾಸನ ಕಡೆಯಿಂದ ಮೈಸೂರಿಗೆ ಬರುವ ಸಾರಿಗೆ ಬಸ್ಸುಗಳು, ಹಿನಕಲ್ ಬಳಿ ಎಡಕ್ಕೆ ತಿರುಗಿ ರಿಂಗ್ ರಸ್ತೆ, ರಾಯಲ್ ಇನ್ ಜಂಕ್ಷನ್, ಮಣಿಪಾಲ್ ಆಸ್ಪತ್ರೆ ಬಳಿ ಬಲಕ್ಕೆ ತಿರುಗಿ ಟಿಪ್ಪು ಸರ್ಕಲ್, ಫೌಂಟೇನ್ ಸರ್ಕಲ್‌ನಿಂದ ಮುಂದೆ ಸಾಗುವುದು. ಗ್ರಾಮಾಂತರ ಬಸ್ ನಿಲ್ದಾಣದಿಂದ ಮಡಿಕೇರಿ, ಹಾಸನ ಕಡೆಗೆ ಹೋಗುವ ಬಸ್ಸುಗಳು ಇರ್ವಿನ್ ರಸ್ತೆ ಆಯುರ್ವೇದ ಕಾಲೇಜು ಸರ್ಕಲ್, ಜೆಕೆ ಗ್ರೌಂಡ್, ರೈಲು ನಿಲ್ದಾಣ ಜಂಕ್ಷನ್, ದಾಸಪ್ಪ ಸರ್ಕಲ್‌ನಲ್ಲಿ ಬಲಕ್ಕೆ ತಿರುಗಿ ಕೆಆರ್‌ಎಸ್ ರಸ್ತೆ, ರಾಯಲ್ ಇನ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ರಿಂಗ್ ರಸ್ತೆಯಲ್ಲಿ ಸಾಗಿ ಹಿನಕಲ್ ಬಳಿ ಬಲಕ್ಕೆ ತಿರುಗಿ ಹುಣಸೂರು ರಸ್ತೆಯಲ್ಲಿ ಮುಂದೆ ಸಾಗುವಂತೆ ಸೂಚಿಸಲಾಗಿದೆ.

ಸಿಪಿಕೆ 85ನೇ ಹುಟ್ಟುಹಬ್ಬದ ಸಂತಸ: ಶ್ರೀಯುತರು ಸಾಹಿತ್ಯ ಕ್ಷೇತ್ರದ ದೊಡ್ಡ ಆನೆ

● ಹಿರಿಯ ಸಾಹಿತಿ ಪ್ರೊ॥ ಅರವಿಂದ ಮಾಲಗತ್ತಿ ಬಣ್ಣನೆ ● ಕರ್ನಾಟಕ ಚುಟುಕು ರತ್ನ ಸಿಪಿಕೆ



> ಸಿಪಿಕೆ ಕರ್ನಾಟಕ ಚುಟುಕು ರತ್ನ. ಅವರದ್ದು ಘನಗಾಂಭೀರ್ಯ ವ್ಯಕ್ತಿತ್ವ ಜತೆಗೆ, ಲಘು ಹಾಸ್ಯಮಯಿಯೂ ಆಗಿದ್ದಾರೆ. ಸಾಮಾನ್ಯವಾಗಿ ಗಾಂಭೀರ್ಯ ಮತ್ತು ಹಾಸ್ಯ ಇವೆರಡೂ ಪರಸ್ಪರ ವಿರುದ್ಧ ದಿಕ್ಕಿನವಾಗಿವೆ. ಆದರೂ ಈ ಎರಡು ಗುಣ ಸಿಪಿಕೆ ಅವರ ವ್ಯಕ್ತಿತ್ವದಲ್ಲಿದ್ದು, ತಮ್ಮನ್ನು ತಾವೇ ಲೇವಡಿ, ಟೀಕೆ ಮಾಡಿಕೊಳ್ಳುವ ಅವರು ವಿಭಿನ್ನ ಹಾಸ್ಯ ಪ್ರಜ್ಞೆ ಮೈಗೂಡಿಸಿಕೊಂಡಿದ್ದಾರೆ.
>
> -ಪ್ರೊ.ಅರವಿಂದ ಮಾಲಗತ್ತಿ, ಸಾಹಿತಿ

ಮೈಸೂರು,ಏ.8(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರು ಕೇವಲ ದಸರಾ ಮಹೋತ್ಸವ ಗಜಪಡೆಗೆ ಮಾತ್ರವಲ್ಲದೆ, ಸಾಹಿತಿ ಸಿಪಿಕೆಯಂತಹ ಸಾಹಿತ್ಯ ಕ್ಷೇತ್ರದ ದೊಡ್ಡ ಆನೆಗಳಿಂದಲೂ ಖ್ಯಾತಿ ಹೊಂದಿದೆ ಎಂದು ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಬಣ್ಣಿಸಿದ್ದಾರೆ.

ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ಶನಿವಾರ ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ ವತಿಯಿಂದ ಆಯೋಜಿಸಿದ್ದ ಡಾ.ಸಿ.ಪಿ.ಕೃಷ್ಣ ಕುಮಾರ್(ಸಿಪಿಕೆ) ಅವರ 85ನೇ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ ಡಾ.ಸಿಪಿಕೆ ಮೇರು ವ್ಯಕ್ತಿತ್ವವುಳ್ಳವರಾಗಿದ್ದಾರೆ. ಅವರು ಸಾಹಿತ್ಯ ಕ್ಷೇತ್ರದ ಒಂದು ದೊಡ್ಡ ಆನೆಯಂತಿದ್ದಾರೆ ಎಂದರು.

ಸಿಪಿಕೆ ಕರ್ನಾಟಕ ಚುಟುಕು ರತ್ನ. ಅವರದ್ದು ಘನಗಾಂಭೀರ್ಯ ವ್ಯಕ್ತಿತ್ವ ಜತೆಗೆ, ಲಘು ಹಾಸ್ಯಮಯಿಯೂ ಆಗಿದ್ದಾರೆ. ಸಾಮಾನ್ಯವಾಗಿ ಗಾಂಭೀರ್ಯ ಮತ್ತು ಹಾಸ್ಯ ಇವೆರಡೂ ಪರಸ್ಪರ ವಿರುದ್ಧ ದಿಕ್ಕಿನವಾಗಿವೆ. ಆದರೂ ಈ ಎರಡು ಗುಣ ಸಿಪಿಕೆ ಅವರ ವ್ಯಕ್ತಿತ್ವದಲ್ಲಿದ್ದು, ತಮ್ಮನ್ನು ತಾವೇ ಲೇವಡಿ, ಟೀಕೆ ಮಾಡಿಕೊಳ್ಳುವ ಅವರು ವಿಭಿನ್ನ ಹಾಸ್ಯ ಪ್ರಜ್ಞೆ ಮೈಗೂಡಿಸಿಕೊಂಡಿದ್ದಾರೆ ಎಂದು ಅವರು ನುಡಿದರು.

ಜೀವನದಲ್ಲಿ ಹೊಗಳಿಕೆ–ತೆಗಳಿಕೆ ಇವೆರಡೂ ಇರಬೇಕು. ಕೇವಲ ಹೊಗಳಿಕೆಯಷ್ಟೇ ಇದ್ದರೆ ಅದು ನಿಷ್ಕ್ರೀಯತೆಯ ಸಂಕೇತ ಎನಿಸುತ್ತದೆ. ಅದರಲ್ಲೂ ತೆಗಳಿಕೆಯಷ್ಟೇ ಇದ್ದಾಗ ನಿಷ್ಕ್ರೀಯತೆ ದ್ಯೋತಕವಾಗಲಿದೆ. ಧನಾತ್ಮಕ ಹಾಗೂ ಋಣಾತ್ಮಕ ಸನ್ನಿವೇಶಗಳನ್ನು ಸಮಾನವಾಗಿ ಸ್ವೀಕರಿಸುವ ವ್ಯಕ್ತಿತ್ವ ಅಪರೂಪ. ಅವುಗಳನ್ನು ನಿಭಾಯಿಸುವ ಚಾಕಚಕ್ಯತೆ ಇರಬೇಕು. ಕಾರಣ ಹೇಳಿದ ಬಳಿಕ ಟೀಕಿಸುವವರನ್ನು ನಿಜವಾದ ಗುರು ಎಂದು ಕಾಣಬೇಕು. ಟೀಕಿಸುವವರಿದ್ದಾಗಲೇ ಸರಿದಾರಿಯಲ್ಲಿ ಸಾಗಲು ಪ್ರೇರಣೆಯಾಗುತ್ತದೆ. ಇಂತಹ ಅಪರೂಪದ ಸಾಲಿಗೆ ಸಿಪಿಕೆ ಸಹ ಸೇರುತ್ತಾರೆ. ಸಮನ್ವಯ ವಿಮರ್ಶೆ ಇದ್ದರೆ ಮಾತ್ರ ಓದುಗರಲ್ಲಿ, ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಚುಟುಕು ಎಂದರೆ ಕ್ಷುಲ್ಲಕ ಕಥೆ. ಅದನ್ನು ಸುಮ್ಮನೆ, ಲೇವಡಿ, ಚುಚ್ಚುಮಾತಿಗೆ ಬರೆಯುತ್ತಾರೆ ಎನ್ನುತ್ತಿದ್ದರು. ಹೀಗಾಗಿ, ಚುಟುಕು ಸಾಹಿತ್ಯವನ್ನು ಗಂಭೀರವಾಗಿ ಪರಿಗಣನೆ ಮಾಡದ ಕಾಲಘಟ್ಟದಲ್ಲೇ ಸಿಪಿಕೆ ಅವರು ಪಿಎಚ್‌ಡಿ ಮಾಡಿದವರು. ಚುಟುಕು ಎಂದರೆ, ಸಮುದ್ರದ ಸತ್ವವನ್ನು ಒಂದು ಗಿಂಡಿಯಲ್ಲಿ ಹಿಡಿದಂತೆ. ಅಂತಹ ಶಕ್ತಿ ಇದಕ್ಕೆ ಇದೆ. ಸಿಪಿಕೆ, ಅದನ್ನು ಸಮರ್ಥವಾಗಿ ಬಳಸಿಕೊಂಡರು. ಹೀಗಾಗಿಯೇ ಅವರು ಚುಟುಕು ಕವಿಯಾದರು. ಸಿಪಿಕೆ 300 ಪುಸ್ತಕಗಳ ಸರದಾರರು. ಈ ಕೃತಿಗಳ ಮೂಲಕ ಸಿಪಿಕೆ ಅವರ ತುಲಭಾರ ಮಾಡಿದರೆ, ಪುಸ್ತಕದ ಭಾರವೇ ಅಧಿಕವಾಗಲಿದೆ. ಅವರದ್ದು ಮನಃಪೂರ್ವಕ ಬರವಣಿಗೆ. ಗಾತ್ರಕ್ಕಿಂತ ಮೌಲ್ಯವೇ ಹಿರಿದಾಗಿದೆ. ಅವುಗಳೆಲ್ಲ ಮೌಲ್ಯಿಕ ಕೃತಿಗಳಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಯೋಜನಾ ನಿರ್ದೇಶಕ ಡಾ.ನೀಲಗಿರಿ ತಳವಾರ, ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಡಾ.ಎಂ.ಜಿ.ಆರ್. ಅರಸ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕೋದ್ಯಮಗಳ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಅರಸು ಮಂಡಳಿಯ ಅಧ್ಯಕ್ಷ ಹೆಚ್‌ಎಂಟಿ ಲಿಂಗರಾಜೇ ಅರಸ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ ಅಧ್ಯಕ್ಷೆ ಮಮತಾ ಶ್ರೀಧರ್, ಪ್ರಧಾನ ಕಾರ್ಯದರ್ಶಿ ಎಸ್.ವಿ. ಪವಿತ್ರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಏ.18ರಂದು ಪಿ.ಆರ್.ತಿಪ್ಪೇಸ್ವಾಮಿ ಕಲಾಸಂಭ್ರಮ

ಚಿತ್ರಕಲಾವಿದ ಅಶೋಕ್ ವಿ.ಬಂಡಾರೆ, ಜಾನಪದ ಕಲಾವಿದೆ ರಾಧಾಬಾಯಿ ಮಾರುತಿ ಮಾದರರಿಗೆ ಪಿಆರ್‌ಟಿ ಕಲಾಪ್ರಶಸ್ತಿ ಪ್ರದಾನ





ಅಶೋಕ್ ವಿ.ಬಂಡಾರೆ



ರಾಧಾಬಾಯಿ ಮಾರುತಿ ಮಾದರ

ಮೈಸೂರು,ಏ.8(ಪಿಎಂ)– ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಏ.18ರಂದು ಪಿ.ಆರ್.ತಿಪ್ಪೇಸ್ವಾಮಿ ಕಲಾ ಸಂಭ್ರಮ–2023 ಮತ್ತು ಪಿಆರ್‌ಟಿ ಕಲಾಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ ಕದಂಬ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾ ವಿದ್ಯಾಲಯ ಆವರಣದಲ್ಲಿ ಸಮಾರಂಭ ನಡೆಯಲಿದೆ. ಚಿತ್ರಕಲಾ ಪ್ರದರ್ಶನ, ಸ್ಪರ್ಧೆ, ವಿಚಾರ ಸಂಕಿರಣ, ಪ್ರಾತ್ಯಕ್ಷಿಕೆಯನ್ನೂ ಆಯೋಜಿಸಲಾಗಿದೆ 2014ರಿಂದ ನಾಡಿನ ವಿವಿಧ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಈ ಬಾರಿ ಪಿ.ಆರ್.ತಿಪ್ಪೇಸ್ವಾಮಿಯವರು ರಚಿಸಿದ 50 ಕಲಾಕೃತಿಗಳನ್ನು ಡಿಜಿಟಲೀಕರಿಸಿ ಪ್ರದರ್ಶಿಸಲಾಗುತ್ತಿದೆ ಎಂದರು.

ಪಿ.ಆರ್.ತಿಪ್ಪೇಸ್ವಾಮಿಯವರು ಚಿತ್ರಕಲೆ, ಜಾನಪದ ಕ್ಷೇತ್ರಗಳಲ್ಲಿ ಅಪ್ರತಿಮ ಸಾಧನೆ ಮಾಡಿದ್ದಾರೆ. ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನದಿಂದ ಕೊಡಮಾಡುವ ಪಿಆರ್‌ಟಿ ಕಲಾಪ್ರಶಸ್ತಿಗೆ ಈ ವರ್ಷ ಬೆಂಗಳೂರು ಮೂಲದ ಚಿತ್ರಕಲಾವಿದ ಅಶೋಕ್ ವಿ.ಬಂಡಾರೆ, ಬೆಳಗಾವಿ ಜಿಲ್ಲೆಯ ಅಥಣಿ ಮೂಲದ ಜಾನಪದದ ಚೌಡಿಕೆ ಹಿರಿಯ ಕಲಾವಿದೆ ರಾಧಾಬಾಯಿ ಮಾರುತಿ ಮಾದರ ಅವರು ಆಯ್ಕೆಯಾಗಿದ್ದಾರೆ. ಎಂದು ತಿಳಿಸಿದರು.

ಅಶೋಕ್ ವಿ.ಬಂಡಾರೆ ಅವರು ಪ್ರೌಢಶಾಲೆ ಹಂತದಲ್ಲೇ ಶಿಕ್ಷಣ ನಿಲ್ಲಿಸಿ ಚಿತ್ರಕಲೆಯಲ್ಲಿನ ಆಸಕ್ತಿಯಿಂದ ಸಿನಿಮಾ ಕ್ಷೇತ್ರದ ಬ್ಯಾನರ್, ಪೋಸ್ಟರ್, ಕಟೌಟ್ ಮಾಡುವಲ್ಲಿ ನೈಪುಣ್ಯ ಸಾಧಿಸಿದರು. 1972ರಿಂದ ಈವರೆಗೆ ಸಹಸ್ರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ಸೃಜನಶೀಲ ಕಲಾವಿದರೊಂದಿಗೆ ಬೆರೆತು ಸಮಕಾಲೀನ ಚಿತ್ರಕಲೆಯಲ್ಲಿ ಕ್ರಿಯಾಶೀಲರಾಗಿದ್ದಾರೆ. ವಿಧಾನಸೌಧ ಸೇರಿದಂತೆ ಹಲವು ಸರ್ಕಾರಿ ಕಚೇರಿ, ಶ್ರೀಮಂತರ ಬಂಗಲೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ ಎಂದು ಹೇಳಿದರು.

ರಾಧಾಬಾಯಿ ಮಾರುತಿ ಮಾದರ ಅವರು ಚಿಕ್ಕವಯಸ್ಸಿನಿಂದ ತಮ್ಮ ತಂದೆ–ತಾಯಿಯವರಿಂದ ಚೌಡಿಕೆ ಗಾಯನ ಕಲೆಯನ್ನು ರೂಢಿಸಿಕೊಂಡರು. ಅನಕ್ಷರಸ್ಥರಾದ ಇವರು ಜಾನಪದ ಚೌಡಿಕೆ ಕಲಾ ಪ್ರಕಾರವನ್ನು ಹೊಸ ಆಯಾಮಗಳಲ್ಲಿ ಪದಕಟ್ಟಿ ಹಾಡಿ ದೇಶ–ವಿದೇಶಗಳಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ. ಈ ಇಬ್ಬರಿಗೂ ತಲಾ 25 ಸಾವಿರ ರೂ. ನಗದು, ಪ್ರಶಸ್ತಿ ಪತ್ರ ನೀಡಿ ಗೌರವದ ಪಿಆರ್‌ಟಿ ಕಲಾಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಪಿ.ಆರ್.ತಿಪ್ಪೇಸ್ವಾಮಿ ಅವರ ಜನ್ಮಶತಮಾನೋತ್ಸವ ವರ್ಷವಾಗಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಹೆಚ್ಚು ಮಹತ್ವ ಪಡೆಯಲಿದೆ. ಅಂದು ಬೆಳಗ್ಗೆ 10.30ಕ್ಕೆ ಪಿ.ಆರ್.ತಿಪ್ಪೇಸ್ವಾಮಿ ಕಲಾಸಂಭ್ರಮ ಉದ್ಘಾಟನೆಗೊಳ್ಳಲಿದೆ. ಬಳಿಕ ಮಧ್ಯಾಹ್ನ 2ಕ್ಕೆ ಪಿಆರ್‌ಟಿ ಅವರ ಕುರಿತು ವಿಚಾರ ಸಂಕಿರಣ, ಸಂವಾದ ನಡೆಯಲಿದೆ. ಸಂಜೆ 4.30ಕ್ಕೆ ಪಿಆರ್‌ಟಿ ಕಲಾಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದರು. ಪ್ರತಿಷ್ಠಾನದ ಕಾರ್ಯದರ್ಶಿ ಕೆ.ಸಿ.ಮಹದೇವ ಶೆಟ್ಟಿ, ನಿರ್ದೇಶಕರಾದ ಡಾ.ಮೈಲಹಳ್ಳಿ ರೇವಣ್ಣ, ಹೆಚ್.ಆರ್.ಚಂದ್ರಶೇಖರಯ್ಯ ಗೋಷ್ಠಿಯಲ್ಲಿದ್ದರು.

ಯಶಸ್ವಿ ಕೀ ಹೋಲ್ ಸರ್ಜರಿ

ಮೈಸೂರು,ಏ.8(ಪಿಎಂ)– ಹಿಪ್ ಜಾಯಿಂಟ್ ಆರ್ಥ್ರೋಸ್ಕೋಪಿಕ್ ಸರ್ಜರಿ (ಕೀ ಹೋಲ್ ಸರ್ಜರಿ) ಯಶಸ್ವಿಯಾಗಿ ನಡೆಸಿದ ಮೈಸೂರಿನ ಪ್ರಥಮ ಆಸ್ಪತ್ರೆಯಾಗಿ ಮೈಸೂರಿನ ಕೆವಿಸಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹೊರಹೊಮ್ಮಿದೆ ಎಂದು ಆಸ್ಪತ್ರೆಯ ತಜ್ಞ ವೈದ್ಯ ಡಾ. ರಾಘವೇಂದ್ರ ಕೆಂಭಾವಿ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸ್ಪತ್ರೆಯಲ್ಲಿ ಈವರೆಗೆ ಮೂವರಿಗೆ ಈ ಸರ್ಜರಿ ಮಾಡಲಾಗಿದೆ. ಈ ಸರ್ಜರಿಯಿಂದ ರೋಗಿಗಳಿಗೆ ಹೆಚ್ಚು ಅನುಕೂಲವಾಗಿದೆ. 1 ಸೆಂ.ಮೀ.ಗಿಂತಲೂ ಸಣ್ಣ ಗಾಯ ಮಾತ್ರ ಆಗಲಿದೆ. ಶೀಘ್ರ ಗುಣಮುಖರಾಗಿ ಡಿಸ್ಚಾರ್ಜ್ ಆಗಬಹುದು ಎಂದರು. ಆಸ್ಪತ್ರೆಯ ಮುಖ್ಯ ವ್ಯವಸ್ಥಾಪಕ ಸುಹಾಸ್, ವೈದ್ಯಕೀಯ ನಿರ್ದೇಶಕ ಡಾ.ಟಿ.ಚಂದ್ರಕಾಂತ್, ವ್ಯವಸ್ಥಾಪಕ ನಿರ್ದೇಶಕ ಡಾ.ನಂದೀಶ್ ಗೋಷ್ಠಿಯಲ್ಲಿದ್ದರು.

ರಾಜ್ಯದ ಜನತೆಗೆ ಮಹಾರಾಷ್ಟ್ರ ಸರ್ಕಾರದ ಆರೋಗ್ಯ ವಿಮೆ ಖಂಡಿಸಿ ಪ್ರತಿಭಟನೆ



ಮೈಸೂರು,ಏ.8(ಪಿಎಂ)– ಕರ್ನಾಟಕದ ಗಡಿಯೊಳಗಿರುವ 865 ಹಳ್ಳಿಗಳಿಗೂ ಅನ್ವಯವಾಗುವಂತೆ ಜನಾರೋಗ್ಯ ವಿಮಾ ಯೋಜನೆ ಜಾರಿಗೊಳಿಸುವ ಮೂಲಕ ಮಹಾರಾಷ್ಟ್ರ ಸರ್ಕಾರವು ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರಲು ಮುಂದಾಗಿದೆ ಎಂದು ಆರೋಪಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದ ಸುಪ್ರೀಂಕೋರ್ಟ್‌ನಲ್ಲಿ ಇತ್ಯರ್ಥವಾಗದೇ ಇದ್ದರೂ ಮಹಾರಾಷ್ಟ್ರ ಸರ್ಕಾರ ರಾಜ್ಯದ ಜನತೆಗೆ ಜನಾರೋಗ್ಯ ವಿಮೆ ಜಾರಿಗೊಳಿಸಿ, ಗೊಂದಲ ಸೃಷ್ಟಿಸಲು ಹೊರಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದು ಮಹಾರಾಷ್ಟ್ರ ಸರ್ಕಾರದ ಉದ್ಧಟತನ. ಕರ್ನಾಟಕದ ವಿರುದ್ಧ ಮಹಾರಾಷ್ಟ್ರ ಸರ್ಕಾರ ಪದೇ ಪದೇ ಕ್ಯಾತೆ ತೆಗೆಯುತ್ತಿದೆ. ಆ ಮೂಲಕ ಕುತಂತ್ರ ರಾಜಕಾರಣ ಮಾಡುತ್ತಿದೆ. ರಾಜ್ಯದೊಳಗಿನವರಿಗೆ ಜನಾರೋಗ್ಯ ವಿಮೆ ಜಾರಿಗೊಳಿಸಿರುವುದು ಕರ್ನಾಟಕ ಸರ್ಕಾರದ ಅಧಿಕಾರಿಗಳ ಗಮನಕ್ಕೆ ಬರಲಿಲ್ಲವೇ? ಅಥವಾ ಬೇಕೆಂದೇ ಮೌನಕ್ಕೆ ಶರಣಾಗಿದ್ದಾರೆಯೇ ಎಂದು ಕಿಡಿಕಾರಿದರು.

ಮಹಾರಾಷ್ಟ್ರ ಸರ್ಕಾರವು ಭಾಷಾ ಸಂಘರ್ಷಕ್ಕೆ ಎಡೆ ಮಾಡುತ್ತಿದೆ. ಗಡಿಯಲ್ಲಿರುವ ಮರಾಠಿಗರ ಓಲೈಕೆ ಮಾಡುವುದನ್ನು ನಮ್ಮ ರಾಜಕಾರಣಿಗಳು ಬಿಡಬೇಕು. ಕನ್ನಡಿಗರ ಪರವಾಗಿ ಧ್ವನಿ ಎತ್ತಬೇಕು. ಕೇಂದ್ರ ಸರ್ಕಾರ ಕೂಡಲೇ ಮಧ್ಯೆ ಪ್ರವೇಶಿಸಿ ಮಹಾರಾಷ್ಟ್ರ ಸರ್ಕಾರದ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಪ್ಯಾಲೇಸ್‌ಬಾಬು, ಮದನ್, ಎಲ್‌ಐಸಿ ಸಿದ್ದಪ್ಪ, ಸ್ವಾಮಿಗೈಡ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೆಆರ್‌ವಿ ಪಕ್ಷ ಅಸ್ತಿತ್ವಕ್ಕೆ; ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಆರಂಭ



ಮೈಸೂರು,ಏ.8(ಪಿಎಂ)– ಕಾರ್ಮಿಕ ರಕ್ಷಣಾ ವೇದಿಕೆ ಪಕ್ಷ (ಕೆಆರ್‌ವಿ ಪಕ್ಷ) ಅಸ್ತಿತ್ವಕ್ಕೆ ಬಂದಿದ್ದು, ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ 244 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಉದ್ದೇಶಿಸಲಾಗಿದೆ ಎಂದು ಪಕ್ಷದ ಎಸ್‌ಸಿ–ಎಸ್‌ಟಿ ವಿಭಾಗದ ರಾಜ್ಯಾಧ್ಯಕ್ಷ ನಾಗರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಷವಷ್ಟೇ ಪಕ್ಷ ನೋಂದಣಿಯಾಗಿದ್ದು, ರಾಜ್ಯಾಧ್ಯಕ್ಷ ಹೆಚ್.ಇ.ಕೃಷ್ಣಪ್ಪ ಈಗಾಗಲೇ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಆರಂಭಿಸಿದ್ದಾರೆ. ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಮತ್ತು ಹಾಸನ ಜಿಲ್ಲೆಗಳ ಕ್ಷೇತ್ರಗಳಲ್ಲಿ ಪಕ್ಷದಿಂದ ಸ್ಪರ್ಧಿಸಲಿಚ್ಛಿಸುವವರು ಮೊ.ಸಂ. 99016 51817 ಅನ್ನು ಸಂಪರ್ಕಿಸಬಹುದು ಎಂದರು. ಪಕ್ಷದ ರಾಜ್ಯ ವಕ್ತಾರ ಮೋಹನ್‌ರಾಜ್, ಜಿಲ್ಲಾ ವಕ್ತಾರ ಪವನ್ ಗೋಷ್ಠಿಯಲ್ಲಿದ್ದರು.

ಮೈಸೂರಲ್ಲಿ ಶೀಘ್ರ ಬಿಎಸ್‌ಪಿ ಬೃಹತ್ ಸಮಾವೇಶ; ಪಕ್ಷದ ರಾಷ್ಟ್ರೀಯ ಅಧ್ಯಕ್ಷೆ ಮಾಯಾವತಿ ಭಾಗಿ

ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮಾಹಿತಿ



ಕಾಂಗ್ರೆಸ್ ಚಿತಾವಣೆ : ಕೆ.ಸಿ.ಪುಟ್ಟಸಿದ್ದಶೆಟ್ಟಿ ಆರೋಪ

ಕಾಯಕ ಸಮಾಜಗಳ ಒಕ್ಕೂಟ ಸಂಬಂಧ ಉಂಟಾಗಿರುವ ಗೊಂದಲ, ಆರೋಪಗಳ ಕುರಿತು ಮಾತನಾಡಲು ಮೊದಲು ನಿರಾಕರಿಸಿದ ಒಕ್ಕೂಟದ ಮಾಜಿ ಅಧ್ಯಕ್ಷರೂ ಆದ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಈ ಗೋಷ್ಠಿ ಬಿಎಸ್‌ಪಿ ವಿಚಾರಕ್ಕೆ ಸೀಮಿತ. ಆ ಬಗ್ಗೆ ಮತ್ತೊಮ್ಮೆ ಮಾತನಾಡುತ್ತೇನೆ ಎಂದರು. ಆದರೂ ಮಾತು ಮುಂದುವರೆಸಿ, ಒಕ್ಕೂಟ ಸಂಘಟಿಸಿದ್ದೇನೆ. ಆದರೆ ಈಗ ಕೆಲವರು ಅಧಿಕಾರಕ್ಕಾಗಿ ಹಾತೊರೆಯುತ್ತಿದ್ದಾರೆ. ಅದಕ್ಕೇನು ಬೇಡ ಎನ್ನಲ್ಲ. ಆದರಿಲ್ಲಿ ಕಾಂಗ್ರೆಸ್‌ನವರು ಎತ್ತಿ ಕಟ್ಟಿದ್ದು, ಇದು ಕಾಂಗ್ರೆಸ್‌ನವರ ಚಿತಾವಣೆ. ಈ ಸಂಘಟನೆ ಒಡೆದರೆ ಕಾಂಗ್ರೆಸ್‌ನವರಿಗೇ ಬಲ ಕಡಿಮೆ ಆಗುತ್ತದೆ ಎಂದಷ್ಟೇ ಹೇಳಿ ನಿರ್ಗಮಿಸಿದರು.

ಮೈಸೂರು,ಏ.8(ಪಿಎಂ)– ಮೈಸೂರಿನಲ್ಲಿ ಏ.25ರಿಂದ ಮೇ 3ರ ನಡುವೆ ಯಾವುದಾದರೂ ಒಂದು ದಿನ ಬಹುಜನ ಸಮಾಜ ಪಾರ್ಟಿಯ (ಬಿಎಸ್‌ಪಿ) ಬೃಹತ್ ಸಮಾವೇಶ ಆಯೋಜಿಸಲು ಉದ್ದೇಶಿಸಿದ್ದು, ಈ ಸಮಾವೇಶದಲ್ಲಿ ಬಿಎಸ್‌ಪಿ ರಾಷ್ಟ್ರೀಯ ಅಧ್ಯಕ್ಷೆ ಮಾಯಾವತಿ ಪಾಲ್ಗೊಳ್ಳಲಿದ್ದಾರೆ ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಎಲ್ಲಾ 224 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಮಾಯಾವತಿಯವರು ನಿರ್ದೇಶನ ನೀಡಿದ್ದು, ಅದರಂತೆ ಅಗತ್ಯ ಸಿದ್ಧತೆ ನಡೆಸಲಾಗುತ್ತಿದೆ. ಮೈಸೂರಿನಲ್ಲಿ ಬಿಎಸ್‌ಪಿ ಕಾರ್ಯಕರ್ತರು ಮಾತ್ರವಲ್ಲದೆ, ಪಕ್ಷದ ಅಭಿಮಾನಿಗಳನ್ನು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಸೇರಿಸಿ ಬೃಹತ್ ಸಮಾವೇಶ ನಡೆಸಲು ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಮಾಯಾವತಿಯವರು ಮೈಸೂರಿಗೆ ಬರುವ ದಿನಾಂಕ ಖಾತ್ರಿಪಡಿಸಿಕೊಂಡು ಅಂದು ಸಮಾವೇಶ ಆಯೋಜಿಸಲಾಗುವುದು. ಸಮಾವೇಶದಲ್ಲಿ ಪಕ್ಷದ ಪ್ರಣಾಳಿಕೆ ಬಗ್ಗೆ ಮಾಯಾವತಿ ವಿಸ್ತೃತವಾಗಿ ಮಾತನಾಡಲಿದ್ದಾರೆ. ಅಲ್ಲದೆ, ರಾಷ್ಟ್ರ ರಾಜಕೀಯದ ವಿದ್ಯಮಾನಗಳ ಬಗ್ಗೆಯೂ ಜನತೆಗೆ ಸಂದೇಶ ನೀಡಲಿದ್ದಾರೆ. ದೀನ ದಲಿತರು, ಅಂಬೇಡ್ಕರ್‌ವಾದಿಗಳು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಚುನಾವಣೆಯಲ್ಲಿ 100 ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗದವರಿಗೆ ಪಕ್ಷದ ಟಿಕೆಟ್ ನೀಡಲಾಗುವುದು. ಮೀಸಲು ಕ್ಷೇತ್ರಗಳೂ ಸೇರಿದಂತೆ 100 ಕ್ಷೇತ್ರಗಳಲ್ಲಿ ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳು ಹಾಗೂ ಉಳಿದ 24 ಕ್ಷೇತ್ರಗಳಲ್ಲಿ ಪಕ್ಷದ ಸಿದ್ಧಾಂತಕ್ಕೆ ಬದ್ಧವಾಗಿರುವ ಮೇಲ್ವರ್ಗದವರಿಗೆ ಟಿಕೆಟ್ ನೀಡಲು ನಿರ್ಧರಿಸಲಾಗಿದೆ. ಈಗಾಗಲೇ 90 ಅಭ್ಯರ್ಥಿಗಳ ಆಯ್ಕೆ ಆಗಿದೆ ಎಂದರು.

ಮುಸಲ್ಮಾನ ಸಮುದಾಯದ ಶೇ.4ರಷ್ಟು ಮೀಸಲಾತಿ ರದ್ದುಪಡಿಸಿರುವುದು ಖಂಡನೀಯ. ಅವರಿಗೆ ಶೇ.8ರಷ್ಟು ಮೀಸಲಾತಿ ನೀಡಬೇಕೆಂದು ಬಿಎಸ್‌ಪಿ ಸದನದ ಒಳಗೆ–ಹೊರಗೆ ಹೋರಾಟ ನಡೆಸಲಿದೆ. ಗೋ ಹತ್ಯೆ ನೆಪದಲ್ಲಿ ಹಿಂದುತ್ವವಾದಿಗಳು ಮುಸಲ್ಮಾನರ ಕಗ್ಗೊಲೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ಶಂಕರ್, ಜಿಲ್ಲಾ ಸಂಯೋಜಕ ಚಂದ್ರಶೇಖರ್, ಮುಖಂಡರಾದ ಕೆ.ಶಿವಕುಮಾರ್, ಸಿದ್ದಪ್ಪ ಗೋಷ್ಠಿಯಲ್ಲಿದ್ದರು.

ಏ.15ರಿಂದ ಬೇಸಿಗೆ ಚಿತ್ರಕಲಾ ಶಿಬಿರ

ಮೈಸೂರು, ಏ. 8 –ಮೈಸೂರಿನ ಶ್ರೀ ರವಿವರ್ಮ ಚಿತ್ರಕಲಾ ಶಾಲೆ ವತಿಯಿಂದ ಏ.15ರಿಂದ 29ರವರೆಗೆ ಬೇಸಿಗೆ ಚಿತ್ರಕಲಾ ಶಿಬಿರವನ್ನು ಆಯೋಜಿಸಲಾಗಿದೆ.

ಶಿಬಿರದಲ್ಲಿ ಚಿತ್ರಕಲೆ, ಪೇಯಿಂಟಿಂಗ್, ಸೃಜನಾತ್ಮಕ ಕಲೆ, ವಾರ್ಲಿ ಪೇಯಿಂಟಿಂಗ್, ಪಾಟ್ ಪೇಯಿಂಟಿಂಗ್, ಕ್ಲೇ ಮಾಡೆಲ್ಲಿಂಗ್, ಪೇಪರ್ ಕಟ್ಟಿಂಗ್, ಮಾಸ್ಕ್ ಮಾಡುವುದು, ಪೇಪರ್ ಕ್ರಾಫ್ಟ್ ಇನ್ನಿತರ ವಿಭಿನ್ನ ಶೈಲಿಯ ಕಲಿಕೆಯನ್ನು ಹೇಳಿಕೊಡಲಾಗುವುದು. ಅರ್ಜಿಯನ್ನು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗೆ ಮೊ. 9743441878 ಸಂಪರ್ಕಿಸುವಂತೆ ಕೋರಲಾಗಿದೆ.

ವಧು–ವರರ ಮುಖಾಮುಖಿ ಸಮಾವೇಶ

ಮೈಸೂರು,ಏ.8–ಜೆಎಸ್‌ಎಸ್ ವಿವಾಹ ವೇದಿಕೆಯ ಆಶ್ರಯದಲ್ಲಿ ಏ.16ರಂದು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದ ಸಭಾಂಗಣದಲ್ಲಿ ವಧು–ವರರ ಮುಖಾಮುಖಿ ಸಮಾವೇಶ ಏರ್ಪಡಿಸಲಾಗಿದೆ. ವೇದಿಕೆಯಲ್ಲಿ ನೋಂದಾಯಿಸಿಕೊಂಡವರಿಗೆ ಮಾತ್ರ ಪ್ರವೇಶವಿರುತ್ತದೆ. ಸಮಾವೇಶವು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ದೂ. 0821–2430322, 9611070674 ಸಂಪರ್ಕಿಸಬಹುದು.

ಮೈಸೂರು ಮಿತ್ರ





ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	3	2	1	0	4
ಲಕ್ನೋ	3	2	1	0	4
ಗುಜರಾತ್	2	2	0	0	4
ಸಿಎಸ್‌ಕೆ	3	2	1	0	4
ಪಂಜಾಬ್	2	2	0	0	4
ಕೋಲ್ಕತ್ತಾ	2	1	1	0	2
ಆರ್‌ಸಿಬಿ	2	1	1	0	2
ಮುಂಬೈ	2	0	2	0	0
ಡೆಲ್ಲಿ	3	0	3	0	0
ಎಸ್‌ಆರ್‌ಹೆಚ್	2	0	2	0	0

ಡೆಲ್ಲಿ ಕ್ಯಾಪಿಟಲ್ಸ್‌ಗೆ ಹ್ಯಾಟ್ರಿಕ್ ಸೋಲು



ಗುವಾಹಟಿ, ಏ.8– ಆರಂಭಿಕರಾದ ಜೋಸ್ ಬಟ್ಲರ್, ಯಶಸ್ವಿ ಜೈಸ್ವಾಲ್ ಅವರ ಅರ್ಧ ಶತಕ ಹಾಗೂ ಯಜುವೇಂದ್ರ ಚಹಲ್, ಟ್ರೆಂಟ್ ಬೌಲ್ಟ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ರಾಜಸ್ಥಾನ ರಾಯಲ್ಸ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 57 ರನ್‌ಗಳ ಭರ್ಜರಿ ಗೆಲುವು ದಾಖಲಿಸಿದೆ.

ಈ ಮೂಲಕ ರಾಜಸ್ಥಾನ್ ರಾಯಲ್ಸ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರೇ, ಅತ್ತ ಮೊದಲೆರಡು ಪಂದ್ಯಗಳಲ್ಲಿ ಕ್ರಮವಾಗಿ ಲಖನೌ ಹಾಗೂ ಗುಜರಾತ್ ಟೈಟಾನ್ಸ್ ವಿರುದ್ಧ ಸೋತಿದ್ದ ಡೆಲ್ಲಿ ಕ್ಯಾಪಿಟಲ್ಸ್ ರಾಜಸ್ಥಾನದ ವಿರುದ್ಧವೂ ಸೋಲುವ ಮೂಲಕ ಟೂರ್ನಿಯಲ್ಲಿ ಹ್ಯಾಟ್ರಿಕ್ ಸೋಲು ದಾಖಲಿಸಿತು.

ಇಲ್ಲಿನ ಬರ್ಸಾಪರ ಅಂತಾರಾಷ್ಟ್ರೀಯ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ರಾಯಲ್ಸ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಜೋಸ್ ಬಟ್ಲರ್ ಹಾಗೂ ಯಶಸ್ವಿ ಜೈಸ್ವಾಲ್ ಮೊದಲ ವಿಕೆಟ್‌ಗೆ 98 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಮಿಂಚಿನ ಬ್ಯಾಟಿಂಗ್ ನಡೆಸಿದ ಜೈಸ್ವಾಲ್ 31 ಎಸೆತಗಳಲ್ಲಿ 1 ಸಿಕ್ಸರ್, 11 ಬೌಂಡರಿ ಒಳಗೊಂಡ 60 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ನಾಯಕ ಸಂಜು ಸ್ಯಾಮ್ಸನ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರೇ, ರಿಯಾನ್ ಪರಾಗ್ 7 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಅಬ್ಬರಿಸಿದ ಜೋಸ್ ಬಟ್ಲರ್ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಈ ವೇಳೆ 4ನೇ ವಿಕೆಟ್‌ಗೆ ಬಟ್ಲರ್ ಜೊತೆಗೂಡಿದ ಹೆಟ್ಮೆಯರ್ 49ರನ್‌ಗಳ ಜೊತೆಯಾಟವಾಡಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಬಟ್ಲರ್ 79ರನ್ ಗಳಿಸಿ ಔಟಾದರು. ಉಳಿದಂತೆ ಹೆಟ್ಮೆಯರ್ 4 ಸಿಕ್ಸರ್, 1 ಬೌಂಡರಿ ಒಳಗೊಂಡ 39 ರನ್ ಗಳಿಸಿ ಅಜೇಯರಾಗಿ ಉಳಿದರು. ಡೆಲ್ಲಿಪರ ಮುಖೇಶ್ ಕುಮಾರ್ 2, ಕುಲದೀಪ್ ಯಾದವ್, ರೌವ್‌ಮನ್ ಪೊವೆಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

200 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 142 ರನ್ ಗಳಿಲಷ್ಟೇ ಶಕ್ತವಾಯಿತು. ಖಾತೆ ತೆರೆಯುವ ಮುನ್ನವೇ ಪೃಥ್ವಿ ಷಾ ಹಾಗೂ ಮನೀಷ್ ಪಾಂಡೆ ವಿಕೆಟ್ ಕಳೆದುಕೊಂಡು ಡೆಲ್ಲಿ ಆರಂಭಿಕ ಆಘಾತ ಅನುಭವಿಸಿತು. ನಂತರ ಬಂದ ರಿಲ್ಲಿ ರೊಸೌ 14 ರನ್ ಗಳಿಸಿ ನಿರ್ಗಮಿಸಿದರು. 36 ರನ್‌ಗೆ 3 ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ನಾಯಕ ಡೇವಿಡ್ ವಾರ್ನರ್ ಹಾಗೂ ಲಲಿತ್ ಯಾದವ್ 4ನೇ ವಿಕೆಟ್‌ಗೆ ಅಮೂಲ್ಯ 64 ರನ್ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು 100ರ ಗಡಿ ಮುಟ್ಟಿಸಿದರು. ಒಂದೆಡೆ ತಂಡ ಚೇತರಿಕೆ ಕಾಣುತ್ತಿದ್ದರೆ, ಇನ್ನೊಂದೆಡೆ ಗೆಲುವಿಗೆ ಅಗತ್ಯವಾಗಿದ್ದ ರನ್‌ರೇಟ್ ಆಕಾಶಕ್ಕೆ ಏರಿತ್ತು ಸ್ಫೋಟಕ ಆಟವಾಡಬೇಕಾದ ಹಂತದಲ್ಲಿ ಮತ್ತೊಮ್ಮೆ ದಾಳಿಗಿಳಿದ ಟ್ರೆಂಟ್ ಬೌಲ್ಟ್ 38ರನ್ ಗಳಿಸಿದ್ದ ಲಲಿತ್ ಯಾದವ್ ವಿಕೆಟ್ ಉರುಳಿಸಿದರು. ನಂತರ ಬಂದ ಅಕ್ಷರ್ ಪಟೇಲ್ 2, ರೋವ್‌ಮನ್ ಪಾವೆಲ್ 2, ಅಭಿಷೇಕ್ ಪೊರೆಲ್ 7 ಬಂದಷ್ಟೇ ವೇಗವಾಗಿ ನಿರ್ಗಮಿಸಿ ದ್ದರಿಂದ ಸೋಲಿನ ಅಂತರ ತಗ್ಗಿಸುವ ಪ್ರಯತ್ನವೂ ಯಶಸ್ವಿಯಾಗಲಿಲ್ಲ. ಮತ್ತೊಂದೆಡೆ ತಾಳ್ಮೆಯ ಆಟವಾಡಿದ ನಾಯಕ ವಾರ್ನರ್ 55 ಎಸೆತಗಳಲ್ಲಿ 7 ಬೌಂಡರಿ ಒಳಗೊಂಡ 65 ರನ್ ಗಳಿಸಿ ಔಟಾದರು. ಅಲ್ಲದೇ ವಾರ್ನರ್, ಐಪಿಎಲ್‌ನಲ್ಲಿ 6,000 ರನ್ ಪೂರ್ಣಗೊಳಿಸಿದರು. ಅಂತಿಮವಾಗಿ ರಾಜಸ್ಥಾನ್ ಪರ ಯಜುವೇಂದ್ರ ಚಹಲ್, ಟ್ರೆಂಟ್ ಬೌಲ್ಟ್ ತಲಾ 3, ಆರ್. ಅಶ್ವಿನ್ ಎರಡು ವಿಕೆಟ್ ಗಳಿಸಿದರು. ಯಶಸ್ವಿ ಜೈಸ್ವಾಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ರಹಾನೆ ಸ್ಫೋಟಕ ಬ್ಯಾಟಿಂಗ್: ಸಿಎಸ್‌ಕೆಗೆ ಭರ್ಜರಿ ಜಯ

ಮುಂಬೈ, ಏ.8– ಅಂಜಿಕ್ಯಾ ರಹಾನೆ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ಮುಂಬೈ ಇಂಡಿಯನ್ಸ್ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ವಾಂಖೆಡೆ ಮೈದಾನದಲ್ಲಿ ಮುಂಬೈ ನೀಡಿದ 158ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈ ಖಾತೆ ತೆರೆಯುವ ಮುನ್ನವೇ ಡೆವೋನ್ ಕಾನ್ವೇ ಅವರ ವಿಕೆಟ್ ಕಳೆದುಕೊಂಡು ಆರಂಭಿಕ ಆಘಾತ ಎದುರಿಸಿತು. ನಂತರ ಜೊತೆಯಾದ ರುತುರಾಜ್ ಗಾಯಕ್ವಾಡ್ ಹಾಗೂ ಅಜಿಂಕ್ಯಾ ರಹಾನೆ ರಹಾನೆ 2ನೇ ವಿಕೆಟ್‌ಗೆ 82 ರನ್‌ಗಳ ಜೊತೆಯಾಟವಾಡುವ ಮೂಲಕ ಚೇತರಿಕೆ ನೀಡಿದರು. ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ನಡೆಸಿದ ರಹಾನೆ ವೇಗದ ಅರ್ಧಶತಕ ಸಿಡಿಸಿ ತಂಡದ ಜಯದ ಹಾದಿ ಸುಗಮಗೊಳಿಸಿದರು. ಅವರು 27 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಒಳಗೊಂಡ 61 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಶಿವಂ ದುಬೆ 28 ರನ್ ಕಾಣಿಕೆ ನೀಡಿದರು. ಇತ್ತ ಎಚ್ಚರಿಕೆಯ ಆಟವಾಡಿದ ರುತುರಾಜ್ ಗಾಯಕ್ವಾಡ್ ಅಜೇಯ 40 ಹಾಗೂ ಅಂಬಟಿ ರಾಯುಡು 20 ರನ್ ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ಈ ಮೂಲಕ ಚೆನ್ನೈ ಸೂಪರ್ ಕಿಂಗ್ಸ್ 18.1 ಓವರ್‌ಗಳಲ್ಲಿ ಇನ್ನೂ 11 ಎಸೆತ ಬಾಕಿ ಉಳಿದಿರುವಂತೆಯೇ 3 ವಿಕೆಟ್ ನಷ್ಟಕ್ಕೆ 159ರನ್ ಗಳಿಸಿ ಗೆಲುವಿನ ದಡ ಸೇರಿತು. ಮುಂಬೈ ಪರ ಜೇಸನ್ ಬೆಹ್ರೆನ್ಡಾರ್ಫ್, ಪಿಯುಷ್ ಚಾವ್ಲಾ ಹಾಗೂ ಕುಮಾರ್ ಕಾರ್ತಿಕೇಯ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 157 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ರೋಹಿತ್ ಶರ್ಮಾ 13 ಎಸೆತಗಳಲ್ಲಿ 1 ಸಿಕ್ಸರ್, 3 ಬೌಂಡರಿ ಒಳಗೊಂಡ 21 ರನ್ ಗಳಿಸಿ ದೊಡ್ಡ ಇನ್ನಿಂಗ್ಸ್ ಆಡುವ ಮುನ್ಸೂಚನೆ ನೀಡಿದರು. ಆದರೆ ಈ ವೇಳೆ ದಾಳಿಗಿಳಿದ ತುಷಾರ್ ದೇಶಪಾಂಡೆ ರೋಹಿತ್ ಶರ್ಮಾ ಅವರನ್ನು ಕ್ಲೀನ್ ಬೋಲ್ಡ್ ಮಾಡಿದರು. ಬಳಿಕ ಬಿರುಸಿನ ಆಟಕ್ಕಿಳಿದ ಇಶಾನ್ ಕಿಶನ್ 5 ಬೌಂಡರಿ ಒಳಗೊಂಡ 32 ರನ್ ಗಳಿಸಿ ಜಡೇಜಾಗೆ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ಇಂದಿನ ಪಂದ್ಯದಲ್ಲೂ ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್ ವೈಫಲ್ಯ ಮುಂದುವರೆಯಿತು. ಕೇವಲ 1 ರನ್ ಗಳಿಸಿ ಮಿಚೆಲ್ ಸ್ಯಾಂಟನರ್‌ಗೆ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ 12 ರನ್ ಗಳಿಸಿ ಆಡುತ್ತಿದ್ದ ಕ್ಯಾಮರೂನ್ ಗ್ರೀನ್‌ಗೆ ಜಡೇಜಾ ಪೆವಿಲಿಯನ್ ಹಾದಿ ತೋರಿದರು. ನಂತರ ಬಂದ ತಿಲಕ್ ವರ್ಮಾ 18 ಎಸೆತಗಳಲ್ಲಿ 1 ಸಿಕ್ಸರ್, 2 ಬೌಂಡರಿ ಒಳಗೊಂಡ 22ರನ್ ಹಾಗೂ ಟೀಮ್ ಡೇವಿಡ್ 22 ಎಸೆತಗಳಲ್ಲಿ 2 ಸಿಕ್ಸರ್, 1 ಬೌಂಡರಿ ಒಳಗೊಂಡ 31ರನ್ ಗಳಿಸಿ ಕ್ರಮವಾಗಿ ಜಡೇಜಾ ಹಾಗೂ ತುಷಾರ್ ದೇಶಪಾಂಡೆಗೆ ವಿಕೆಟ್ ಒಪ್ಪಿಸಿದರು. ಉಳಿದಂತೆ ಹೃತಿಕ್ ಶೋಕೇನ್ 18ರನ್ ಗಳಿಸಿ ಅಜೇಯರಾಗಿ ಉಳಿದರು. ಚೆನ್ನೈ ಪರ ರವೀಂದ್ರ ಜಡೇಜಾ 3, ತುಷಾರ್ ದೇಶಪಾಂಡೆ, ಸ್ಯಾಂಟನರ್ 2, ಮಗಲಾ 1 ವಿಕೆಟ್ ಉರುಳಿಸಿದರು. ಸಿಎಸ್‌ಕೆ ಪರ ರವೀಂದ್ರ ಜಡೇಜಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸ್ಕೋರ್ ವಿವರ
ಮುಂಬೈ ಇಂಡಿಯನ್ಸ್
157/8
ಚೆನ್ನೈ ಸೂಪರ್ ಕಿಂಗ್ಸ್
159/3
(ಚೆನ್ನೈಗೆ 7 ವಿಕೆಟ್ ಜಯ)



[ಏಪ್ರಿಲ್ 09]

ಗುಜರಾತ್ V/S ಕೋಲ್ಕತ್ತಾ
ಸ್ಥಳ: ನರೇಂದ್ರ ಮೋದಿ ಮೈದಾನ, ಅಹಮದಾಬಾದ್
ಸಮಯ: ಮಧ್ಯಾಹ್ನ 3.30

ಹೈದರಾಬಾದ್ V/S ಪಂಜಾಬ್
ಸ್ಥಳ: ರಾಜೀವ್ ಗಾಂಧಿ ಮೈದಾನ, ಹೈದರಾಬಾದ್
ಸಮಯ: ರಾತ್ರಿ 7.30

ಚಾಮುಂಡೇಶ್ವರಿ ಕ್ಷೇತ್ರದ ಮತಗಟ್ಟೆಗಳಲ್ಲಿ ಮೂಲಭೂತ ಸೌಕರ್ಯ ಪರಿಶೀಲನಾ ಸಭೆ



ಮೈಸೂರು, ಏ.8–ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮತಗಟ್ಟೆಗಳಲ್ಲಿ ಒದಗಿಸಿರುವ ಮೂಲಭೂತ ಸೌಕರ್ಯಗಳ ಪರಿಶೀಲನಾ ಸಭೆಯನ್ನು ನಗರದ ತಾಲೂಕು ಕಚೇರಿಯ ಸಭಾಂಗಣದಲ್ಲಿ ಕ್ಷೇತ್ರದ ಚುನಾವಣಾಧಿಕಾರಿ ಕಮಲಾ ಭಾಯಿ ನಡೆಸಿದರು.

ಸಭೆಯಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಆಡಳಿತ ಅಧಿಕಾರಿಗಳ ಸಭೆಯನ್ನು ನಡೆಸಿ ಮೂಲಭೂತ ಸೌಕರ್ಯಗಳಿಗಾಗಿ ಸೂಕ್ತ ಮತ್ತು ಅಗತ್ಯ ಕ್ರಮದ ಬಗ್ಗೆ ಸೂಚನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಕ್ಷೇತ್ರದಲ್ಲಿ ಒಟ್ಟು 337 ಮತಗಟ್ಟೆಗಳಿದ್ದು ಈ ಪೈಕಿ 64 ಮತಗಟ್ಟೆಗಳು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿವೆ. ಉಳಿದ 273 ಮತಗಟ್ಟೆಗಳು ಹೂಟಗಳ್ಳಿ ನಗರ ಸಭೆ, ಬೋಗಾದಿ ಪಟ್ಟಣ ಪಂಚಾಯಿತಿ, ಕಡಕೊಳ ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ, ಶ್ರೀರಾಂಪುರ ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಮತಗಟ್ಟೆಗಳಾಗಿವೆ. ಈ ಹಿನ್ನಲೆ ಮತಗಟ್ಟೆಯಲ್ಲಿ ನೀರಿನ ವ್ಯವಸ್ಥೆಯುಳ್ಳ ಶೌಚಾಲಯ, ರಾಂಪ್ ವ್ಯವಸ್ಥೆ, ಮತದಾನ ಕೊಠಡಿಯ ಮೇಲ್ಛಾವಣಿ, ವಿದ್ಯುತ್ ಸಂಪರ್ಕ ಹಾಗೂ ಇತರ ಮೂಲಭೂತ ಸೌಕರ್ಯಗಳ ಬಗ್ಗೆ ಈವರೆಗೂ ತೆಗೆದುಕೊಂಡಿರುವ ಕ್ರಮ ಮತ್ತು ಏನಾದರೂ ಬಾಕಿ ಇದ್ದಲ್ಲಿ ಕೂಡಲೇ ಸೂಕ್ತ ಕ್ರಮಗಳ ವಹಿಸುವಂತೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಆಡಳಿತ ಅಧಿಕಾರಿಗಳಿಗೆ ಸೂಚಿಸಿದರು.

ಕುರಿತಂತೆ ಸೆಕ್ಟರ್ ಅಧಿಕಾರಿಗಳು ತಂತ್ರಾಂಶದಲ್ಲಿ ಛಾಯಾ ಚಿತ್ರದೊಂದಿಗೆ ಮತಗಟ್ಟೆಯ ಮೂಲಭೂತ ಸೌಕರ್ಯದ ಮಾಹಿತಿಯನ್ನು ಅಪ್ಲೋಡ್ ಮಾಡಬೇಕಾಗಿರುವುದರಿಂದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಆಡಳಿತ ಅಧಿಕಾರಿಗಳಿಗೆ ಮೇಲ್ಕಂಡ ಸೌಕರ್ಯವು, ಮತಗಟ್ಟೆಗಳಲ್ಲಿ ಕಡ್ಡಾಯವಾಗಿ ಇರುವಂತೆ ಕ್ರಮ ವಹಿಸುವಂತೆ ತಿಳಿಸಿದರು. ಸಭೆಯಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಹಕಾಧಿಕಾರಿಗಳಾದ ಗಿರೀಶ್ ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ಉಪಸ್ಥಿತರಿದ್ದರು.

ಏ.11ಕ್ಕೆ ಕೆ.ಆರ್.ನಗರದಲ್ಲಿ 'ವನಸುಮ' ಲೋಕಾರ್ಪಣೆ

ಮೈಸೂರು, ಏ.8– ಸಮಾಜ ಸೇವಕ, ನಿವೃತ್ತ ಉಪನ್ಯಾಸಕ ಕೆ.ಆರ್.ಲಕ್ಕೇಗೌಡರ ಜೀವನ ಕಥನ 'ವನಸುಮ' ಕೃತಿ ಲೋಕಾರ್ಪಣೆ ಸಮಾರಂಭ ಕೆ.ಆರ್.ನಗರದ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ಏ.11ರಂದು ಬೆಳಗ್ಗೆ 10.30ಕ್ಕೆ ನಡೆಯಲಿದೆ.

ಶ್ರೀ ಕೆ.ಆರ್.ಲಕ್ಕೇಗೌಡರ ಶಿಷ್ಯವೃಂದ ಹಾಗೂ ಹಿತೈಷಿ ಬಳಗದ ವತಿಯಿಂದ ಏರ್ಪಡಿಸುವ ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಕೃತಿಯನ್ನು ಬಿಡುಗಡೆ ಮಾಡಲಿದ್ದಾರೆ. ಶಾಸಕ ಸಾ.ರಾ.ಮಹೇಶ್ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ವಿದ್ವಾಂಸ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಕೃತಿ ಕುರಿತು ಮಾತನಾಡಲಿದ್ದಾರೆ. ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಚಾಮರಾಜನಗರದ ಧೀನಬಂಧು ಟ್ರಸ್ಟ್‌ನ ಅಧ್ಯಕ್ಷ ಪ್ರೊ.ಜಿ.ಎಸ್.ಜಯದೇವ, ಕೆ.ಆರ್.ಲಕ್ಕೇಗೌಡರು, ಕೆ.ಎನ್.ಬಸಂತ್, ಡಾ.ದೀಪು, ಸೃಷ್ಠಿ ನಾಗೇಶ್ ಮತ್ತಿತರರು ಭಾಗವಹಿಸಲಿದ್ದಾರೆ.

ಮೀಸಲು ಹೆಚ್ಚಳ 9ನೇ ಷೆಡ್ಯೂಲ್‌ಗೆ ಸೇರಿಸಿದರೆ ಮಾತ್ರ ಮಾನ್ಯತೆ: ಸಿದ್ದರಾಮಯ್ಯ



ಬೆಂಗಳೂರು: ಎಸ್‌ಸಿ ಮೀಸಲಾತಿ ಶೇ 15ರಿಂದ 17ಕ್ಕೆ, ಎಸ್‌ಟಿ ಮೀಸಲಾತಿ 3ರಿಂದ 6ಕ್ಕೆ ಹೆಚ್ಚಿಸಿರುವ ನಿರ್ಣಯವನ್ನು ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿದರೆ ಮಾತ್ರ ಮಾನ್ಯತೆ ಸಿಗಲಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಹೆಚ್ಚಿಸಲು ಸಮ್ಮಿಶ್ರ ಸರ್ಕಾರದ ಅವಧಿಯಲ್ಲೇ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗದ ಸಮಿತಿ ರಚಿಸಿದ್ದೆವು. 2020ರಲ್ಲಿ ಅವರು ವರದಿ ನೀಡಿದರು. ಆ ಸಂದರ್ಭ ಬಿಜೆಪಿ ಸರ್ಕಾರವಿತ್ತು. ಯಡಿಯೂರಪ್ಪ ಸಿಎಂ ಆಗಿದ್ದರು. 257 ದಿನಗಳ ಕಾಲ ವಾಲ್ಮೀಕಿ ಸ್ವಾಮೀಜಿ ಮೀಸಲಾತಿಗಾಗಿ ಧರಣಿ ನಡೆಸಿದ್ದರು. 3 ವರ್ಷ ವರದಿಯನ್ನು ಇಟ್ಟುಕೊಂಡು ಸರ್ಕಾರ ಕುಳಿತಿದ್ದೇಕೆ? ಅವರಿಗೆ ಸಾಮಾಜಿಕ ನ್ಯಾಯದ ಬಗ್ಗ ಬದ್ಧತೆ ಇದೆಯೇ ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಸರ್ವಪಕ್ಷ ಸಭೆಯಲ್ಲಿ ಎಸ್‌ಸಿ ಮೀಸಲಾತಿ ಶೇ 15ರಿಂದ 17ಕ್ಕೆ, ಎಸ್‌ಟಿ ಮೀಸಲಾತಿ 3ರಿಂದ 6ಕ್ಕೆ ಹೆಚ್ಚಿಸಲು ನಾವು ಸಲಹೆ ನೀಡಿದ್ದೆವು. 9ನೇ ಶೆಡ್ಯೂಲ್‌ನಲ್ಲಿ ಮೀಸಲಾತಿ ಹೆಚ್ಚಳವನ್ನು ಸೇರಿಸದಿದ್ದರೆ ಅದಕ್ಕೆ ಮಾನ್ಯತೆ ಇರುವುದಿಲ್ಲ. ಇಡಬ್ಲ್ಯುಎಸ್ ಮೀಸಲಾತಿಗೆ ಸಂವಿಧಾನ ತಿದ್ದುಪಡಿ ಮಾಡಿದ ರೀತಿಯೇ ಇದಕ್ಕೂ ಮಾಡಬೇಕಿತ್ತು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಸಂಖ್ಯೆ13 ಲಕ್ಕಿ ನಂಬರಾ: 2013, ಮೇ 13ರಂದು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಈ ಬಾರಿಯೂ ಮೇ.13ರಂದು ವಿಧಾನಸಭೆ ಚುನಾವಣೆಯ ಮತ ಎಣಿಕೆ ನಡೆಯುತ್ತಿದೆ. ಹಾಗಾದರೆ, 13 ಸಿದ್ದರಾಮಯ್ಯಗೆ ಲಕ್ಕಿನಂಬರಾ ಎಂಬ ಮಾತುಗಳು ಕೇಳಿಬರುತ್ತಿವೆ.

ಈ ಕುರಿತಂತೆ ಸ್ವಾರಸ್ಯಕರ ಪ್ರಶ್ನೆಗೆ, ನನಗೆ ಅದರಲ್ಲೆಲ್ಲ ನಂಬಿಕೆ ಇಲ್ಲ ಎಂದು ಅವರು ಉತ್ತರಿಸಿದ್ದಾರೆ. 2013ರಲ್ಲಿ ಮೇ 5ರಂದು ಮತ ಎಣಿಕೆ ನಡೆದು, 13ರಂದು ನಾನು ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ್ದೆ. ಈ ಬಾರಿ ಮತ ಎಣಿಕೆ 13ಕ್ಕೆ ಬಂದಿದೆ ಇವೆಲ್ಲ ಕಾಕತಾಳೀಯ ಎಂದು ಅವರು ಉತ್ತರಿಸಿದರು.

ಇದೇವೇಳೆ, ಸರ್ಕಾರಿ ನೌಕರರಿಗೆ ಹಳೆ ಮೀಸಲಾತಿ ಪದ್ಧತಿ(ಒಪಿಎಸ್) ಜಾರಿ ಕುರಿತಂತೆ ನಮ್ಮ ಸರ್ಕಾರ ಪಾಸಿಟಿವ್ ಆಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಈಗಾಗಲೇ ರಾಜಸ್ಥಾನದಲ್ಲಿರುವ ನಮ್ಮ ಪಕ್ಷದ ಸರ್ಕಾರ ಇದನ್ನು ಜಾರಿ ಮಾಡಿದೆ ಈ ಸಂಬಂಧ ಸಾಧಕ ಬಾಧಕಗಳ ಬಗ್ಗೆ ಚರ್ಚೆ ನಡೆಸಿದ್ದೇವೆ ನೌಕರರ ಬಗ್ಗೆಯೂ ಚರ್ಚೆ ಮಾಡುತ್ತಿದ್ದೇವೆ ಎಂದು ಅವರು ಪ್ರಜಾವಾಣಿ ಸಂವಾದದಲ್ಲಿ ಹೇಳಿದ್ದಾರೆ.

ಇಬ್ಬರ ಬಂಧಿಸಿ 75 ಲಕ್ಷ ಮೌಲ್ಯದ ಗಾಂಜಾ ವಶ

ಮೈಸೂರು, ಏ.8–ಇಬ್ಬರು ಗಾಂಜಾ ಮಾರಾಟಗಾರರನ್ನು ಬಂಧಿಸಿರುವ ಮೈಸೂರು ನಗರ ಸಿಸಿಬಿ ಪೊಲೀಸರು ಅವರಿಂದ 75 ಲಕ್ಷ ರೂ. ಮೌಲ್ಯದ 12.600 ಗ್ರಾಂ ಗಾಂಜಾ ಹಾಗೂ ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ರಾಜೀವನಗರ ಎರಡನೇ ಹಂತದ ನಿವಾಸಿಗಳಾದ ಮುದಾಸಿರ್ ಅಹಮ್ಮದ್ ಅಲಿಯಾಸ್ ಮುದ್ದು(37) ಮತ್ತು ಮಹಮ್ಮದ್ ಇಮ್ರಾನ್ ಅಲಿಯಾಸ್ ಬಬನ್, ಅಲಿಯಾಸ್ ಅಮೀರ್ (38) ಬಂಧಿತ ಆರೋಪಿಗಳಾಗಿದ್ದು, ಇವರಿಬ್ಬರೂ ರಾಜೀವನಗರ ಎರಡನೇ ಹಂತದ ಅಬ್ದುಲ್ ರೆಹಮಾನ್ ಮುಖ್ಯ ರಸ್ತೆಯಿಂದ ನಾರಾಯಣ ಹೃದಯಾಲಯ ಆಸ್ಪತ್ರೆಗೆ ಹೋಗುವ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಗಾಂಜಾ ಸಮೇತ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾರೆ.

ಈ ಕಾರ್ಯಾಚರಣೆಯನ್ನು ಡಿಸಿಪಿ ಶ್ರೀಮತಿ ಜಾಹ್ನವಿ, ಸಿಸಿಬಿ ಎಸಿಪಿ ಎಸ್.ಎನ್. ಸಂದೇಶ್ ಕುಮಾರ್ ಮಾರ್ಗದರ್ಶನದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಕೃಷ್ಣ ಕುಮಾರ್, ಎಎಸ್‌ಐ ಅಸ್ಗರ್ ಖಾನ್, ಸಿಬ್ಬಂದಿಗಳಾದ ಸಲೀಂ ಪಾಷ, ರಾಮಸ್ವಾಮಿ, ಎ.ಉಮಾಮಹೇಶ್, ಪ್ರಕಾಶ್, ಸುರೇಶ್, ಮಹೇಶ್, ನರಸಿಂಹರಾಜು, ಚಾಲಕ ಕೆ.ಎಸ್.ರವಿ ಭಾಗವಹಿಸಿದ್ದರು.

ಪಾರ್ಕಿನ್‌ಸನ್ಸ್ ಕಾಯಿಲೆಗೆ ಚಿಕಿತ್ಸಾ ಶಿಬಿರ

ಮೈಸೂರು, ಏ.8–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಏ.10ರಿಂದ 17ರವರೆಗೆ ಪಾರ್ಕಿನ್‌ಸನ್ಸ್ ಕಾಯಿಲೆಗೆ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ದೇಹ ಕಂಪಿಸುವುದು, ಜಿಗಿತ, ನಡೆಯಲು ಕಷ್ಟವಾಗುವುದು, ನಿಧಾನವಾದ ಚಲನೆ, ವರ್ತನೆ ಅಥವಾ ಆಲೋಚನಾ ತೊಂದರೆಗಳು, ಸಂವೇದನೆ ಹಾಗೂ ನಿದ್ರಾಹೀನತೆ ಇತ್ಯಾದಿ ತೊಂದರೆಗಳಿಗೆ ತಪಾಸಣೆ, ಸಲಹೆ ಮತ್ತು ಚಿಕಿತ್ಸೆ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ. 9886485005, ದೂ. 0821–2548231 ಸಂಪರ್ಕಿಸಬಹುದು.

ಬ್ಯಾಂಕ್‌ನಲ್ಲಿ ಬಡ್ಡಿ ರಹಿತ ಸಾಲ ಕೊಡಿಸುವುದಾಗಿ ಹಲವರಿಗೆ ಮೋಸ

● ವಂಚಕನ ಬಂಧಿಸಿ 21 ಲಕ್ಷ ನಗದು, 426 ಗ್ರಾಂ ಚಿನ್ನಾಭರಣ ವಶ ● ಸಿಸಿಬಿ ಎಸಿಪಿ ಸಂದೇಶ ಕುಮಾರ್ ನೇತೃತ್ವದಲ್ಲಿ ಯಶಸ್ವಿ ಕಾರ್ಯಾಚರಣೆ ● ಅಮಾಯಕರೊಬ್ಬರ ಪರಿಚಯಿಸಿಕೊಂಡು ಅವರ ಸಂಬಂಧಿಕರಿಗೆಲ್ಲಾ ವಂಚನೆ

ಮೈಸೂರು, ಏ.8– ಬ್ಯಾಂಕ್‌ನಲ್ಲಿ ಬಡ್ಡಿ ರಹಿತ ಸಾಲ ಕೊಡಿಸುವುದಾಗಿ ನಂಬಿಸಿ ಹಲವರಿಂದ ನಗದು ಹಾಗೂ ಚಿನ್ನಾಭರಣ ಪಡೆದು ವಂಚಿಸಿದ್ದ ವಂಚಕನನ್ನು ಮೈಸೂರು ನಗರ ಸಿಸಿಬಿ ಪೊಲೀಸರು ಬಂಧಿಸಿ, ಈತನಿಂದ 21 ಲಕ್ಷ ರೂ. ಮೌಲ್ಯದ 426 ಗ್ರಾಂ ತೂಕದ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಇಟ್ಟಿಗೆಗೂಡು ನಿವಾಸಿ ವಿನೋದ್ ಕುಮಾರ್ ಬಂಧಿತ ವಂಚಕನಾಗಿದ್ದು, ಈತ ಲಲಿತಾದ್ರಿಪುರ, ಪಡುವಾರಹಳ್ಳಿ, ತಿ.ನರಸೀಪುರ ಮುಂದಾದೆಡೆ ಅವಿದ್ಯಾವಂತರನ್ನೇ ಗುರಿಯಾಗಿಸಿಕೊಂಡು ಬ್ಯಾಂಕ್‌ನಲ್ಲಿ ಬಡ್ಡಿರಹಿತ ಸಾಲ ಕೊಡಿಸುವುದಾಗಿ ಅವರಿಂದ ಲಕ್ಷಾಂತರ ರೂ. ಪಡೆಯುತ್ತಿದ್ದ ಅಲ್ಲದೆ ನಗದು ಇಲ್ಲದಿದ್ದಾಗ ಚಿನ್ನಾಭರಣವನ್ನು ಪಡೆಯುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ವಿವರ: ಲಲಿತಾದ್ರಿಪುರದ ಗೃಹಿಣಿ ಬಿ.ಸಿ.ಸೌಮ್ಯ ಎಂಬುವರಿಗೆ ಇನ್ಸ್ಟಾಗ್ರಾಮ್ ಮೂಲಕ ಪರಿಚಯವಾದ ವಿನೋದ್ ಕುಮಾರ್, ತನಗೆ ಲಲಿತಾದ್ರಿಪುರದಲ್ಲಿ ಮನೆಗಳಿವೆ. ಅಲ್ಲದೇ ಹಲವೆಡೆ ಸಾಕಷ್ಟು ಆಸ್ತಿಪಾಸ್ತಿಗಳಿದ್ದು, ತನ್ನ ಮನೆಯಲ್ಲಿ ಐಟಿ ರೈಡ್ ನಡೆದಿದೆ. ಆ ಸಂಬಂಧ ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿದ್ದು, ಸಾಕಷ್ಟು ಹಣ ಖರ್ಚು ಮಾಡುತ್ತಿದ್ದೇನೆ ಎಂದು ಹೇಳುವ ಮೂಲಕ ತಾನು ಭಾರೀ ಶ್ರೀಮಂತ ಎಂದು ಸೌಮ್ಯ ಅವರ ಬಳಿ ಬಿಂಬಿಸಿಕೊಂಡಿದ್ದ.

ನಂತರದ ದಿನಗಳಲ್ಲಿ ಸೌಮ್ಯ ಮನೆಗೂ ಬರುತ್ತಿದ್ದ ಆತ ಆಕೆಯ ಕೂಲಿ ಕೆಲಸ ಮಾಡುವ ಪತಿಯನ್ನು ಪರಿಚಯಿಸಿಕೊಂಡು ಇನ್ನು ಮುಂದೆ ನೀವು ಕೂಲಿ ಕೆಲಸ ಮಾಡುವುದು ಬೇಡ ಸ್ವಲ್ಪ ಹಣ ಕೊಟ್ಟರೇ ಎರಡು ಹೊಸ ಕಾರುಗಳನ್ನು ಕೊಡಿಸುತ್ತೇನೆ. ಅದನ್ನು ಕಾಮಾಕ್ಷಿ ಆಸ್ಪತ್ರೆಯ ಡಾಕ್ಟರ್‌ಗಳಿಗೆ ಪಿಕ್ ಅಪ್ ಮತ್ತು ಡ್ರಾಪ್‌ಗೆ ಬಿಡಬಹುದು. ಆ ಮೂಲಕ ಹಣ ಸಂಪಾದನೆ ಆಗುತ್ತದೆ ಎಂದು ನಂಬಿಸಿ, 2022ರ ಜೂನ್ ತಿಂಗಳಿನಲ್ಲಿ ಅವರಿಂದ ಎರಡು ಲಕ್ಷ ರೂ. ಪಡೆದಿದ್ದ ಎಂದು ಆರೋಪಿಸಲಾಗಿದೆ. ಆನಂತರ ಕಾರು ಕೊಡಿಸಲು ಸ್ವಲ್ಪ ದಿನ ಕಾಯಬೇಕೆಂದು ತಿಳಿಸಿದ್ದ ಆತ, ತಾನು ಬ್ಯಾಂಕಿನಿಂದ ಬಡ್ಡಿರಹಿತವಾಗಿ 20 ಲಕ್ಷ ರೂ. ಸಾಲ ಕೊಡಿಸುತ್ತೇನೆ ಆ ಹಣವನ್ನು ನನಗೆ ಕೊಟ್ಟರೆ ಡಬಲ್ ಮಾಡಿಕೊಡುತ್ತೇನೆ ಎಂದು ನಂಬಿಸಿದ್ದಾನೆ. ಆವೇಳೆ ದಂಪತಿ ಬಳಿ ಹಣವಿಲ್ಲದಿದ್ದಾಗ ಅವರ 89 ಗ್ರಾಂ ತೂಕದ ಚಿನ್ನಾಭರಣವನ್ನು ತೆಗೆದುಕೊಂಡು ಹೋಗಿದ್ದಾನೆ.

ಬಹಳಷ್ಟು ದಿನವಾದರೂ ವಿನೋದ್ ಕುಮಾರ್ ಈ ದಂಪತಿಗೆ ಬ್ಯಾಂಕ್‌ನಿಂದ ಸಾಲ ಕೊಡಿಸಿಲ್ಲ. ಅದೇ ವೇಳೆ ವಿನೋದ್ ಕುಮಾರ್ ಗೃಹಿಣಿ ಸೌಮ್ಯಳ ಮಾವ ಚಲುವರಾಜು ಮತ್ತು ಅತ್ತೆ ಜಯಂತಿ ಅವರಿಂದಲೂ 6 ಲಕ್ಷ ರೂ. ನಗದು ಹಾಗೂ 96 ಗ್ರಾಂ ತೂಕದ ಚಿನ್ನಾ ಭರಣ ಪಡೆದು ವಂಚಿಸಿದ್ದಾನೆ. ಅಲ್ಲದೆ ಆಕೆಯ ಸಂಬಂಧಿಕರಾದ ಲಲಿತಾದ್ರಿಪುರದ ಎಸ್. ಎಸ್.ಲಕ್ಷ್ಮಿ, ಬೈರವೇಶ್ವರ ನಗರದ ಅಶ್ವಿನಿ, ಸೌಮ್ಯಾಳ ಚಿಕ್ಕಪ್ಪನ ಮಗ ಕಿರಣ್, ಪಡುವಾರಹಳ್ಳಿಯ ರೂಪ ಮತ್ತು ತಿ.ನರಸೀಪುರದ ಚಂಚಲಮ್ಮ ಎಂಬುವರಿಂದಲೂ ನಗದು ಮತ್ತು ಚಿನ್ನಾಭರಣ ಪಡೆದು ವಂಚಿಸಿರುವುದು ಸೌಮ್ಯ ಅವರಿಗೆ ಗೊತ್ತಾಗಿದೆ. ಈತನಿಂದ ತಮ್ಮ ಸಂಬಂಧಿಕರು ಕೂಡ ವಂಚನೆಗೊಳಗಾಗಿರುವ ವಿಷಯ ತಿಳಿಯುತ್ತಿದ್ದಂತೆ ಸೌಮ್ಯ ಮಾ.30 ರಂದು ಆಲನಹಳ್ಳಿ ಠಾಣೆಯಲ್ಲಿ ಈತನ ವಿರುದ್ಧ ಪ್ರಕರಣ ದಾಖಲಿಸಿದ್ದರು.

ಈ ಪ್ರಕರಣವನ್ನು ಸಿಸಿಬಿ ತನಿಖೆಗೆ ವಹಿಸಿದ ಹಿನ್ನೆಲೆಯಲ್ಲಿ ಡಿಸಿಪಿಗಳಾದ ಮುತ್ತುರಾಜ್, ಶ್ರೀಮತಿ ಜಾಹ್ನವಿ, ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್ ಕುಮಾರ್ ಮಾರ್ಗದರ್ಶನದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಕೃಷ್ಣ ಕುಮಾರ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಮಾರುತಿ ಅಂತರಗಟ್ಟೆ, ರಂಗಸ್ವಾಮಿ, ಎಎಸ್‌ಐ ಅಸ್ಗರ್ ಖಾನ್, ಸಿಬ್ಬಂದಿಗಳಾದ ಸಲೀಂ ಪಾಷ, ರಾಮಸ್ವಾಮಿ, ಎ.ಉಮಾಮಹೇಶ್, ಮಧುಸೂಧನ್, ಪ್ರಕಾಶ್, ಸುರೇಶ್, ಮಹೇಶ್, ರವಿಶಂಕರ್, ಲಕ್ಷ್ಮಿಕಾಂತ, ಮೋಹನ ಆರಾಧ್ಯ, ಚಂದ್ರಶೇಖರ್, ನರಸಿಂಹರಾಜು, ಮಮತ, ರಮ್ಯ, ಚಾಲಕ ರಾದ ಶಿವಕುಮಾರ್ ಮತ್ತು ಕೆ.ಎಸ್.ರವಿ ಅವರನ್ನೊಳಗೊಂಡ ತಂಡ ವಂಚಕ ವಿನೋದ್ ಕುಮಾರ್ ನನ್ನು ಬಂಧಿಸಿ 21 ಲಕ್ಷರೂ. ಮೌಲ್ಯದ 426 ಗ್ರಾಂ ತೂಕದ ಚಿನ್ನಾಭರಣವನ್ನು ವಶಪಡಿಸಿಕೊಂಡಿದೆ. ಈತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.



ದಲಿತ ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ್ದೇನೆ

ಜೆಡಿಎಸ್ ಪಕ್ಷದ ದಲಿತ ಮುಖಂಡರ ಸಭೆಯಲ್ಲಿ ಮಾಜಿ ಶಾಸಕ ಚಿಕ್ಕಣ್ಣ

ಹೆಚ್.ಡಿ.ಕೋಟೆ, ಏ.8– ಕಳೆದ 50 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ನಾನು ದಲಿತ ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ತಿಳಿಸಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್‌ನ ಕಪಿಲಾ ಸಭಾಂಗಣದಲ್ಲಿ ಶನಿವಾರ ನಡೆದ ಜೆಡಿಎಸ್ ಪಕ್ಷದ ದಲಿತ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ನಾಯಕ ಸಂಘದ ತಾಲೂಕು, ಜಿಲ್ಲಾಧ್ಯಕ್ಷ, ಜಿಲ್ಲಾ ಪರಿಷತ್, ಜಿಪಂ ಸದಸ್ಯನಾಗಿ ಹಾಗೂ ಶಾಸಕನಾಗಿ ಕಾರ್ಯ ನಿರ್ವಹಿಸಿದ್ದೇನೆ. ಆದರೆ ಎಂದಿಗೂ ನಾನು ದಲಿತ ಸಮುದಾಯದವರ ಗೌರವಕ್ಕೆ ಧಕ್ಕೆ ಬಾರದ ಹಾಗೇ ನಡೆದುಕೊಂಡು ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಕೆಲವು ವೇಳೆ ನಾನು ಇದ್ದ ಪಕ್ಷದ ವಿರುದ್ಧ ನಡೆದುಕೊಂಡಿದ್ದೇನೆ. ಆದರೆ ಸಮುದಾಯದ ವಿರುದ್ಧ ಎಂದಿಗೂ ನಡೆದುಕೊಂಡಿಲ್ಲ ಎಂದು ತಿಳಿಸಿದರು.



ತಾಲೂಕಿನ ಕೆಂಚನಹಳ್ಳಿಯಲ್ಲಿ ದಲಿತ ಸಮುದಾಯದವರು ಅರಣ್ಯಕ್ಕೆ ಸೇರಿದ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಜೆಸಿಬಿ ಮೂಲಕ ತೆರವುಗೊಳಿಸಲು ಆಗಮಿಸಿದ್ದರು. ನಾನು ಸಮುದಾಯದ ಪರವಾಗಿ ನಿಂತು ಹೋರಾಡಿದೆ. ತೆರಣಿಮುಂಟಿ ಗ್ರಾಮದ ಜಮೀನು ವಿಚಾರವಾಗಿ ಯಾವುದೇ ದಾಖಲೆಗಳು ಇಲ್ಲದಿದ್ದರೂ, ನಾನು ಸಮುದಾಯದ ಪರ ನಿಂತೆ. ಆ ಸಂದರ್ಭ ಕೆಲವರು ದಲಿತರ ಪರ ನಿಲ್ಲಬೇಡಿ ಎಂದು 50 ಲಕ್ಷ ರೂ. ಆಮಿಷ ಒಡ್ಡಿದ್ದರು. ಇದಕ್ಕೆ ಬಗ್ಗದ ನಾನು ನಿಮ್ಮ ಪರ ನಿಂತು ನ್ಯಾಯಕೊಡಿಸಿದೆ. ಎನ್.ಬೇಗೂರು ಗ್ರಾಪಂ ಅಧ್ಯಕ್ಷರ ಆಯ್ಕೆ ಸಂದರ್ಭ ಸಾಮಾನ್ಯ ಮಹಿಳಾ ಕ್ಷೇತ್ರಕ್ಕೆ ಮೀಸಲು ನಿಗದಿಯಾಗಿತ್ತು. ನಾನು ಬೇರೆ ಸಮುದಾಯದವರ ಒತ್ತಡದ ನಡುವೆಯೂ ದಲಿತ ಸಮುದಾಯದ ಮಹಿಳೆ ಅಧ್ಯಕ್ಷೆಯಾಗಲು ಸಹಕಾರ ನೀಡಿದೆ. ಇಷ್ಟೆಲ್ಲಾ ಕಾರ್ಯಗಳನ್ನು ಸಮುದಾಯದ ಪರ ಮಾಡಿದರೂ ಕೆಲ ವಿರೋಧಿಗಳು ನನ್ನನ್ನು ಸಮುದಾಯದ ವಿರೋಧಿ ಎಂದು ಬಿಂಬಿಸುತ್ತಾ ಬಂದಿದ್ದಾರೆ. ನಾನು ಎಂದಿಗೂ ಸಮುದಾಯದ ವಿರೋಧಿಯಲ್ಲ ಎಂದು ಸ್ಪಷ್ಟಪಡಿಸಿದರು.

ಈ ಬಾರಿಯ ಚುನಾವಣೆಯಲ್ಲಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ನನ್ನ ಪುತ್ರ ಜಯಪ್ರಕಾಶ್ ಚಿಕ್ಕಣ್ಣ ಸ್ಪರ್ಧಿಸಲಿದ್ದು, ಎಲ್ಲಾ ಸಮುದಾಯದವರನ್ನು ಒಟ್ಟಿಗೆ ಕರೆದೊಯ್ಯುವ ಸಾಮರ್ಥ್ಯ ಅವನಲ್ಲಿದೆ. ಹೀಗಾಗಿ ಸಮುದಾಯದವರು ಚುನಾವಣೆಯಲ್ಲಿ ನನ್ನ ಪುತ್ರನನ್ನು ಬೆಂಬಲಿಸಬೇಕು ಎಂದರು.

ದಲಿತ ಮುಖಂಡ ಎಸ್.ಎಲ್.ರಾಜಣ್ಣ ಮಾತನಾಡಿ, ಈ ಹಿಂದಿನ ಚುನಾವಣೆಗಳಲ್ಲಿ ಬಲಗೈ ಸಮಾಜ ಶೇ.50 ಮತವನ್ನು ಜೆಡಿಎಸ್ ಪಕ್ಷಕ್ಕೆ ನೀಡುತ್ತಾ ಬಂದಿದ್ದೇವೆ. ಆದರೂ ನಮ್ಮನ್ನು ಜೆಡಿಎಸ್ ವಿರೋಧಿಗಳೆಂದು ಬಿಂಬಿಸಲಾಗಿದೆ. ಹಾಗಾಗಿ ಈ ಚುನಾವಣೆಯಲ್ಲಿ ಜಯಪ್ರಕಾಶ್ ಚಿಕ್ಕಣ್ಣ ಅವರನ್ನು ಗೆಲ್ಲಿಸುವ ಮೂಲಕ ನಾವು ಪಕ್ಷದ ಪರ ಇರುವುದಾಗಿ ತಿಳಿಸಬೇಕಾಗಿದೆ ಎಂದರು.

ಈಗಿನ ಶಾಸಕರಿಗೆ ಜನರನ್ನು ಮಾತನಾಡಿಸುವ ಸೌಜನ್ಯ ಕೂಡ ಇಲ್ಲ. ಇಂತಹವರು ನಮಗೆ ಶಾಸಕರಾಗುವುದು ಬೇಡ. ನಮ್ಮ ಸಮುದಾಯದಲ್ಲಿ ಅನೇಕ ಸಮಸ್ಯೆಗಳಿದ್ದು, ಅವುಗಳನ್ನು ಬಗೆಹರಿಸಲು ಸಾಧ್ಯವಾಗದ ವ್ಯಕ್ತಿಯನ್ನು ಮತ್ತೊಮ್ಮೆ ಗೆಲ್ಲಿಸಬೇಕೆ ಎಂದು ಪ್ರಶ್ನಿಸಿದ ಅವರು ಮಾಜಿ ಶಾಸಕ ಚಿಕ್ಕಣ್ಣ ಅವರು ನೇರ ನಡೆಯುಳ್ಳವರು. ಹೀಗಾಗಿ ಅವರ ಪುತ್ರ ಜಯಪ್ರಕಾಶ್ ಚಿಕ್ಕಣ್ಣ ಅವರನ್ನು ಚುನಾವಣೆಯಲ್ಲಿ ಬೆಂಬಲಿಸಿದರೇ ನಮ್ಮ ಸಮುದಾಯದ ಸಮಸ್ಯೆ ಬಗೆಹರಿಯುವ ಜೊತೆಗೆ ನಮ್ಮ ಕೆಲಸ ಕಾರ್ಯಗಳಿಗೆ ಅನುಕೂಲವಾಗಲಿದೆ ಎಂದರು.

> 2018ರ ವಿಧಾನಸಭಾ ಚುನಾವಣೆಯಲ್ಲಿ ನಾನು ಗೆದ್ದರೆ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರನ್ನು ಕಂಚಮಳ್ಳಿ ಗೇಟ್‌ನಿಂದ ಓಡಿಸುತ್ತೇನೆ ಎಂದು ನನ್ನ ವಿರುದ್ಧ ಅಪಪ್ರಚಾರ ಮಾಡಲಾಯಿತು. ಆದರೆ ಈ ಆರೋಪ ಸತ್ಯಕ್ಕೆ ದೂರವಾದದು. ನಾನು ಹಾಗೂ ಧ್ರುವನಾರಾಯಣ್ ತುಂಬಾ ಆತ್ಮೀಯರಾಗಿದ್ದೇವು.
> – **ಚಿಕ್ಕಣ್ಣ,** ಮಾಜಿ ಶಾಸಕ.

ಸಭೆಯಲ್ಲಿ ಜೆಡಿಎಸ್ ಸಂಭವನೀಯ ಅಭ್ಯರ್ಥಿ ಜಯಪ್ರಕಾಶ್ ಚಿಕ್ಕಣ್ಣ, ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ, ನಂಜುಂಡಸ್ವಾಮಿ, ಶಿವಣ್ಣ ಎಂ.ಡಿ.ಮಂಚಯ್ಯ, ಮಲ್ಲೇಶ, ನಾಗರಾಜು, ಚಂದ್ರು ನಂಜುಂಡ ರಾಜು, ಪ್ರಭಾಕರ್, ವೀಣಾ, ಪುಲಿಮೂರ್ತಿ, ಪರಮೇಶ್, ನರಸಿಂಹೇಗೌಡ, ರಂಗೇಗೌಡ, ನಾಗ ನಾಯಕ, ಸುರೇಂದ್ರ ರಾಜೇಂದ್ರ ನಾಗರಾಜು, ರಾಜಣ್ಣ ಮಹದೇವು, ಕೃಷ್ಣಮೂರ್ತಿ, ಶ್ರೀನಿವಾಸ್, ಮಹೇಂದ್ರ, ನಾಗೇಂದ್ರ, ವೀರಭದ್ರ, ಸಿ.ಶಿವಣ್ಣ, ಸೋಮಣ್ಣ, ತೋಪಯ್ಯ, ಕುಮಾರ, ಪ್ರವೀಣ್, ಮರಿಸಿದ್ದು, ಮಲ್ಲೇಶ್, ಚಲುವರಾಜು, ದೇವಪ್ಪ ಇದ್ದರು.

ವಿಜೃಂಭಣೆಯ ಲಕ್ಷ್ಮಿಕಾಂತಸ್ವಾಮಿ ರಥೋತ್ಸವ

ನಂಜನಗೂಡು, ಏ.8– ತಾಲೂಕಿನ ಕಳಲೆ ಗ್ರಾಮದ ಲಕ್ಷ್ಮಿಕಾಂತಸ್ವಾಮಿ ರಥೋತ್ಸವ ಶನಿವಾರ ಬೆಳಗ್ಗೆ 6.19 ರಿಂದ 6.40 ರೊಳಗೆ ಸಲ್ಲುವ ಶುಭ ಮೀನಾ ಲಗ್ನದಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.



ಮುಂಜಾನೆಯೇ ಲಕ್ಷ್ಮಿಕಾಂತಸ್ವಾಮಿಗೆ ದೇವಾಲಯದ ಪ್ರಧಾನ ಅರ್ಚಕ ಎಚ್.ಡಿ. ವಿನಯ್ ಆಚಾರ್ಯ ನೇತೃತ್ವದಲ್ಲಿ ಅವಭೃತ ತೀರ್ಥಸ್ನಾನದ ನಂತರ ಚೂರ್ಣಾಭಿಷೇಕ ಹಾಗೂ ವಿವಿಧ ಪೂಜಾ ವಿಧಿವಿಧಾನಗಳನ್ನು ನಡೆಸಿದ ನಂತರ ಋತ್ವಿಕರು ಸ್ವಾಮಿ ಉತ್ಸವ ಮೂರ್ತಿಯನ್ನು ಚಿನ್ನದ ಒಡವೆಗಳಿಂದ ಅಲಂಕರಿಸಿ, ಪಲ್ಲಕ್ಕಿಯಲ್ಲಿರಿಸಿ ದೇವಾಲಯದ ಮುಂಭಾಗಕ್ಕೆ ಹೊತ್ತು ತಂದರು. ಸ್ವಾಮಿಯವರ ರಥವನ್ನು ವಿವಿಧ ಹೂ, ತಳಿರು ತೋರಣ, ಬಣ್ಣಬಣ್ಣದ ಬಟ್ಟೆಗಳಿಂದ ಅಲಂಕರಿಸಲಾಗಿತ್ತು. ಬಳಿಕ ಲಕ್ಷ್ಮಿಕಾಂತಸ್ವಾಮಿ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿದ ನಂತರ ಭಕ್ತರು ಶ್ರೀನಿವಾಸ, ಗೋವಿಂದ ನಾಮಸ್ಮರಣೆಯೊಂದಿಗೆ ರಥ ಎಳೆದು ದೇವರಿಗೆ ಹಣ್ಣು ಜವನ ಅರ್ಪಿಸಿ ಭಕ್ತಿಭಾವ ಮೆರೆದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ರಥೋತ್ಸವ ಸ್ವಸ್ಥಾನ ತಲುಪಿತು. ಭಕ್ತರಿಗೆ ಅನ್ನದಾನದ ವ್ಯವಸ್ಥೆ ಮಾಡಲಾಗಿತ್ತು.

ಡಿ.ದೇವರಾಜ ಅರಸರ ಸಿದ್ಧಾಂತಕ್ಕೆ ಬದ್ಧರಾಗಿರುವ ಅಭ್ಯರ್ಥಿಗೆ ಬೆಂಬಲ

ಅರಸು ಅಭಿಮಾನಿ ವೇದಿಕೆ ಅಧ್ಯಕ್ಷ ಬಿಳಿಕೆರೆ ರಾಜು

ಹುಣಸೂರು, ಏ.8– ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸರ ತತ್ವ ಸಿದ್ಧಾಂತಕ್ಕೆ ಬದ್ಧರಾಗಿರುವ ಉತ್ತಮ ಅಭ್ಯರ್ಥಿಯನ್ನು ದೇವರಾಜ ಅರಸು ಅಭಿಮಾನಿ ವೇದಿಕೆ ಬೆಂಬಲಿಸಲಿದೆ ಎಂದು ವೇದಿಕೆ ಅಧ್ಯಕ್ಷ ಬಿಳಿಕೆರೆ ರಾಜು ತಿಳಿಸಿದರು.

ಪಟ್ಟಣದ ಎಸ್‌ಎಲ್‌ವಿ ಲಕ್ಷ್ಮಣರಾವ್ ಗುಪ್ತ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹುಣಸೂರು ಕ್ಷೇತ್ರದಿಂದ 5 ಬಾರಿ ಗೆದ್ದು ರಾಜ್ಯದ ಮುಖ್ಯಮಂತ್ರಿಯಾಗಿ ಬಡವರು ಸೇರಿದಂತೆ ಸಣ್ಣಪುಟ್ಟ ಸಮುದಾಯದವರ ಏಳಿಗೆಗಾಗಿ ದುಡಿದ ಧೀಮಂತ ನಾಯಕ ಡಿ.ದೇವರಾಜ ಅರಸು ಅವರು ಉಳುವವನಿಗೆ ಭೂಮಿ, ಜೀತ ಪದ್ಧತಿ ರದ್ದು ಸೇರಿದಂತೆ ಇನ್ನೂ ಹಲವು ಯೋಜನೆಗಳನ್ನು ಜಾರಿಗೊಳಿಸಿದವರು ಎಂದರು.

ಇಂತಹ ಮಹಾನ್ ನಾಯಕನ ಹೆಸರಿನಲ್ಲಿರುವ ದೇವರಾಜ ಅರಸು ಅಭಿಮಾನಿ ವೇದಿಕೆ ಅರಸರ ಆದರ್ಶ ಹೊಂದಿರುವ ಅಭ್ಯರ್ಥಿಗೆ ತನ್ನ ಬೆಂಬಲ ಸೂಚಿಸಲಿದೆ ಎಂದರು.



ಸಭೆಯಲ್ಲಿ ಚೆಟ್ಟೀಗೌಡ, ಬಿಳಿಕೆರೆ ವಿಎಸ್‌ಎಸ್‌ಎನ್ ಸದಸ್ಯ ಶಿವಣ್ಣೇಗೌಡ, ವೇದಿಕೆ ಸದಸ್ಯ ಲಕ್ಷ್ಮಣ್, ಕಸಾಪ ಮಾಜಿ ಅಧ್ಯಕ್ಷ ವಿ.ಪಿ.ಸಾಯಿನಾಥ್, ನಾಯಕ ಸಮಾಜದ ತಾಲೂಕು ಅಧ್ಯಕ್ಷ ಕೆ.ಎಸ್.ಅಣ್ಣಯ್ಯನಾಯಕ, ವಿಶ್ವಕರ್ಮ ಸಮಾಜದ ಮುಖಂಡ ರಾಜಚಾರಿ, ಚಿಕ್ಕಬೀಚನಹಳ್ಳಿ ಗ್ರಾಪಂ ಅಧ್ಯಕ್ಷ ಬಸವರಾಜು, ಮಾಜಿ ಗ್ರಾಪಂ ಉಪಾಧ್ಯಕ್ಷ ಕಾಂತರಾಜು, ದೇವದುರ್ಗ ಸಂಘದ ಕಾರ್ಯದರ್ಶಿ ಗಣಪತಿರಾವ್ ಹಾಗೂ ಮಹದೇವು ಸೇರಿದಂತೆ 500ಕ್ಕೂ ಹೆಚ್ಚು ಮಂದಿ ಇದ್ದರು.


ಅದ್ದೂರಿ ಶ್ರೀಕೋದಂಡರಾಮ ಬ್ರಹ್ಮ ಮಹಾರಥೋತ್ಸವ

ಬನ್ನೂರು, ಏ.8– ಪಟ್ಟಣದಲ್ಲಿ ಶ್ರೀಕೋದಂಡ ರಾಮ ದೇವರ ಬ್ರಹ್ಮ ಮಹಾರಥೋತ್ಸವ ಶನಿವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮುಂಜಾನೆ 6 ಗಂಟೆಗೆ ರಥ ಸಾಗುವ ರಾಜಬೀದಿಯಲ್ಲಿ ಶ್ರೀಕೋದಂಡರಾಮ ದೇವರ ತೀರ್ಥ ಹಾಕುವ ಮೂಲಕ ರಸ್ತೆಯನ್ನು ಶುದ್ಧಗೊಳಿಸಲಾಯಿತು. ನಂತರ ಬಣ್ಣಬಣ್ಣದ ಪತಾಕೆಯಿಂದ ಕಂಗೊಳಿಸುತ್ತಿದ್ದ ರಥಕ್ಕೆ ಕಳಸ ಪ್ರತಿಷ್ಠಾಪಿಸಿ, ಮಂಗಳವಾದ್ಯದೊಂದಿಗೆ ಹೂನಿಂದ ಅಲಂಕೃತಗೊಂಡ ಶ್ರೀಕೋದಂಡರಾಮ ದೇವರ ಉತ್ಸವ ಮೂರ್ತಿಯನ್ನು ರಥದ ಸುತ್ತ ಪ್ರದಕ್ಷಿಣೆ ಹಾಕಿಸಿ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಬಳಿಕ ನೆರೆದಿದ್ದ ಸಾವಿರಾರು ಭಕ್ತರ ಉದ್ಘೋಷದ ನಡುವೆ ಜೈ ಶ್ರೀರಾಮ್, ಜೈ ಹನುಮಾನ್ ಎಂದು ಕೂಗುತ್ತ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ರಥೋತ್ಸವದ ವೇಳೆ ಯುವಕರು ನೃತ್ಯ ಮಾಡುವ ಮೂಲಕ ಸಾರ್ವಜನಿಕರ ಗಮನ ಸೆಳೆದರು. ತೇರಿನ ಬೀದಿ ಮೂಲಕ ಹೊರಟ ರಥ ಮಧ್ಯಾಹ್ನ 12 ಗಂಟೆಗೆ ದೊಡ್ಡಂಗಡಿ ಬೀದಿ ಮೂಲಕ ಸಾಗಿ ಸ್ವಸ್ಥಾನ ಸೇರಿತು. ವಿವಿಧ ಸಂಘಗಳು ಭಕ್ತರಿಗೆ ಮಜ್ಜಿಗೆ, ಪಾನಕ ವಿತರಿಸಿದವು. ಅಲ್ಲದೇ ಬಸ್ ನಿಲ್ದಾಣದ ಬಳಿ ಹರಕೆ ಹೊತ್ತ ಭಕ್ತರು ಪ್ರಸಾದ ವಿತರಣೆ ಮಾಡಿದರು.

ಇದೇ ವೇಳೆ ಪೊಲೀಸರು ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು. ರಥೋತ್ಸವ ಅಂಗವಾಗಿ ರಸ್ತೆ ಮಧ್ಯ ಹಾದು ಹೋಗಿದ್ದ ವಿದ್ಯುತ್ ತಂತಿ, ಕೇಬಲ್‌ಗಳನ್ನು ತಾತ್ಕಾಲಿಕವಾಗಿ ತೆರವುಗೊಳಿಸಿ, ರಥ ಸಾಗಿದ ನಂತರ ಮರುಜೋಡಣೆ ಮಾಡಲಾಯಿತು. ಪ್ರಧಾನ ಅರ್ಚಕ ಕೃಷ್ಣಸ್ವಾಮಿ, ಶ್ರೀನಿವಾಸ್, ನಾಡಗೌಡ ಪಾರ್ಥಸಾರಥಿ, ರಮೇಶ್, ವಿಜಯ್‌ಕುಮಾರ್ ಸೇರಿದಂತೆ ಇತರರಿದ್ದರು.





ಹೆಚ್.ಡಿ.ಕೋಟೆ ತಾಲೂಕಿನ ಕ್ಯಾತನಹಳ್ಳಿ ಗ್ರಾಮದ ಕಾಂಗ್ರೆಸ್ ಯುವ ಮುಖಂಡ ನರ್ಸರಿ ಚಲುವರಾಜು ಹೊರ ತಂದಿರುವ ಟಿ–ಶರ್ಟ್ ಅನ್ನು ಶಾಸಕ ಅನಿಲ್ ಚಿಕ್ಕಮಾದು ಬಿಡುಗಡೆಗೊಳಿಸಿದರು. ಈ ವೇಳೆ ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಕೆಪಿಸಿಸಿ ಪ.ಪಂಗಡ ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗರಾಜು, ರಾಜ್ಯ ಸಂಶೋಧಕರ ಸಂಘದ ಅಧ್ಯಕ್ಷ ಎಸ್.ಮರಿದೇವಯ್ಯ, ಗ್ರಾಪಂ ಸದಸ್ಯ ಎಸ್.ಶಿವರಾಜು, ಪ್ರಸನ್ನ, ಕೃಷ್ಣಮೂರ್ತಿ ಎಂ.ಗಿರೀಶ್, ಬೀರೇಶ್, ಸಿದ್ದಪ್ಪ, ಜ್ಯೋತಿರ್ಲಿಂಗು, ಸೋಮು ಹಾಜರಿದ್ದರು.



ಸರಗೂರಿನ ಶ್ರೀಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಶ್ರೀರಾಮನವಮಿ ಅಂಗವಾಗಿ ನಡೆದ ವಿಶೇಷ ಪೂಜೆಯಲ್ಲಿ ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ತೊಗಟವೀರ ಕ್ಷತ್ರಿಯ ನೇಕಾರ ಸಮಾಜದ ಅಧ್ಯಕ್ಷ ಎಸ್.ವಿ.ರವಿಕುಮಾರ್, ಗೌರವಾಧ್ಯಕ್ಷ ಬಾಲಸುಬ್ರಹ್ಮಣ್ಯ, ಯಜಮಾನರಾದ ತಿಮ್ಮಶೆಟ್ಟಿ, ಎಸ್.ಎನ್.ರಾಜಣ್ಣ, ವೇಣುಗೋಪಾಲ್, ಕಾರ್ಯದರ್ಶಿ ರಂಗಧಾಮು, ಮುಖಂಡರಾದ ರವೀಂದ್ರ ಪ್ರಸಾದ್, ಹೆಚ್.ವಿ.ಶ್ರೀನಿವಾಸ್, ಗೋಪಾಲಕೃಷ್ಣಶೆಟ್ಟಿ, ವೆಂಕಟಪ್ಪ, ಪುನಿ, ಅಪ್ಪಾಜಿ ಇನ್ನಿತರರಿದ್ದರು.

ಹುಣಸೂರಲ್ಲಿ ತೆನೆ ಇಳಿಸಿ 'ಕೈ' ಹಿಡಿದ ಮುಖಂಡರು

ಹುಣಸೂರು, ಏ.8– ತಾಲೂಕಿನ ಕೊತ್ತೇಗಾಲ ಗ್ರಾಪಂ ಮಾಜಿ ಅಧ್ಯಕ್ಷ ಮತ್ತು ಯಶೋಧರಪುರ ಗ್ರಾಮದ ಯಜಮಾನ ರಾಜು ಹಾಗೂ ಅವರ ಪುತ್ರ ಆರ್. ವೆಂಕಟೇಶ್ ತಮ್ಮ ಬೆಂಬಲಿಗರೊಂದಿಗೆ ಜೆಡಿಎಸ್ ತೊರೆದು ಶಾಸಕ ಹೆಚ್.ಪಿ.ಮಂಜುನಾಥ್ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.



ಮುಖಂಡ ರಾಜು ಮಾತನಾಡಿ, ಕಳೆದ 25 ವರ್ಷಗಳಿಂದ ನಾನು ಜೆಡಿಎಸ್ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೆ. ಆದರೆ ಇತ್ತೀಚಿನ ಬೆಳವಣಿಗೆಗಳಿಂದ ಬೇಸತ್ತು ನಾನು ಶಾಸಕ ಹೆಚ್.ಪಿ.ಮಂಜುನಾಥ್ ಕಾರ್ಯವೈಖರಿ ಮೆಚ್ಚಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದೇನೆ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರುವುದು ಖಚಿತವಾಗಿದ್ದು, ಮಂಜುನಾಥ್ ಸಚಿವರಾಗಿ ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ. ಹೀಗಾಗಿ ಅವರನ್ನು ಬೆಂಬಲಿಸಿ ನಾನು ಕಾಂಗ್ರೆಸ್‌ಗೆ ಸೇರ್ಪಡೆಯಾಗುತ್ತಿದ್ದೇನೆ ಎಂದರು.


ಈ ವೇಳೆ ಗ್ರಾಮದ ಮುಖಂಡರಾದ ಜಿ.ವಿಠಲ್, ಗಂಗಾಧರ್ ಸೇರಿದಂತೆ ಇತರರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು. ಕಾಂಗ್ರೆಸ್ ಮುಖಂಡರಾದ ಪೊಳ್ಳಯ್ಯ, ಶಶಿ, ವೆಂಕಟೇಶ್, ಸತೀಶ್ ಇತರರಿದ್ದರು.

ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಿ

ಕಾರ್ಯಕರ್ತರಿಗೆ ಮುಖಂಡ ದೊಡ್ಡಸ್ವಾಮೇಗೌಡ ಮನವಿ

ಕೆ.ಆರ್.ನಗರ, ಏ.8– ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಗೆಲುವಿಗೆ ಶ್ರಮಿಸುವಂತೆ ಮುಖಂಡ ದೊಡ್ಡಸ್ವಾಮೇಗೌಡ ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಪಟ್ಟಣದ ನಾಮಧಾರಿಗೌಡ ಸಮುದಾಯ ಭವನದಲ್ಲಿ ನಡೆದ ಸ್ವಾಭಿಮಾನಿ ನಾಮಧಾರಿಗೌಡ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ನಮಗೆ ಅಧಿಕಾರ ಇರಲಿ, ಇಲ್ಲದಿರಲಿ ತಾಲೂಕಿನ ಜನತೆಗೆ ನಮ್ಮ ಕೈಲಾದ ಸಹಾಯ ಮಾಡುವ ಜೊತೆಗೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ವೇಳೆ ತಾಲೂಕಿನ ಸರ್ವ ಜನಾಂಗಕ್ಕೂ ಸಮಾನವಾಗಿ ಅನುದಾನ ನೀಡಲಾಗಿದೆ ಎಂದರು.



ನಾಮಧಾರಿಗೌಡ ಸಮುದಾಯವನ್ನು '2ಎ'ಗೆ ಸೇರ್ಪಡೆಗೊಳಿಸಲು ಕುರುಬ ಸಮುದಾಯವೇ ಅಡ್ಡಿಯಾಗಿದೆ ಎಂಬ ಶಾಸಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 15 ವರ್ಷ ಶಾಸಕರಾಗಿದ್ದು ಯಾರು? ನಾನು ಅಥವಾ ನನ್ನ ಮಗ ಡಿ.ರವಿಶಂಕರಾ ಎಂದು ಪ್ರಶ್ನಿಸಿದ ದೊಡ್ಡಸ್ವಾಮೇಗೌಡ, ನಿಮ್ಮ ಜೆಡಿಎಸ್ ಪಕ್ಷದವರೇ ಪ್ರಧಾನಿ, ಮುಖ್ಯಮಂತ್ರಿಯಾಗಿದ್ದು, ನೀವು ಸಚಿವರಾಗಿದ್ದ ವೇಳೆ ಏಕೆ ನಾಮಧಾರಿಗೌಡ ಸಮುದಾಯವನ್ನು 2ಎ ವರ್ಗಕ್ಕೆ ಸೇರಿಸಲಿಲ್ಲ ಎಂದು ಶಾಸಕರ ವಿರುದ್ಧ ವಾಗ್ದಾಳಿ ನಡೆಸಿದರು.

ಮೀಸಲಾತಿ ಹೆಸರಿನಲ್ಲಿ ನಾಮಧಾರಿಗೌಡ ಸಮುದಾಯವನ್ನು ವಂಚಿಸುತ್ತಿರುವ ನಿಮ್ಮ ಕುತಂತ್ರ ಈ ಚುನಾವಣೆಯಲ್ಲಿ ನಡೆಯುವುದಿಲ್ಲ. ನಮ್ಮನ್ನು ಟೀಕಿಸುವ ಬದಲು ನೀವು ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟು ಮತಯಾಚಿಸಿ. ಅದನ್ನು ಬಿಟ್ಟು ಇಲ್ಲಸಲ್ಲದ ಆರೋಪ ಮಾಡಿದರೆ ಕ್ಷೇತ್ರದ ಜನ ನಿಮ್ಮನ್ನು ಕ್ಷಮಿಸುವುದಿಲ್ಲ ಎಂದರು.

ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಮಾತನಾಡಿ, ನಮ್ಮ ಹಾಗೂ ನಾಮಧಾರಿ ಸಮುದಾಯದ ಸಂಬಂಧ ಹಳೆಯದಾಗಿದ್ದು, ಈ ಹಿಂದೆ ಸಾಲಿಗ್ರಾಮ ಜಿಪಂ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ನನಗೆ ಅತೀ ಹೆಚ್ಚು ಮತ ನೀಡುವ ಮೂಲಕ ರಾಜಕೀಯ ಜೀವನ ನೀಡಿದ್ದು, ಈ ಸಮುದಾಯ. ಆದ್ದರಿಂದ ಈ ಸಮುದಾಯಕ್ಕೆ ತಾಪಂ ಅಧ್ಯಕ್ಷ, ತಾಲೂಕು ಬೋರ್ಡ್ ಮತ್ತು ತಾಲೂಕು ಮಹಿಳಾ ಅಧ್ಯಕ್ಷೆ, ತಾಲೂಕು ಕಾಂಗ್ರೆಸ್ ಉಪಾಧ್ಯಕ್ಷ ಸ್ಥಾನ ಸೇರಿದಂತೆ ಇನ್ನೂ ಹೆಚ್ಚು ಅಧಿಕಾರ ನೀಡಿದ್ದೇವೆ ಎಂದು.

ಈ ಬಾರಿಯ ಚುನಾವಣೆಯಲ್ಲಿ ನನ್ನನ್ನು ಶಾಸಕನನ್ನಾಗಿ ಆಯ್ಕೆ ಮಾಡಿ ವಿಧಾನಸೌಧಕ್ಕೆ ಕಳುಹಿಸಿದ್ದೇ ಆದರೆ ಪ್ರಥಮ ವಿಧಾನ ಸಭಾ ಅಧಿವೇಶನದಲ್ಲೇ ನಾಮಧಾರಿಗೌಡ ಸಮುದಾಯವನ್ನು '2ಎ' ವರ್ಗಕ್ಕೆ ಸೇರಿಸಲು ವಿಷಯ ಪ್ರಸ್ತಾಪಿಸುತ್ತೇನೆ ಎಂದು ಕಾಂಗ್ರೆಸ್ ಸ್ವಾಭಿಮಾನಿ ನಾಮಧಾರಿಗೌಡ ಸಮುದಾಯಕ್ಕೆ ಭರವಸೆ ನೀಡಿದರು.

ಕಾರ್ಯಕ್ರಮ ಉದ್ದೇಶಿಸಿ ಸಮುದಾಯದ ತಾ.ಅಧ್ಯಕ್ಷ ಅಶೋಕ್, ಸುನೀತಾ ರವಿಶಂಕರ್, ನೀಲಕಂಠೇಗೌಡ, ಮಧು, ಗಿರೀಶ್, ಸುಮಂತ್ ಇನ್ನಿತರರು ಮಾತನಾಡಿದರು. ವೇದಿಕೆಯಲ್ಲಿ ಮುಖಂಡರಾದ ಚನ್ನ ಅರಸೇಗೌಡ, ಶಶಿಧರ, ವಿಠಲ್, ಕಾಂತರಾಜು, ರಮೇಶ್, ಸುಮಂತ್, ಸುರೇಶ್, ರಮೇಶ್, ಲತಾ, ಲೋಕೇಶ್, ತಾಂಡವಮೂರ್ತಿ, ಶಮಂತ್ ಸೇರಿದಂತೆ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ

ಸ್ಕ್ರೀನ್ 2 ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 3 ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.

ಸ್ಕ್ರೀನ್ 4 ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 2 ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.

ಸ್ಕ್ರೀನ್ 3 ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.

ಸ್ಕ್ರೀನ್ 4 ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ರಾವಣಸುರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಹೊಯ್ಸಳ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪ್ರದರ್ಶನ ಇರುವುದಿಲ್ಲ	
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾವಣಸುರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ವೀರಂ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
1947 (ತ)	4 ಪ್ರದರ್ಶನಗಳು
ಸಂಗಂ	
ರಾವಣಸುರ (ತೆ)	4 ಪ್ರದರ್ಶನಗಳು
ಲಿಡೋ	
ಕಬ್ಜ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೀರಂ (ಕ)	4 ಪ್ರದರ್ಶನಗಳು
ಪ್ರಭಾ	
ವೀರಂ (ಕ)	4 ಪ್ರದರ್ಶನಗಳು



ಹುಣಸೂರು ತಾಲೂಕಿನ ಕಟ್ಟೆಮಳಲವಾಡಿಯಲ್ಲಿ ಈಗಾಗಲೇ ಮದ್ಯದಂಗಡಿ ಇದ್ದು ಮತ್ತೊಂದು ಮದ್ಯದಂಗಡಿ ತೆರೆಯದಂತೆ ಹುಣಸೂರು ಅಬಕಾರಿ ನಿರೀಕ್ಷಕ ನಾಗಲಿಂಗಸ್ವಾಮಿ ಅವರಿಗೆ ಕಟ್ಟೆಮಳಲವಾಡಿ ಗ್ರಾಮಸ್ಥರು ಹಾಗೂ ಗ್ರಾಪಂ ಸದಸ್ಯರು ಮನವಿ ಸಲ್ಲಿಸಿದರು. ಈ ವೇಳೆ ಮುಖಂಡ ನಿಂಗರಾಜ ಮಲ್ಲಾಡಿ, ದೇವರಾಜ್ ಮಲ್ಲಾಡಿ, ದಸಂಸ ದೇವೇಂದ್ರ, ಕೆಂಪರಾಜು, ಗ್ರಾಮದ ಯಜಮಾನರಾದ ಪಿ.ಪುಟ್ಟರಾಜು, ರಾಜು, ಗ್ರಾಪಂ ಸದಸ್ಯರಾದ ನಟರಾಜು, ತಗಡಯ್ಯ, ಕಿರಣ್ ಕುಮಾರ್, ಚಂದ್ರ, ಪ್ರಕಾಶ, ಸಂತೋಷ್ ಇತರರಿದ್ದರು.



ಮೈಸೂರು ತಾಲೂಕಿನ ಜಯಪುರದಲ್ಲಿ ತಾಲೂಕು ಸ್ವೀಪ್ ಸಮಿತಿ ಮೈಸೂರು ಸಹಯೋಗದೊಂದಿಗೆ ಮತದಾರರು ಕಡ್ಡಾಯವಾಗಿ ಮತದಾನ ಮಾಡುವಂತೆ ಜಾಗೃತಿ ಜಾಥಾ ನಡೆಸಲಾಯಿತು. ಜಯಪುರ ಸರ್ಕಾರಿ ಶಾಲೆ ಮಕ್ಕಳು ಜಾಥಾದಲ್ಲಿ ಪಾಲ್ಗೊಂಡಿದ್ದರು. ಗ್ರಾಪಂ ಲೆಕ್ಕ ಸಹಾಯಕ ಆನಂದೇಗೌಡ, ಗ್ರಂಥಾಲಯ ಮೇಲ್ವಿಚಾರಕ ಎಸ್.ಸೋಮೇಗೌಡ, ಮುರುಡಪ್ಪ ಮತ್ತು ಶಾಲಾ ಶಿಕ್ಷಕರಿದ್ದರು.

ಕುಡಿದ ಅಮಲಿನಲ್ಲಿ ವೃಷಣವನ್ನೇ ಕತ್ತರಿಸಿಕೊಂಡ ಭೂಪ!

ಹುಣಸೂರು, ಏ.8– ಕುಡಿದ ಅಮಲಿನಲ್ಲಿ ವ್ಯಕ್ತಿಯೋರ್ವ ತನ್ನ ವೃಷಣವನ್ನೇ ಕೊಯ್ದುಕೊಂಡು ವಿಕೃತಿ ಮೆರೆದಿರುವ ಘಟನೆ ನಡೆದಿದೆ. ಹುಣಸೂರು ತಾಲೂಕಿನ ತೊಂಡಾಳು ಗ್ರಾಮದ ರಾಜಶೆಟ್ಟಿ(41) ವೃಷಣ ಕತ್ತರಿಸಿಕೊಂಡಾತ, ಇದೀಗ ಕೆ.ಆರ್.ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಈತ ಪತ್ನಿ ನಿಧನ ನಂತರ ಇಬ್ಬರು ಮಕ್ಕಳೊಂದಿಗೆ ವಾಸವಿದ್ದ, ಕುಡಿತಕ್ಕೆ ದಾಸನಾಗಿದ್ದ ರಾಜಶೆಟ್ಟಿ, ಕೆ.ಆರ್.ನಗರ ಬಾರ್‌ನಲ್ಲಿ ಮದ್ಯ ಸೇವಿಸಿ ಚಾಕುವಿನಿಂದ ತನ್ನ ವೃಷಣವನ್ನು ಕೊಯ್ದುಕೊಂಡು ಅಸ್ವಸ್ಥನಾಗಿದ್ದನ್ನು ಕಂಡವರು ಕೆ.ಆರ್.ನಗರದ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಮೈಸೂರು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದು, ಕೆ.ಆರ್.ಆಸ್ಪತ್ರೆ ವೈದ್ಯರು ಸೂಕ್ತ ಚಿಕಿತ್ಸೆ ನೀಡಿದ್ದು ಚೇತರಿಸಿಕೊಳ್ಳುತ್ತಿದ್ದಾನೆ.

ಶ್ರೀನಿವಾಸ್ ನಿಧನ

ಬೆಟ್ಟದಪುರ, ಏ.8– ಇಲ್ಲಿಗೆ ಸಮೀಪದ ಚಿಕ್ಕನೇರಳೆ ಗ್ರಾಮದ ಮಾಜಿ ಗ್ರಾಪಂ ಅಧ್ಯಕ್ಷ ವೆಂಕಟೇಶ್ ಅವರ ಪುತ್ರ ಮೈಸೂರು ಮಹಾರಾಜ ಕಾಲೇಜಿನ ಉಪನ್ಯಾಸಕ ಶ್ರೀನಿವಾಸ್ (40) ನಿಧನರಾಗಿದ್ದಾರೆ. ಮೃತರು ತಂದೆ, ತಾಯಿ, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಚಿಕ್ಕನೇರಳೆ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಲ್ಲಿಕಾರ್ಜುನ ಖರ್ಗೆ ಸಿಎಂ ಆದರೆ ಅವರೊಂದಿಗೆ ಕೆಲಸ ಮಾಡಲು ಸಿದ್ಧ

● ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟೋಕ್ತಿ ● ಅಭ್ಯರ್ಥಿಗಳ ಆಯ್ಕೆಯಲ್ಲಿ ಅಸಮಾಧಾನ ಸಹಜ; ಅದು ಸರಿ ಹೋಗ್ತದೆ



ಬೆಂಗಳೂರು,ಏ.8–ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಸ್ಥಾನಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಡುವೆ ಜಟಾಪಟಿ ನಡೆಯುತ್ತಿರುವ ಬೆನ್ನಲ್ಲೇ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರನ್ನು ಡಿ.ಕೆ. ಶಿವಕುಮಾರ್ ಮುನ್ನೆಲೆಗೆ ತಂದಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ನನ್ನ ನಾಯಕರು, ಅವರೇ ನನ್ನ ಅಧ್ಯಕ್ಷರು. ಖರ್ಗೆ ಅವರು ನನಗಿಂತ 20 ವರ್ಷ ಹಿರಿಯರು. ಅವರ ಹಿರಿತನ, ತ್ಯಾಗಕ್ಕೆ ನಾವು ಗೌರವ ನೀಡಬೇಕು. ಒಂದು ವೇಳೆ ಅವರು ಮುಖ್ಯಮಂತ್ರಿಯಾದರೆ ಅವರ ಜತೆ ಕೆಲಸ ಮಾಡಲು ನಾನು ಸಿದ್ಧನಿದ್ದೇನೆ ಎಂದು ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರು ನಮ್ಮ ರಾಜ್ಯ ಹಾಗೂ ದೇಶಕ್ಕೆ ಆಸ್ತಿ. ಪಕ್ಷ ಯಾವ ತೀರ್ಮಾನ ಮಾಡುತ್ತದೆಯೋ ನಾನು ಅದಕ್ಕೆ ಬದ್ಧನಾಗಿರುತ್ತೇನೆ. ಅವರು ಪಕ್ಷಕ್ಕಾಗಿ ಅನೇಕ ತ್ಯಾಗ ಮಾಡಿದ್ದಾರೆ. ಮಧ್ಯರಾತ್ರಿ ತಮ್ಮ ಶಾಸಕಾಂಗ ಪಕ್ಷದ ನಾಯಕತ್ವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಬ್ಲಾಕ್ ಅಧ್ಯಕ್ಷರಾಗಿದ್ದವರು ಹಂತ ಹಂತವಾಗಿ ಬೆಳೆದು ಇಂದು ಎಐಸಿಸಿ ಅಧ್ಯಕ್ಷರಾಗಿದ್ದು, ಇದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಸಾಧ್ಯ. ಖರ್ಗೆ ಅವರು ಮುಖ್ಯಮಂತ್ರಿಯಾದರೆ ಅವರ ಜತೆ ಸಂತೋಷದಿಂದ ಕೆಲಸ ಮಾಡುತ್ತೇನೆ ಎಂದರು.

ಪಕ್ಷದಲ್ಲಿ ಟಿಕೆಟ್ ಅಸಮಾಧಾನದ ಬಗ್ಗೆ ಪ್ರತಿಕ್ರಿಯಿಸಿದ ಅವರು, ನಾವು ಎಲ್ಲರ ಜತೆ ಮಾತನಾಡುತ್ತಿದ್ದೇವೆ. ರಾಜಕಾರಣದಲ್ಲಿ ಆಸೆ ಸಹಜ. ಆದರೆ, ನಾವು ಎಲ್ಲರಿಗೂ ಅವಕಾಶ ನೀಡಲು ಸಾಧ್ಯವಿಲ್ಲ. ರಾಜಕೀಯ ಎಂದರೆ ಅಧಿಕಾರ ಹಂಚಿ ಸಹಕಾರ ನೀಡುವುದಾಗಿದೆ. ಹೀಗಾಗಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಧಿಕಾರವನ್ನು ಹಂಚಲಾಗುವುದು. ಈ ಕಾರಣಕ್ಕಾಗಿ ಎಲ್ಲರೂ ಸಮಾಧಾನವಾಗಿ ಇರಬೇಕು ಎಂದು ಕೇಳುತ್ತಿದ್ದೇವೆ. ತಮ್ಮ ಆಕ್ರೋಶ, ಅಭಿಮಾನ ತಪ್ಪೇನಿಲ್ಲ. ಐದಾರು ವರ್ಷಗಳಿಂದ ದುಡಿದಿರುತ್ತಾರೆ. ಬೇರೆ ಪಕ್ಷದಿಂದ ಬಂದವರಿಗೆ ಟಿಕೆಟ್ ಕೊಟ್ಟಾಗ ಅಸಮಾಧಾನ ಸಹಜ ಎಂದರು.

ಪಕ್ಷದ ಟಿಕೆಟ್ ಅನ್ನು ಸಮೀಕ್ಷೆ ಆಧಾರದ ಮೇಲೆ ನೀಡಲಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ, ನಮ್ಮಲ್ಲಿ 78 ಲಕ್ಷ ಸದಸ್ಯರಿದ್ದಾರೆ. ಪ್ರತಿ ಬ್ಲಾಕ್‌ನಲ್ಲಿ ನಮ್ಮದೇ ಆದ 3–4 ಸಮೀಕ್ಷೆ ತಂಡಗಳಿವೆ. ಕೆಪಿಸಿಸಿ ಹಾಗೂ ಎಐಸಿಸಿ ಸಮೀಕ್ಷೆ ಇವೆ. ಬ್ಲಾಕ್ ಕಾಂಗ್ರೆಸ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ಎಲ್ಲ ಕ್ಷೇತ್ರಗಳಿಗೆ ವೀಕ್ಷಕರು ಇದ್ದಾರೆ. ಚುನಾವಣಾ ಸಮಿತಿ ಸದಸ್ಯರನ್ನು ಅದೇ ಕ್ಷೇತ್ರಕ್ಕೆ ಕಳುಹಿಸಿ ಕಾರ್ಯಕರ್ತರು ಹಾಗೂ ಅಭ್ಯರ್ಥಿಗಳ ಜತೆ ಚರ್ಚೆ ಮಾಡಿದ್ದಾರೆ. ಟಿಕೆಟ್ ಆಕಾಂಕ್ಷಿಗಳಿಂದ ಅರ್ಜಿ ಸಂಗ್ರಹಿಸಿದ್ದೇವೆ.

ಏ.16ರಂದು ಕೋಲಾರಕ್ಕೆ ರಾಹುಲ್ ಗಾಂಧಿ



ರಾಹುಲ್ ಗಾಂಧಿ ಅವರು ಈಗಾಗಲೇ ಬೆಳಗಾವಿಗೆ ಬಂದು ನಮ್ಮ ಯುವನಿಧಿ ಯೋಜನೆ ಪ್ರಕಟಿಸಿ ಯುವ ಸಮುದಾಯಕ್ಕೆ ಸಂದೇಶ ರವಾನಿಸಿದ್ದರು. ರಾಹುಲ್ ಗಾಂಧಿ ಅವರಿಗೆ ಬಿಜೆಪಿಯವರು ಹೆದರಿ ಅವರನ್ನು ಸಂಸತ್ ಸದಸ್ಯತ್ವದಿಂದ ವಜಾಗೊಳಿಸಿದ್ದಾರೆ. ಒಂದು ಭಾಷಣದ ವಿಚಾರವಾಗಿ ಇದೇ ಮೊದಲ ಬಾರಿಗೆ 2 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ. ಅಲ್ಲದೆ ತೀರ್ಪು ಬಂದ 24 ಗಂಟೆಗಳಲ್ಲಿ ಅವರನ್ನು ಸಂಸತ್ ಸದಸ್ಯತ್ವದಿಂದ ಅನರ್ಹ ಮಾಡಲಾಗಿದೆ. ಯಾವುದೇ ಅರ್ಜಿ ಹಾಕದೇ, ನೋಟೀಸ್ ನೀಡದೇ, ಲೋಕಸಭೆ ಸ್ಪೀಕರ್ ಬಿಜೆಪಿ ನಾಯಕರ ಒತ್ತಡಕ್ಕೆ ಮಣಿದು 7 ಲಕ್ಷ ಮತಗಳ ಅಂತರದಲ್ಲಿ ಗೆದ್ದ ನಾಯಕನ ಸಂಸತ್ ಸದಸ್ಯತ್ವವನ್ನು ಅನರ್ಹಗೊಳಿಸಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ದೊಡ್ಡ ಅಪಮಾನ. ರಾಜಕಾರಣ ನಿಂತ ನೀರಲ್ಲ. ಎಲ್ಲವೂ ಪುನರಾವರ್ತನೆಯಾಗಲಿದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ರಾಹುಲ್ ಗಾಂಧಿ ಅವರಿಗೆ ಶಿಕ್ಷೆ ಪ್ರಕಟವಾದ ನಂತರ ಮೊದಲ ಸಾರ್ವಜನಿಕ ಸಭೆಯನ್ನು ಕೋಲಾರದಲ್ಲಿ ಹಮ್ಮಿಕೊಂಡಿದ್ದೇವೆ. ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಒಂದು ವಾರ ಕಾಲ ಮುಂದೂಡುವಂತೆ ಮನವಿ ಮಾಡಿಕೊಂಡಿದ್ದು, ಅದಕ್ಕೆ ರಾಹುಲ್ ಗಾಂಧಿ ಅವರು ಸಮ್ಮತಿ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಜೈ ಭಾರತ ಸತ್ಯಾಗ್ರಹ ಯಾತ್ರೆಯನ್ನು ಏ.16ರಂದು ಆಯೋಜಿಸಲು ತೀರ್ಮಾನಿಸಿದ್ದೇವೆ. ಅದೇ ದಿನ ಕೆಪಿಸಿಸಿ ನೂತನ ಕಟ್ಟಡ ಉದ್ಘಾಟನೆ ಮಾಡಲಾಗುವುದು ಎಂದು ತಿಳಿಸಿದರು.

ನಾವು ಬಿಜೆಪಿಯವರಂತೆ ಡಬ್ಬ ಇಟ್ಟು ಅಲ್ಲಿ ಮತದಾನ ಮಾಡಿಸಿಲ್ಲ. ನಮ್ಮ ಕಾರ್ಯಕರ್ತರ ಜತೆ ಮಾತನಾಡಿದ್ದೇವೆ. ಕೇವಲ ಸರ್ವೇ ಆಧಾರದ ಮೇಲೆ ಟಿಕೆಟ್ ನೀಡಿಲ್ಲ. ಕೆಲವು ಕಡೆ ಸಾಮಾಜಿಕ ನ್ಯಾಯದ ಆಧಾರದ ಮೇಲೆ ಟಿಕೆಟ್ ನೀಡಲಾಗಿದೆ. ನಾನು ಅಧ್ಯಕ್ಷನಾದ ನಂತರ 4 ವಿಧಾನಪರಿಷತ್ ಸದಸ್ಯ ಸ್ಥಾನ ಬಂದಾಗ 2 ಮುಸಲ್ಮಾನರಿಗೆ, 2 ಹಿಂದುಳಿದ ವರ್ಗಗಳಿಗೆ ನೀಡಿದ್ದೇವೆ. ಹೀಗೆ ಸಾಮಾಜಿಕ ನ್ಯಾಯ ಗಮನದಲ್ಲಿಟ್ಟು ಕೊಂಡು ಟಿಕೆಟ್ ಹಂಚಿಕೆ ಮಾಡಿದ್ದೇವೆ. ಈ ಬಾರಿ ಲಿಂಗಾಯತರಿಗೆ ಅತೀ ಹೆಚ್ಚು ಟಿಕೆಟ್ ಸಿಗುವ ಲಕ್ಷಣಗಳು ಗೋಚರಿಸುತ್ತಿವೆ. ನಾವು ಎಲ್ಲ ಕ್ಷೇತ್ರಗಳ ಚರ್ಚೆ ಮುಗಿದಿದ್ದು, ಪಟ್ಟಿ ಪ್ರಕಟಿಸಬೇಕಿದೆ ಎಂದರು.

ಮೇ 22ರಿಂದ ಪಿಯು ಶೈಕ್ಷಣಿಕ ಚಟುವಟಿಕೆ ಆರಂಭ

ಮೈಸೂರು, ಏ.8(ಎಸ್‌ಪಿಎನ್)– 2023–24ನೇ ಸಾಲಿನ ಪಿಯುಸಿ ವಾರ್ಷಿಕ ವೇಳಾಪಟ್ಟಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಪ್ರಕಟಿಸಿದ್ದು, ಈ ವೇಳಾಪಟ್ಟಿಯಂತೆ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸಲು ರಾಜ್ಯದ ಎಲ್ಲಾ ಉಪನಿರ್ದೇಶಕರು ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದ್ದಾರೆ.

ರಾಜ್ಯದ ಆಯಾಯ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ಸರ್ಕಾರಿ/ ಅನುದಾನಿತ, ಅನುದಾನರಹಿತ ಪಿಯು ಕಾಲೇಜುಗಳಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾದ ನಂತರ ಪಿಯು ಕಾಲೇಜು ಪ್ರವೇಶಾತಿ ಚಟುವಟಿಕೆಗಳನ್ನು ಮೇ22ರಿಂದ ಅಧಿಕೃತವಾಗಿ ಆರಂಭಿಸುವಂತೆ ಸೂಚಿಸಿದ್ದಾರೆ. 2023ರ ಜೂ.1ರಿಂದ ಅ.13ರವರೆಗೆ ಮೊದಲ ಶೈಕ್ಷಣಿಕ ಅವಧಿ ಹಾಗೂ ಅ.30ರಿಂದ ಫೆ.29ರವರೆಗೆ 2ನೇ ಶೈಕ್ಷಣಿಕ ಅವಧಿಯನ್ನು ಶಿಕ್ಷಣ ಇಲಾಖೆ ನಿಗದಿಗೊಳಿಸಿದೆ. ವಿದ್ಯಾರ್ಥಿಗಳಿಗೆ ಮಧ್ಯಂತರ ರಜೆಯನ್ನು ಅ.14ರಿಂದ ಅ.29ರವರೆಗೆ ಘೋಷಿಸಿದ್ದು, ಬೇಸಿಗೆ ರಜೆ ಮಾ.31ರಿಂದ ಆರಂಭಗೊಳ್ಳಲಿದೆ ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ನೂತನ ಪದಾಧಿಕಾರಿಗಳು

ಮೈಸೂರು, ಏ. 8– ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ವೇಣುಗೋಪಾಲ್–ಬಳ್ಳಾರಿ (ರಾಜ್ಯ ಉಪಾಧ್ಯಕ್ಷ), ಕೆ.ಶಿವಕುಮಾರ್–ಮೈಸೂರು (ರಾಜ್ಯ ಪ್ರಧಾನ ಕಾರ್ಯದರ್ಶಿ), ಬಿ. ಚಂದ್ರಪ್ಪ–ದಾವಣಗೆರೆ, ಅಂತೋಣಿ ಜಾನ್ಸನ್–ಮೈಸೂರು (ರಾಜ್ಯ ಕಾರ್ಯದರ್ಶಿ), ನಾಗರಾಜು–ಚಿತ್ರದುರ್ಗ (ರಾಜ್ಯ ಸಂಚಾಲಕ), ಡಾ.ಎಂ. ಮೊಗಣ್ಣಚಾರ್–ಮೈಸೂರು (ಖಜಾಂಚಿ).

ರಾಜ್ಯ ನಿರ್ದೇಶಕರು: ಹೂವಯ್ಯ (ಕೊಡಗು), ಲೋಕೇಶ್‌ಕುಮಾರ್ (ಹಾಸನ), ಪುಟ್ಟಮಾದಯ್ಯ (ಮೈಸೂರು), ರಮೇಶ್ (ಹಾವೇರಿ). **ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು:** ಅಂಕಣ್ಣ, ರವಿಕುಮಾರ್, ರಾಜೇಶ್, ಜೋಗಿ, ಪರಶುರಾಮ್.

ಜಿಲ್ಲಾಧ್ಯಕ್ಷರು: ಶಿವಕುಮಾರ್–ಹಾಸನ, ಮೈಲಾರಪ್ಪ–ಚಿತ್ರದುರ್ಗ, ಬಿ.ಆರ್. ಬಸವರಾಜು–ದಾವಣಗೆರೆ, ಸಂತೋಷ್ ಕುಮಾರ್–ಶಿವಮೊಗ್ಗ, ವೀರೇಂದ್ರ–ಕೊಡಗು, ಸುರೇಶ್–ವಿಜಯನಗರ, ಡಿ.ಎಲ್.ಕುಮಾರಾಚಾರಿ–ಚಾಮರಾಜನಗರ, ಅಂಜೇನಪ್ಪ–ತುಮಕೂರು, ರಾಮಪ್ಪ–ಗದಗ, ಜಲಾನಿಮುಕಂದರ–ಹುಬ್ಬಳ್ಳಿ–ಧಾರವಾಡ, ಶಿವಸ್ವಾಮಿ–ಬೆಂಗಳೂರು ಗ್ರಾಮಾಂತರ, ಗುರುಪಾದ ದಾನಣ್ಣನವರ್–ಬೆಳಗಾವಿ, ಕೃಷ್ಣಾಚಾರಿ–ಹಾವೇರಿ, ಅಂಜಿನಯ್ಯ–ಬಳ್ಳಾರಿ, ಶಿವಣ್ಣ–(ಮೈಸೂರು) ಆಯ್ಕೆಗೊಂಡಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಆದರ ಮಾಲೀಕರಾದ, ಬೆಂಗಳೂರು, ಉದಯಪುರ, ಜಯನಗರ ಪಶ್ಚಿಮ, 7ನೇ ಬ್ಲಾಕ್, 4ನೇ ಅಡ್ಡ ರಸ್ತೆ, ನಂಬರ್: 398 ರಲ್ಲಿ ವಾಸವಾಗಿರುವ 1. ಶ್ರೀಮತಿ ಎಂ.ಎ.ವನಿತಾ ಕೋಂ. ಲೇ. ಬಿ.ಎಲ್.ಪಚಣ್ಣ, 2. ಶ್ರೀ ಶ್ರೇನಿಕ್ ಬಿ.ಪಿ. ಜೈನ್ ಬಿನ್. ಲೇ.ಬಿ.ಎಲ್. ಪಚಣ್ಣ, 3. ಶ್ರೀ ಶ್ರೇಯಸ್ ಜೈನ್ ಬಿ.ಪಿ.ಬಿನ್. ಲೇ.ಬಿ.ಎಲ್. ಪಚಣ್ಣ, 4. ಶ್ರೀ ಶ್ರೆಯಂಕ್ ಜೈನ್ ಬಿ.ಪಿ. ಬಿನ್ ಲೇ. ಬಿ. ಎಲ್.ಪಚಣ್ಣ ರವರುಗಳಿಂದ ಖರೀದಿಸಲು ಉದ್ದೇಶಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಶಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ (7) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ನಗರ, ದಟ್ಟಗಳ್ಳಿ 3ನೇ ಹಂತ ಬಡಾವಣೆ, ಇಲ್ಲಿರುವ ಪೂರ್ವ–ಪಶ್ಚಿಮ: 24 ಮೀಟರ್, ಉತ್ತರ–ದಕ್ಷಿಣ: 15 ಮೀಟರ್, ಒಟ್ಟು ವಿಸ್ತೀರ್ಣ: 360 ಚದರ ಮೀಟರ್, ಅಳತೆಯ ನಿವೇಶನ ಸಂಖ್ಯೆ: 5357 ಇದಕ್ಕೆ ಚಕ್ಕುಬಂಧಿ:

ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ : 5311 ಮತ್ತು 5310, ಉತ್ತರಕ್ಕೆ : ನಿವೇಶನ ಸಂಖ್ಯೆ : 5356, ದಕ್ಷಿಣಕ್ಕೆ: ನಿವೇಶನ ಸಂಖ್ಯೆ: 5358

ಸಹಿ/- **ಎಂ.ಎನ್. ಪ್ರಕಾಶ್ ಕಾಳಪ್ಪ**, ವಕೀಲರು, #2–3, ಮೊದಲನೇ ಫ್ಲೋರ್, ಪಿಆರ್‌ಐ ಕಾಂಪ್ಲೆಕ್ಸ್, 67/7ಎ, ನ್ಯೂ ಸಯ್ಯಾಜಿರಾವ್ ರಸ್ತೆ, ಫೋರ್ಟ್ ಮೊಹಲ್ಲಾ, ಮೈಸೂರು. ಮೊ: 9343112535

ಸ್ಥಳ : ಮೈಸೂರು ದಿನಾಂಕ: 08–04–2023



ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನೂ ನನ್ನ ಕಕ್ಷೀದಾರರು ಅದರ ಮಾಲೀಕರಾದ, ನಂಬರ್ 48, ಜಲನ್ ತಂಜುಂಗ್, 5/4 ಪೆಟಲಿಂಗ್ ಜಯ 4600, ಸೆಲಂಗೊರ್, ಮಲೇಶಿಯ, ಇಲ್ಲಿ ವಾಸವಾಗಿರುವ ವಿಜಯ್‌ಕುಮಾರ್ ಶರ್ಮಾ ರವರ ಮಗಳಾದ ಶ್ರೀಮತಿ , ಗಿರಿಜ ಸುಮರ್ ಗಿಲ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಬಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿ ಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ನಗರ, ಚಾಮರಾಜ ಮೊಹಲ್ಲಾ, ಕುವೆಂಪುನಗರ, ಎಸ್.ಡಬ್ಲ್ಯು.ಟಿ ಕೊಪ್ಪಲ್ 3ನೇ ಹಂತ, ಇಲ್ಲಿರುವ ಪೂರ್ವ–ಪಶ್ಚಿಮ: 80ಅಡಿ, ಉತ್ತರ–ದಕ್ಷಿಣ: 120 ಅಡಿ, ಒಟ್ಟು ವಿಸ್ತೀರ್ಣ: 9600 ಚದರಅಡಿ ಅಳತೆಯ ನಿವೇಶನ ಸಂಖ್ಯೆ : 555/P ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ: 555/Q, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ: 555/N, ಉತ್ತರಕ್ಕೆ: ನಿವೇಶನ ಸಂಖ್ಯೆ: 555/E, 555/F, ದಕ್ಷಿಣಕ್ಕೆ: 30 ಮೀಟರ್ ರಸ್ತೆ

Sd/- M.N. Prakash Kalappa, KAR 1996-2000, Advocate & legal consultant, #67/7A. PRI Complex No 2/3, 1st Floor, New Sayyaji Rao Road, Fort Mohalla, Mysuru-570004 Cell: 9343112535, Email: mnprakashkalappa@gmail.com

ಮೈಸೂರು: 07.04.2023

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಸಿಂಧುವಳ್ಳಿ ಅಂಚೆ, ಸಿಂಧುವಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಶಿವಣ್ಣ ರವರ ಧರ್ಮಪತ್ನಿಯಾದ ಶ್ರೀಮತಿ ಸಣ್ಣತಾಯಮ್ಮ ಮತ್ತು ಕುಟುಂಬದವರಿಂದ, ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಖರೀದಿಸಲು ಇಚ್ಛಿಸಿರುತ್ತಾರೆ.

ಆದಾಗಿ, ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಹಕ್ಕು ಭಾಧ್ಯತೆಗಳು, ಹಿತಾಸಕ್ತಿ ಅಥವಾ ಆಕ್ಷೇಪಣೆ ಇದ್ದಂತಹ ಪಕ್ಷದಲ್ಲಿ ಈ ಸಾರ್ವಜನಿಕ ತಿಳುವಳಿಕೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನದಿಂದ 7 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಯನ್ನು ನಮಗೆ ತಿಳಿಸತಕ್ಕದ್ದು. ಒಂದು ವೇಳೆ ಸದರಿ ಅವಧಿಯೊಳಗೆ ಯಾರಿಂದಲೂ ಯಾವುದೇ ವಿಧವಾದ ಆಕ್ಷೇಪಣೆ/ತಕರಾರು ಬಾರದಿದ್ದಂತಹ ಪಕ್ಷದಲ್ಲಿ ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಬೇರೆ ಯಾರಿಗೂ ಹಕ್ಕು ಭಾಧ್ಯತೆಗಳು, ಹಿತಾಸಕ್ತಿ ಅಥವಾ ಆಕ್ಷೇಪಣೆ ಇಲ್ಲವೆಂದು ಭಾವಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಕ್ರಯಪತ್ರ ನೋಂದಣಿ ಮಾಡಿಕೊಳ್ಳುತ್ತಾರೆ. ನಂತರ ಬಂದಂತಹ ಆಕ್ಷೇಪಣೆಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಹಾಗೂ ಅದರಿಂದ ಉಂಟಾಗುವ ನಷ್ಟಗಳಿಗೆ ನೀವುಗಳೇ ಜವಾಬ್ದಾರರಾಗಿರುತ್ತೀರಿ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

1. ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಸಿಂಧುವಳ್ಳಿ ಗ್ರಾಮದ ಸರ್ವೆ ನಂ. 259/2 ರಲ್ಲಿ ವಿಸ್ತೀರ್ಣ 1 ಎಕರೆ 07 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸರ್ವೆ ನಂ. 258 ರ ಜಮೀನು, ಉತ್ತರಕ್ಕೆ: ಸರ್ವೆ ನಂ. 259/1 ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 259/3 ರ ಜಮೀನು.
2. ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಸಿಂಧುವಳ್ಳಿ ಗ್ರಾಮದ ಸರ್ವೆ ನಂ. 259/4 ರಲ್ಲಿ ವಿಸ್ತೀರ್ಣ 00 ಎಕರೆ 20.08 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 259/5 ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 259/3 ರ ಜಮೀನು, ಉತ್ತರಕ್ಕೆ: ಸರ್ವೆ ನಂ. 259/3 ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 309 ರ ಜಮೀನು.

ಶ್ರೀ ಸುನಿಲ್ ಎಂ.ಆರ್. ಬಿ.ಎ.ಎಲ್, ಎಲ್.ಎಲ್.ಬಿ
ವಕೀಲರು
ನಂ. 218/ಕೆ–30, ನಾರಾಯಣಶಾಸ್ತ್ರಿ ರಸ್ತೆ, ಕೆ.ಆರ್. ಮೊಹಲ್ಲಾ, ಮೈಸೂರು
ದಿನಾಂಕ: 08–04–2023

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರ್ಯಾವೆಯ ಮೇರೆಗೆ, ಏನೆಂದರೆ, ಮೆಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರ ಗ್ರಾಮ, ಮನೆ ನಂ .159ರಲ್ಲಿ ವಾಸವಾಗಿರುವ ಲೇಟ್ ಮಹದೇವಪ್ಪ ಮತ್ತು ಶ್ರೀಮತಿ ದೇವಮ್ಮ ಎ. ರವರ ಮಗ ಸುಮಾರು 37 ವರ್ಷ ವಯಸ್ಸಿನ ಮಹೇಶ ಎಂ (ಆಧಾರ್ ನಂ. 3668 6523 7135) ಮತ್ತು ಶ್ರೀ ಮಹೇಶ ಎಂ ರವರ ಧರ್ಮಪತ್ನಿ ಸುಮಾರು 24 ವರ್ಷ ವಯಸ್ಸಿನ ಶ್ರೀಮತಿ ಪ್ರತಿಭಾ (ಆಧಾರ್ ನಂ.9166 5432 6273) ಮತ್ತು ಶ್ರೀ ಮಹೇಶ ಎಂ., ರವರ ಮಗಳು ಸುಮಾರು 6 ವರ್ಷ ವಯಸ್ಸಿನ ಕುಮಾರಿ. ಕೃತಿಕಾ (ಆಧಾರ್ ನಂ. 7244 2579 4069) ಇವರ ಮೈನರ್ ಗಾರ್ಡಿಯನ್ ಆಗಿ ಇವರ ತಂದೆ ಶ್ರೀ ಮಹೇಶ ಎಂ., ರವರಿಗೂ, ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ಮಾರಾಟ ಮಾಡುವ ಸಂಬಂಧ ಒಡಂಬಡಿಕೆಯಾಗಿದ್ದು ಸದರಿ ಜಮೀನನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು ಈಗಾಗಲೇ ಈ ಸಂಬಂಧ ನನ್ನ ಕಕ್ಷಿದಾರರಿಗೆ ಕೆಲವು ದಾಖಲಾತಿಗಳನ್ನು ಹಾಜರು ಮಾಡಿದ್ದು ನನ್ನ ಕಕ್ಷಿದಾರರು ಸದರಿ ಜಮೀನನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿದ್ದು ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 5 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು, ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧ ಕ್ರಯ ಪತ್ರವನ್ನು ಪಡೆದುಕೊಳ್ಳುತ್ತಾರೆ. ಮುಂದೆ ಬರುವ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಾರಿಪುರ ಗ್ರಾಮದಲ್ಲಿರುವ ಸರ್ವೆ ನಂ 115/10ರಲ್ಲಿ 1 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನಿನ ಪೈಕಿ (ತಹಶೀಲ್ದಾರ್ ರವರ ಕಛೇರಿ ಮೈಸೂರು ತಾಲ್ಲೂಕು ಇವರಿಂದ ಪಡೆದ 11ಇ ನಕ್ಷೆ ಸಂಖ್ಯೆ 26040323410338001ರಲ್ಲಿ ಬ್ಲಾಕ್ 2 ಎಂದು ಗುರುತಿಸಿರುವುದು ವಿಸ್ತೀರ್ಣ 0.30 ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಲಾ ಸ.ನಂ 114ರ ಜಮೀನು, ಪಶ್ಚಿಮಕ್ಕೆ: ಲಾ ಹಿ 2 ಬಿ, ಲಾ ಸ ನಂ. 110ರ ಜಮೀನು, ಉತ್ತರಕ್ಕೆ : ಬ್ಲಾಕ್ 1, ದಕ್ಷಿಣಕ್ಕೆ: ಲಾ ಸ.ನಂ 110ರ ಜಮೀನು.

ಕಕ್ಷಿದಾರರ ಪರ ವಕೀಲರು ಕಕ್ಷಿದಾರರು
ಸಹಿ/- ಶ್ರೀ ಪಾಲಾಕ್ಷ, ವಕೀಲರು, ನಂ.645, ಮೊದಲನೇ ಮಹಡಿ, ನಾರಾಯಣ ಶಾಸ್ತ್ರಿ ರಸ್ತೆ, ಶಾಂತಲ ಚಿತ್ರ ಮಂದಿರ ಹತ್ತಿರ, ಮೈಸೂರು

PUBLIC NOTICE

it is hereby notifed that one **Sri Ramesh Kumar** intends to purchase the schedule property from its present owner **Sri G V Sunil Babu**, how happens to be the bonafide purchaser/absolute owner of the schedule property through a Registered Sale deed executed by Sri V T Ashraf Ali and his family members in his favour vide registration document no MYS-1-13408-2005-06 cd no MYSD 64 of book no 1 dated 27-01-2006, During the course of verification of records, it was found out that sri G V Sunil kumar vendor Sri V T Ashraf Ali who had secured the property through a Registered Partition deed entered between Sri T Abdul Azeez Sahed, Smt. Safia Bi, Smt. V T Noorunisa, Sri V T Mohammed Saleha, Sri V T Mohammed Zackria, Sri V T Mohammed Shafiulla, Smt. V T Safoora Begum and Sri V T Mohammed Yaseen all are rep by GPA holder Sri V T Ashraf Ali in favour of Sri V T Ashraf Ali vide registered document no 1207 of book no 1 dated 26-07-1960 and this deed was subjected to Registered Rectification deed for Partition deed executed by Sri T Abdul Azeez Sahed, Smt. Safia Bi, Smt. V T Noorunisa, Sri V T Mohammed Saleha, Sri V T Mohammed Zackria, Sri V T Mohammed Shafiulla, Smt. V t Safoora Begum and Sri V T Mohammed Yaseen all are rep by GPA holder Sri V T Ashraf Ali in favour of Sri V T Ashraf Ali vide registered document no GAN-1-03584-2005-06 cd no GAND 55 of book no 1 dated 27-12-2005 both these documents having been executed through a general power of attorney and this document is not traceable by the present owner in his file.

So Any person or persons holding the GPA document or having any kind of claim on the foot of teh said GPA or claiming or ascertaining any rights, title, interest, claim or whatsoever in the schedule property or any part there of in any manner holding any claims against the schedule property under any law or has secured attachment from courts or intends to object for sale in favour of my client and the proposed mortgage to made out by my client in favour of his bankers on any legal grounds or by holding the original possession certificate and that of first charge over the property and holding these above mentioned records in original are hereby notified to submit their objections along with documents to the undersigned within 7 days of the issuance of this public notice with all documentary proof.

If no response is received within the said time my client shall proceed with the sale process will be concluded and there after no body whom-so-ever would have any claim what-so-ever and how-so-ever.

SCHEDULE

All that Piece and parcel of the bearing **Property No. 873, New No. L-7,** Situated Siddappaji Temple Street, Kumbarageri, Lashkar Mohall, Mysore Measuring East to West 39.00 feet and North to South 29.00+23.00/2 feet and with building thereon Bounded on: East by: Road, West by: Private Property, North by: Property No. 874, South by: Siddappaji Temple.

S. SURESH B.B.M LL.B
ADVOCATE
No, 974, 7th Main, 3rd Stage, Gokulam, Mysore - 570 002

Date: 09-04-2023